ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳು

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ಲಕ್ಷ್ಮಿಬಾಯಿ ಎಲ್.ವಿ.

ಮಾರ್ಗದರ್ಶಕರು

ಡಾ. ಎ. ಸುಬ್ಬಣ್ಣ ರೈ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳು

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ಲಕ್ಷ್ಮಿಬಾಯಿ ಎಲ್.ವಿ.

ಮಾರ್ಗದರ್ಶಕರು
ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಲಕ್ಷ್ಮಿಬಾಯಿ ಎಲ್.ವಿ., ಇವರು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೮.೧೦.೨೦೧೫

(ಡಾ. ಎ. ಸುಬ್ಬಣ್ಣ ರೈ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಎ. ಸುಬ್ಬಣ್ಣ ರೈ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಲಕ್ಷ್ಮೀಬಾಯಿ. ಎಲ್.ವಿ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೮-೧೨-೨೦೦೬

(ಲಕ್ಷ್ಮಿಬಾಯಿ ಎಲ್.ವಿ.)
ಎಂ.ಫಿಲ್. ಸಂಶೋಧನ ವಿದ್ಯಾರ್ಥಿನಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೧ - ೫

ಅಧ್ಯಾಯ : ೨

ಪ್ರಸ್ತಾವನೆ-ವಿಷಯ ಪ್ರವೇಶ ೬ - ೧೭

೨.೧. ಎಸ್.ವಿ. ಪ್ರಭಾವತಿಯವರ ಜೀವನ ಮತ್ತು ಸಾಹಿತ್ಯ

೨.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ೩

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣಗಳ ಪುನರ್‌ಕಥನ : ಒಂದು ಸ್ಥೂಲ ನೋಟ ೧೮ - ೩೫

ಅಧ್ಯಾಯ : ೪

ಎಸ್.ವಿ. ಪ್ರಭಾವತಿಯವರ ಕಾದಂಬರಿಗಳಲ್ಲಿ ರಾಮಾಯಣದ ಸ್ತ್ರೀ ಪಾತ್ರಗಳು ೩೬ - ೫೪

೪.೧. ಅಹಲ್ಯಾ

೪.೨. ಸೀತಾ

ಅಧ್ಯಾಯ : ೫

ಎಸ್.ವಿ. ಪ್ರಭಾವತಿಯವರ ಕಾದಂಬರಿಗಳಲ್ಲಿ ಮಹಾಭಾರತದ ಸ್ತ್ರೀ ಪಾತ್ರಗಳು ೫೫ - ೮೨

೫.೧. ದ್ರೌಪದಿ

೫.೨. ಕುಂತಿ

೫.೩. ಶಾಕುಂತಲಾ

ಅಧ್ಯಾಯ : ೬

ಸಮಾಪನ ೮೩ - ೮೬

ಅನುಬಂಧ ೮೭ - ೯೧

೧. ಎಸ್.ವಿ. ಪ್ರಭಾವತಿಯವರ ಬದುಕಿನ ಪ್ರಮುಖ ಘಟ್ಟಗಳು

೨. ಆಕರ ಗ್ರಂಥಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರ ಕಾದಂಬರಿ, ಇದು ಒಂದು ಶತಮಾನದ ಇತಿಹಾಸವನ್ನು ಹೊಂದಿದೆ. ಕನ್ನಡ ಕಾದಂಬರಿಗಳು ಸಾಮಾಜಿಕ, ಐತಿಹಾಸಿಕ, ಪತ್ತೇಧಾರಿ ಎಂಬ ವಿವಿಧ ವಸ್ತುಗಳನ್ನು ಆಧರಿಸಿ ರಚನೆಗೊಂಡಿದೆ. ಹಾಗೆಯೇ ಪೌರಾಣಿಕ ಕಾದಂಬರಿಯನ್ನು ಪ್ರತ್ಯೇಕ ವಿಭಾಗವನ್ನಾಗಿ ಗುರುತಿಸಲಾಗಿದೆ. ಪುರಾಣ ಕಥೆಗಳು ಒಂದು ಸಂಸ್ಕೃತಿಯ ಆದಿಮ ಸ್ಥಿತಿಯ ಪಳೆಯುಳಿಕೆಗಳು. ಅವುಗಳು ಪ್ರಜ್ಞಾಪೂರ್ವಕ ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಧರ್ಮ, ಸಾಹಿತ್ಯಗಳ ಮೂಲಕ ಪ್ರಸಾರ ಹೊಂದುತ್ತಾ, ಹೋದಂತೆ ಅಪ್ರಜ್ಞಾಪೂರ್ವಕವಾಗಿಯೂ ಸಮುದಾಯದ ಧಾರ್ಮಿಕ ವಿಧಿ ಆಚರಣೆ, ನಂಬಿಕೆ, ಸಾಮಾಜಿಕ ಸಂಬಂಧಗಳ ಮೂಲಕ ವ್ಯಕ್ತಿಯ ಅನುಭವದ ವಲಯವನ್ನು, ಪ್ರವೇಶಿಸುತ್ತವೆ. ಈ ಪುರಾಣ ಕಥೆಗಳು ವಿವಿಧ ಕಾಲಗತಿಗಳಲ್ಲಿ ಹರಿದುಹೋದಂತೆ ಕಾಲ ಕಾಲಕ್ಕೆ ಅದರ ಸ್ವರೂಪದ ಸ್ಥಿತ್ಯಂತರವನ್ನು ಕಾಣುತ್ತೇವೆ.

ಆಧುನಿಕ ಸಂದರ್ಭದಲ್ಲಿ ಇಂತಹ ಪೌರಾಣಿಕ ವಸ್ತುಗಳನ್ನು ಆಧರಿಸಿ, ವಿವಿಧ ಪ್ರಕಾರಗಳ ಸಾಹಿತ್ಯ ಕೃತಿಗಳು ರಚನೆಯಾಗಿವೆ. ಅವುಗಳನ್ನು ಕಥೆ, ಕಾದಂಬರಿ, ಕಾವ್ಯ ನಾಟಕ, ಹೀಗೆ ವಿಭಾಗಿಸಬಹುದಾಗಿದೆ. ಅವುಗಳಲ್ಲಿ ಕಾದಂಬರಿ ಪ್ರಕಾರವೂ ಪ್ರಮುಖವಾಗಿದೆ. ಹಾಗೆ ರಚನೆಗೊಂಡ ಆಧುನಿಕ ಸಂದರ್ಭದ ಎಲ್ಲ ಸಾಹಿತ್ಯ ಕೃತಿಗಳು ಸಮಕಾಲೀನ ಅವಶ್ಯಕತೆಗಳು, ಪೂರೈಸುತ್ತವೆ ಎಂದು ಹೇಳಲಾಗದು. ಆದರೆ ಕೆಲವು ಆಧುನಿಕ ಸಾಹತ್ಯ ಕೃತಿಗಳು, ಸಮಕಾಲೀನ ಸ್ಥಿತಿ-ಗತಿ, ಅನುಭವ, ಪ್ರಶ್ನೆಗಳಿಗೆ ಸ್ಪಂದಿಸುತ್ತಾ ಪೌರಾಣಿಕ ವಸ್ತುಗಳನ್ನು ಪುನರ್‌ನಿರೂಪಿಸಿವೆ.

ಆಧುನಿಕ ಕಾಲದ ಅನೇಕ ಲೇಖಕರು ರಾಮಾಯಣ, ಮಹಾಭಾರತ, ಭಗವದ್ಗೀತೆ, ವೇದೋಪನಿಷತ್, ಮುಂತಾದ ಪುರಾಣ ಕಥೆಗಳನ್ನು ಕಾದಂಬರಿಗೆ ವಸ್ತುವಾಗಿರಿಸಿಕೊಂಡಿದ್ದಾರೆ. ಆಯ್ದುಕೊಂಡ ವಸ್ತುವಿಗೆ ಅಥವಾ ಸಂಗತಿಗೆ ಕಾದಂಬರಿ ಮೂಲಕ ಸ್ಪಷ್ಟೀಕರಿಸಿದ್ದಾರೆ. ಯಾವುದೇ ಭಾಷೆಯ ಸಾಹಿತ್ಯಕ್ಕೆ ಪುರಾಣಗಳು ಆಕರ ರೂಪದ ಸಾಹಿತ್ಯವಾಗಿದೆ. ಈ ಪುರಾಣಗಳಿಂದ ವಸ್ತುವನ್ನು ಆಯ್ದುಕೊಂಡು ಅದಕ್ಕೆ ಆಧುನಿಕ ಕಾದಂಬರಿಯ ಸ್ವರೂಪವನ್ನು ನೀಡಿ ಪುರಾಣಗಳ ಪ್ರಸಂಗ, ವ್ಯಕ್ತಿಗಳನ್ನು ಪ್ರತಿಮೆ, ಪ್ರತಿಕೃತಿ, ರೂಪಕಗಳಾಗಿ ಬಳಸಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ಇಂತಹ ಪೌರಾಣಿಕ ವಸ್ತು-ಪಾತ್ರಗಳು ಆಧುನಿಕ ಸಂದರ್ಭದ ಕಥೆ,

ಕಾದಂಬರಿ, ಕಾವ್ಯ ನಾಟಕಗಳಲ್ಲಿ ಇಡಿಯಾಗಿ ಅಥವಾ ಬಿಡಿಯಾಗಿ ಪ್ರತಿ ಬಿಂಬಿತವಾಗಿರುವುದನ್ನು ಗುರುತಿಸ ಬಹುದಾಗಿದೆ.

ಕೆಲವು ಕಾದಂಬರಿಗಳು, ಪೌರಾಣಿಕ ವಸ್ತು ಪಾತ್ರಗಳನ್ನು ಯಥಾಸ್ಥಿತಿಯಾಗಿ ಚಿತ್ರಿಸಿದರೆ ಮತ್ತೆ ಕೆಲವು ಕಾದಂಬರಿಗಳು ಆಧುನಿಕ ಪ್ರಜ್ಞೆಗಳ ಪ್ರತೀಕವಾಗಿ ಅಭಿವ್ಯಕ್ತಪಡಿಸುತ್ತವೆ. ಇನ್ನೂ ಕೆಲವು ಕಾದಂಬರಿಗಳು ಪೌರಾಣಿಕ ವಸ್ತು, ಸನ್ನಿವೇಶಗಳನ್ನು ವಿಮರ್ಶಿಸುವ ಅಥವಾ ವಿಡಂಬಿಸುವ ಮಾದರಿಯಲ್ಲೂ ರಚನೆಗೊಂಡಿದೆ.

ಕನ್ನಡದಲ್ಲಿ ಪೌರಾಣಿಕ ಕಾದಂಬರಿಗಳ ಪರಂಪರೆಯನ್ನು ಪ್ರಾರಂಭಿಸಿದವರು, ದೇವುಡು ಮತ್ತು ಸತ್ಯಕಾಮರು. ಇಂತಹ ಪುರಾಣಾಧಾರಿತ ಕನ್ನಡ ಕಾದಂಬರಿಗಳದೇ ಒಂದು ಪುಟ್ಟ ಪರಂಪರೆ ಇದೆ. ವ್ಯಾಸ, ವಾಲ್ಮೀಕಿ, ರಚಿಸಿದ ಕೃತಿಗಳಲ್ಲಿನ ಪಾತ್ರ ಚಿತ್ರಣಗಳನ್ನು ಪಂಪ, ರನ್ನ, ಕುಮಾರವ್ಯಾಸರು ತಮ್ಮ ಕೃತಿಗಳಲ್ಲಿ ವಸ್ತುವನ್ನಾಗಿಸುವ ಕುಸುರಿ ಕೆಲಸಕ್ಕೆ ಒಳಗು ಮಾಡಿದರು. ಮುಂದೆ ಆಧುನಿಕ ಲೇಖಕರಾದ ಎಸ್.ಎಲ್. ಭೈರಪ್ಪನವರ 'ಪರ್ವ', ದೇವುಡು ನರಸಿಂಹಶಾಸ್ತ್ರಿಯವರ, 'ಮಹಾಕ್ಷತ್ರಿಯ', 'ಮಹಾದರ್ಶನ', ಸತ್ಯಕಾಮರ 'ಆಹುತಿ', 'ರಾಜಬಲಿ', 'ವಿಚಿತ್ರವೀರ್ಯ', ಅನುಪಮ ನಿರಂಜನರ 'ಮಾಧವಿ', ಹೆಚ್.ವಿ. ಸಾವಿತ್ರಮ್ಮನವರ 'ಸೀತೆ ರಾಮ ರಾವಣ', ನಳಿನಿ ಮೂರ್ತಿಯವರ 'ಊರ್ಮಿಳಾ ಪ್ರತಿಜ್ಞೆ ಎ. ಪಂಕಜರವರ 'ಬ್ರಹ್ಮರ್ಷಿ', 'ವಿಶ್ವಾಮಿತ್ರ' ಹೀಗೆ ಸುಂದಾರವಾದ ಪೌರಾಣಿಕ ಕಾದಂಬರಿಗಳು ಈ ದಶಕದಲ್ಲಿ ಸಾಲುಗಟ್ಟಿ ಸೃಷ್ಠಿಯಾಗಿದೆ. ಇದೆ ನಿಟ್ಟಿನಲ್ಲಿ ಪೌರಾಣಿಕ ಕಾದಂಬರಿ ಕ್ಷೇತ್ರದಲ್ಲಿ ಆಸಕ್ತಿ ಮೂಡಿಸಿರುವ ಇನೋರ್ವ ಸೃಜನಾತ್ಮಕ ಲೇಖಕಿ ಎಸ್.ವಿ. ಪ್ರಭಾವತಿಯವರು. ಇವರು ತಮ್ಮ ಬರವಣಿಗೆಯ ಹೊಸತನ, ಸರಳತೆ, ಕಲಾತ್ಮಕತೆ, ಸ್ತ್ರೀವಿಶಿಷ್ಟ ದೃಷ್ಟಿಕೋನಗಳಿಂದ ಪ್ರಗತಿ ಪರರಾಗಿದ್ದು, ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಪೂಜ್ಯ ಸ್ಥಾನವಿದೆ. ಸ್ತ್ರೀಯನ್ನು ಆದಿಶಕ್ತಿ ಎಂದು ಕರೆದು ಪೂಜಿಸಿದ್ದಾರೆ. ವಿದ್ಯೆಗೆ, ಬುದ್ಧಿಗೆ, ಅಧಿದೇವತೆಗಳು ಸ್ತ್ರೀಯರೇ ಆಗಿರುವುದು ಭಾರತೀಯ ಪರಂಪರೆಯಲ್ಲಿ ವಿಧಿತವಾಗಿದೆ. ಸ್ತ್ರೀ ಒಂದು ಮನೆಯಲ್ಲಿ ಮಗುವಾಗಿ ಮತ್ತೊಂದು ಮನೆ ಬೆಳಗುವ ಮೂಲಕ ಎರಡೂ ಕಡೆಗೂ ಕೀರ್ತಿ ತರುವ ಗೌರವಕ್ಕೆ ಪಾತ್ರವಾಗಿರುವಂತಹವಳು. ತನ್ನ ತ್ಯಾಗ, ನಿಷ್ಕಲ್ಮಷ ಪ್ರೀತಿ, ಮಮತೆ ವಾತ್ಸಲ್ಯಗಳಂತೆಯೇ ತನ್ನ ಕುಟಿಲತೆಗಳಿಂದಲೂ ಮೆರೆಯುವ ಸ್ತ್ರೀಯರ, ಆದರ್ಶಗಳನ್ನು ಬಿಂಬಿಸುವ ಅನೇಕ ಪುರಾಣ-ಪುಣ್ಯಕಥೆಗಳು ನಮಗೆ ಗೋಚರಿಸುತ್ತವೆ. ಹಾಗೆಯೇ ಒಂದು ಸಾಮ್ರಾಜ್ಯದ ಉನ್ನತಿಗೆ ಕಾರಣಳಾದಂತೆ ಅವನತಿಗೂ ಅಡಿಗಲ್ಲಾಗುವ ಸಾಮರ್ಥ್ಯ ಅವಳಲ್ಲಿದೆ ಎಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಇಂತಹ ಸ್ತ್ರೀಯು ಮಹಾಭಾರತ ಮತ್ತು ರಾಮಯಣದ ವಾರಿಧಿಯಲ್ಲಿ ಮುಳುಗೆದ್ದು ನಿಂತ ನೆಲಯನ್ನು ನಮ್ಮ ಸಾಹಿತ್ಯ ಕೃತಿಗಳು ಈಗಾಗಲೇ ಮರುವ್ಯಾಖ್ಯಾನಕ್ಕೆ ಒಳಪಡಿಸಿವೆ. ಅಂತಹ ಮರುವ್ಯಾಖ್ಯಾನಗಳಲ್ಲಿ ಸೃಜನಶೀಲ ವ್ಯಾಖ್ಯಾನಗಳು ಇರುವಂತೆ ಸೃಜನೇತರ ವ್ಯಾಖ್ಯಾನಗಳು ಲಭ್ಯವಿವೆ.

ಆಧುನಿಕ ಸಂದರ್ಭದ ಪೌರಾಣಿಕ ಕಾದಂಬರಿಗಳು ಕಾಲಕ್ಕೆ ಅನುಗುಣವಾಗಿ ಸೃಜನಶೀಲ ವ್ಯಾಖ್ಯಾನಕ್ಕೊಳಗಾಗಿ ಮಹತ್ವ ಪಡೆದಿವೆ. ಹೀಗಾಗಲೇ ಗಮನಿಸಿದಂತೆ ಎಸ್.ವಿ. ಪ್ರಭಾವತಿಯವರು ಕನ್ನಡದ ಈ ಬಗೆಯ ಸೃಜನಶೀಲ ಲೇಖಕಿಯರಲ್ಲಿ ಒಬ್ಬರು. ಅವರು ಕೂಡ ವಿವಿಧ ಪುರಾಣಗಳ ವಸ್ತು ಪಾತ್ರಗಳನ್ನು ಆಧರಿಸಿ ಹಲವು ಕಾದಂಬರಿಗಳನ್ನು ರಚಿಸಿದ್ದಾರೆ. ಆ ಕಾದಂಬರಿಗಳು ಪುರಾಣಗಳ ವಸ್ತು, ಪಾತ್ರ, ಸನ್ನಿವೇಶ ಗಳನ್ನು ಹೇಗೆ ನಿರ್ವಹಿಸಿವೆ ಎಂಬುದನ್ನು ಗುರುತಿಸಿ ವಿಶ್ಲೇಷಿಸುವುದೇ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಪುರಾಣವನ್ನು ಒಪ್ಪಿಕೊಳ್ಳುವ ಅಥವಾ ವಿಮರ್ಶಿಸುವ ಹಿನ್ನೆಲೆಯಲ್ಲಿ ಆಯಾ ಕಾದಂಬರಿಗಳ ವಸ್ತು, ತಂತ್ರ, ಆಶಯಗಳು ಕಂಡುಬರುತ್ತವೆ. ಮಹಿಳಾ ಬರಹಗಾರರಾದ ಎಸ್.ವಿ. ಪ್ರಭಾವತಿಯವರ ದೃಷ್ಟಿಕೋನ ದಲ್ಲಿ ಪುರಾಣದ ಪಾತ್ರ ಅಥವಾ ಸನ್ನಿವೇಶ ಪಡೆದಿರುವ ಹೊಸ ಹಾಗೂ ವಿಭಿನ್ನ ಸ್ವರೂಪವನ್ನು ತಿಳಿದು ಕೊಳ್ಳುವುದು ಇಲ್ಲಿ ಮುಖ್ಯವಾಗುತ್ತದೆ.

ಕಾದಂಬರಿಗಳನ್ನು ರೂಪಿಸಿಕೊಳ್ಳಲು ಸಾಕಷ್ಟು ಪಾತ್ರಗಳು ಇದ್ದರೂಸಹ, ಸ್ತ್ರೀ ಪಾತ್ರಗಳನ್ನು ಮಾತ್ರ ಕೇಂದ್ರವಾಗಿಟ್ಟುಕೊಂಡು ಒಂದು ಸಮಗ್ರ ಅಧ್ಯಯನ ಹಾಗೂ ಸಮಗ್ರ ಸಾಹಿತ್ಯದ ಓದು, ಚಿಂತನೆಗಳು ಕನ್ನಡ ಸಾಹಿತ್ಯಕ್ಕೆ ಉಪಯುಕ್ತವಾಗಿವೆ. ಆದ್ದರಿಂದ ಲೇಖಕರು ಪುರಾಣಗಳ ಸ್ತ್ರೀ ಪಾತ್ರಗಳನ್ನು ಕೇಂದ್ರವಾಗಿಸಿ ಕೊಂಡು ಕಾದಂಬರಿಗಳನ್ನು ರಚಿಸಿರುವುದು ವಿಶಿಷ್ಟವೆನ್ನಿಸುತ್ತದೆ.

ಲೇಖಕಿಯ ಕೃತಿಗಳು ಮುಖ್ಯವಾಗಿ ಪೌರಾಣಿಕ ಸ್ತ್ರೀ ಪಾತ್ರ ಕೇಂದ್ರಿತವಾಗಿರುವುದರಿಂದ, ಸಹಜ ವಾಗಿಯೇ ಈ ಅಧ್ಯಯನ ಕೂಡ ಪುರಾಣಗಳ, ಸ್ತ್ರೀ ಪಾತ್ರಗಳ ಪುನರ್‌ಸೃಷ್ಟಿಯನ್ನು ಗುರುತಿಸುವತ್ತ ಗಮನಹರಿಸುತ್ತದೆ. ಒಟ್ಟಾರೆ ಅಧ್ಯಯನವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ, ಅಧ್ಯಾಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿವರಿಸಲಾಗುವುದು.

ಪ್ರಸ್ತಾವನೆ ವಿಷಯ ಪ್ರವೇಶ ಎಂಬ ಎರಡನೇ ಅಧ್ಯಯದಲ್ಲಿ ಎಸ್.ವಿ. ಪ್ರಭಾವತಿಯವರ ಜೀವನ ಮತ್ತು ಸಾಹಿತ್ಯ ಹಾಗೂ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಡೆದ ಇದುವರೆಗಿನ ಅಧ್ಯಯನಗಳನ್ನು ಸ್ಥೂಲವಾಗಿ ವಿವರಿಸಲಾಗುವುದು.

ಮೂರನೇ ಅಧ್ಯಾಯದಲ್ಲಿ ಆಧುನಿಕ, ಸಾಹಿತ್ಯದಲ್ಲಿ ಪೌರಾಣಿಕ ವಸ್ತು, ಪಾತ್ರ, ಸನ್ನಿವೇಶಗಳು ಹೇಗೆ ಪುನರ್ ಅಭಿವ್ಯಕ್ತಗೊಂಡಿವೆ. ಎಂಬುದನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗುವುದು.

ನಾಲ್ಕು ಮತ್ತು ಐದನೇ ಅಧ್ಯಯಗಳಲ್ಲಿ ಕ್ರಮವಾಗಿ ರಾಮಾಯಣ ಮತ್ತು ಮಹಾಭಾರತದ ವಸ್ತು, ಪಾತ್ರ, ಸನ್ನಿವೇಶಗಳನ್ನು ಆಧರಿಸಿ, ಪ್ರಭಾವತಿಯವರು ರಚಿಸಿರುವ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸ ಲಾಗುವುದು.

ಕೊನೆಯ ಸಮಾಪನದ ಅಧ್ಯಾಯದಲ್ಲಿ, ಅಧ್ಯಯನದ ಒಟ್ಟಾರೆ ಫಲಿತಗಳನ್ನು, ಕ್ರೋಢೀಕರಿಸಲಾಗುವುದು. ಅನುಬಂಧದಲ್ಲಿ ಬಳಸಿಕೊಂಡ ಆಕರಗಳ ಸೂಚಿಯನ್ನು ಒದಗಿಸಲಾಗುವುದು. ಸೀಮಿತ ಕಲಾವಧಿಯಲ್ಲಿ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ, ಪ್ರಸ್ತುತ ನಿಬಂಧವನ್ನು ಸಿದ್ಧಪಡಿಸಿರುವುದರಿಂದ ಇಲ್ಲಿ ಸಾಕಷ್ಟು ಮಿತಿಗಳಿವೆ. ಅಂತಹ ಮಿತಿಗಳ ನಡುವೆಯೂ ಆಧುನಿಕ ಕನ್ನಡದ ಪ್ರಮುಖ ಲೇಖಕಿಯಾದ ಎಸ್.ವಿ. ಪ್ರಭಾವತಿಯವರು ಪುರಾಣಗಳ ಸ್ತ್ರೀಪಾತ್ರಗಳಿಗೆ ಹೇಗೆ ಮರುಹುಟ್ಟು ನೀಡಿದ್ದಾರೆ ಎಂಬುದನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿ ನಡೆಸಲಾಗಿದೆ.

• • •

ಅಧ್ಯಾಯ ಎರಡು

ಪ್ರಸ್ತಾವನೆ-ವಿಷಯ ಪ್ರವೇಶ

೨.೧. ಎಸ್.ವಿ. ಪ್ರಭಾವತಿಯವರ ಜೀವನ ಮತ್ತು ಸಾಹಿತ್ಯ

೨.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಪ್ರಸ್ತಾವನೆ-ವಿಷಯ ಪ್ರವೇಶ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡು ಬರುವ ಅನೇಕ ಮಹಿಳಾ ಬರಹಗಾರ್ತಿಯರಲ್ಲಿ ಎಸ್.ವಿ. ಪ್ರಭಾವತಿಯವರು ಒಬ್ಬರು. ಇವರು ತಮ್ಮ ಕೃತಿಗಳಲ್ಲಿ ಹೆಚ್ಚಾಗಿ ಸ್ತ್ರೀ ಪಾತ್ರಗಳನ್ನೇ ಕೇಂದ್ರೀಕರಿಸಿರುವುದನ್ನು ನೋಡಬಹುದು. ಪ್ರಭಾವತಿಯವರು ತಮ್ಮ ಕಾದಂಬರಿ ಮತ್ತು ಸಂಶೋಧನಾ ಪ್ರಬಂಧಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ವಸ್ತುವನ್ನು ಆಯ್ದುಕೊಂಡು ತಮ್ಮದೇ ಆದ ನೆಲೆಗಟ್ಟಿನಲ್ಲಿ ಚರ್ಚಿಸಿರುವುದು ಕಾಣಬಹುದು. ಅಲ್ಲದೆ ಹಲವು ಕೃತಿಗಳು, ಪ್ರಬಂಧಗಳು ಹಾಗೂ ಕವನ ಸಂಕಲನಗಳನ್ನು ವಿಮರ್ಶೆಗೊಳಪಡಿಸಿರುವುದನ್ನು ನೋಡಬಹುದು.

೨.೧. ಪ್ರಭಾವತಿಯವರ ಜೀವನ ಮತ್ತು ಸಾಹಿತ್ಯ

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಸ್ತ್ರೀವಾದಿ ಬರಹಗಾರರಾದ ಎಸ್.ವಿ. ಪ್ರಭಾವತಿಯವರು ೨೫.೦೭.೧೯೫೦ರಲ್ಲಿ ಮಂಡ್ಯ ಜಿಲ್ಲೆಯ ಹೊಸಹೊಳಲು ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಮುಗಿಸಿದರು. ಬಿ.ಎ. ಪದವಿಯನ್ನು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ, ಎಂ.ಎ. ಪದವಿಯನ್ನು ಮಾನಸಗಂಗೋತ್ರಿಯಲ್ಲಿ, ಪಿಎಚ್.ಡಿ. ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮುಗಿಸಿದರು. ಭಾರತೀಯ ಸಂಸ್ಕೃತಿ ವಿದ್ಯಾಪೀಠ ಕಾಲೇಜಿನಲ್ಲಿ ೧೯೭೩ ರಿಂದ ಇಲ್ಲಿಯವರೆಗೆ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿ ದಿಸೆಯಲ್ಲೇ ಕವನ ಬರೆಯಲು ಪ್ರಾರಂಭಿಸಿದ ಪ್ರಭಾವತಿಯವರು ಕವನ, ಕಾದಂಬರಿ, ವಿಮರ್ಶಾ ಲೇಖನಗಳನ್ನು ರಚಿಸಿದ್ದಾರೆ. 'ಮಳೆ ನಿಂತ ಮೇಲಿನ ಮರ' ಇದು ಇವರ ಮೊದಲ ಕವನ ಸಂಕಲನವಾಗಿದೆ. ಅಲ್ಲದೆ ಹಲವಾರು ಕವನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಕನ್ನಡ ಸಾಹಿತ್ಯದಲ್ಲಿ ದ್ರೌಪದಿ' ಇವರ ಪಿಎಚ್.ಡಿ. ಮಹಾಪ್ರಬಂಧ. ಇದನ್ನು ೧೯೯೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ.

ಸ್ತ್ರೀವಾದಿ ಚಿಂತನೆಗಳಿಂದ ವಿಮರ್ಶೆಗಳಿಂದ ಪ್ರಭಾವತಿಯವರು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರಾಗಿದ್ದಾರೆ. 'ರಾಮಾಯಣ', 'ಮಹಾಭಾರತದಂಥ' ಪೌರಾಣಿಕ ಕಾದಂಬರಿಗಳಲ್ಲಿ ಅಸ್ತಿತ್ವ ಕಳೆದುಕೊಂಡು, ಪುರುಷಪ್ರಧಾನ ಸಮಾಜದ ಮೌಲ್ಯಗಳಿಗೆ ತಕ್ಕಂತೆ ಬದುಕುವ ಪಾತ್ರಗಳಿಗೆ ಅವರು ತಮ್ಮ ಕೃತಿಗಳ ಮೂಲಕ ಸ್ವತಂತ್ರ್ಯ ಅಭಿವ್ಯಕ್ತಿಯನ್ನು ನೀಡಿದ್ದಾರೆ. 'ದ್ರೌಪದಿ', 'ಕುಂತಿ', 'ಶಕುಂತಲಾ',

'ಅಹಲ್ಯಾ', 'ಸೀತಾ', 'ಯಶೋಧರ', 'ಗಾರ್ಗಿ', ಇವು ಪ್ರಭಾವತಿಯವರ ಪ್ರಮುಖ ಕಾದಂಬರಿಗಳು. ಸ್ತ್ರೀವಾದಿ ನೆಲೆಯಲ್ಲಿ ರಚನೆಯಾದ 'ದ್ರೌಪದಿ'ಯು ಸೃಜನಶೀಲ ಕಾದಂಬರಿಯಾಗಿ ವಿಶಿಷ್ಟ ಅರ್ಥವನ್ನು ಪಡೆದುಕೊಂಡಿದೆ. ಇಲ್ಲಿ ಪುರಾಣದ ದ್ರೌಪದಿಯ ಪಾತ್ರವನ್ನು ವಾಸ್ತವ ಬದುಕಿನೊಂದಿಗೆ ಸಮೀಕರಿಸಿ ಕೃತಿಯನ್ನು ರಚಿಸಿದ್ದಾರೆ. ದ್ರೌಪದಿ ಕಾದಂಬರಿಯು ೧೯೯೭ರ ಅತ್ತಿಮಬ್ಬೆ ಪ್ರಶಸ್ತಿಗೆ ಭಾಜಕವಾದ ಕೃತಿಯಾಗಿದೆ. ಮಹಾಭಾರತದ ಕೇಂದ್ರಬಿಂದುವಾಗಿರುವ ದ್ರೌಪದಿಯ ಬದುಕು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಅವಳ ಬದುಕು ಕೊನೆಯವರೆಗೂ ತೂಗುಕತ್ತಿಯ ಬುಡದಲ್ಲೇ ಹೊಯ್ದಾಡುತ್ತದೆ. ಸ್ವಯಂವರದಲ್ಲಿ ಅರ್ಜುನನನ್ನು ಮಾತ್ರ ವರಿಸುತ್ತಾಳೆ. ಆದರೆ ಕೊನೆಗೆ ಕುಂತಿಯ ಬಾಯಿ ತಪ್ಪಿನಿಂದ ಅವಳ ಪಾಲಿಗೆ ಐವರು ಗಂಡಂದಿರು ಬರುತ್ತಾರೆ. ಅಲ್ಲಿಂದ ಅವಳ ಬದುಕಿನ ಚಿತ್ರಣವೇ ಬದಲಾಗುತ್ತದೆ. ಪುರಾಣದ ದ್ರೌಪದಿಯ ಬದುಕನ್ನು ಆಧುನಿಕ ದೃಷ್ಟಿಕೋನದಿಂದ ಮರುಕಟ್ಟುವ ಪ್ರಯತ್ನ, ಪ್ರಸ್ತುತ ಕಾದಂಬರಿಯಲ್ಲಿ ಇದೆ. ಪಗಡೆಯಾಟ, ಕೌರವರ ಅಟ್ಟಹಾಸ, ವಸ್ತ್ರಾಪಹರಣ, ವನವಾಸ, ಅಜ್ಞಾತವಾಸ ಹೀಗೆ ನೂರೆಂಟು ಸವಾಲುಗಳಿಗೆ ಅವಳ ಬದುಕು ಸಿಲುಕುತ್ತದೆ. 'ಪಂಚಪತಿತ್ವದ' ಸಮಸ್ಯೆ ಪ್ರಾರಂಭವಾಗಿ ದ್ರೌಪದಿಯ ಪಾತ್ರ ತನ್ನ ಮುಖ್ಯ ತಿರುವನ್ನು ಪಡೆದುಕೊಳ್ಳುತ್ತದೆ. ಮಹಾಭಾರತ ಕತೆಯ ಚೌಕಟ್ಟಿನಲ್ಲಿಯೇ 'ದ್ರೌಪದಿ'ಯನ್ನು ನಿಲ್ಲಿಸಿ, ಅವಳ ಭಾವನೆಗಳನ್ನು ಅಂತರಂಗದ ತುಮುಲಗಳನ್ನು, ಬದುಕಿನ ಚಿತ್ರಣವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಲೇಖಕಿ ಕಟ್ಟಿಕೊಟ್ಟಿದ್ದಾರೆ.

'ಕುಂತಿ' ಸ್ತ್ರೀವಾದಿ ದೃಷ್ಟಿಕೋನವುಳ್ಳ ಪ್ರಭಾವತಿಯವರ ಇನ್ನೊಂದು ಪೌರಾಣಿಕ ಕಾದಂಬರಿ. ವಾಸ್ತವ ಬದುಕಿನ ಮಹಿಳೆಯರ ಸ್ಥಿತಿ-ಗತಿಯನ್ನೇ ಪುರಾಣ ಪಾತ್ರದೊಂದಿಗೆ ಸಮೀಕರಿಸಿ ಈ ಕಾದಂಬರಿಯನ್ನು ರಚಿಸಿದ್ದಾರೆ. ಅರಮನೆಯಲ್ಲಿ ವೈಭವದಿಂದ ಜೀವನ ನಡೆಸಿದ ಕುಂತಿಯು ಕರ್ಣನನ್ನು ಪಡೆಯುತ್ತಾಳೆ. ಇವಳು ಕನ್ಯೆಯಾಗಿದ್ದರಿಂದ ಮಗುವನ್ನು ರಾಧೆಯ ಕೈಗೆ ಒಪ್ಪಿಸುತ್ತಾಳೆ. ಸಮಾಜದ ನಿಂದನೆಗಳಿಗೆ ಹೆದರಿ ತನ್ನ ಅಸಹಾಯಕ ಸ್ಥಿತಿಯಿಂದ ನಿಜವನ್ನು ಒಪ್ಪಿಕೊಳ್ಳದೇ ಮನಸ್ಸಿನಲ್ಲಿಯೇ ದುಃಖಪಡುತ್ತಾಳೆ. ಪಾಂಡುರಾಜನನ್ನು ಮದುವೆಯಾಗುತ್ತಾಳೆ. ಅವನ ಜೊತೆ ಕಾಡಿಗೆ ಹೋದ ಮೇಲೆ ಅವನು ತನ್ನ ಬಯಕೆಗಳಿಗೆ ಕಡಿವಾಣ ಹಾಕದೇ ಸಾಯುತ್ತಾನೆ. ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಕುಂತಿ ಹಸ್ತಿನಾವತಿಗೆ ಬಂದರೆ ಅವಳಿಗೆ ಅಲ್ಲೊಂದು ನರಕ ಕಾದಿರುತ್ತದೆ. ದುರ್ಯೋಧನ ನಿರ್ಮಿಸಿರುವ ನರಕದಿಂದ ಮತ್ತೆ ಅರಣ್ಯಕ್ಕೆ ಹೋಗುತ್ತಾಳೆ. ಮತ್ಸ್ಯಯಂತ್ರ ಭೇದನ ಮಾಡಿದ ಅರ್ಜುನನ್ನು ಮದುವೆಯಾಗಬೇಕಿದ್ದ ದ್ರೌಪದಿಗೆ, ಕುಂತಿಯ ಬಾಯಿ ತಪ್ಪಿನಿಂದ ಐವರನ್ನು ಹಂಚಿಕೊಳ್ಳುವಂತೆ ತಿಳಿಸುತ್ತಾಳೆ. ಹಸ್ತಿನಾವತಿಗೆ ಬಂದ ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜಸೂಯಾಗ ಮಾಡುತ್ತಾರೆ. ದುರ್ಯೋಧನನಿಗೆ ಅವಮಾನ ವಾದದ್ದು, ದ್ರೌಪದಿ ನಕ್ಕಿದ್ದರಿಂದ ಅದರ ಸೇಡಿಗಾಗಿ ದುರ್ಯೋಧನ ಮೋಸದ ಪಗಡೆಯಾಡಿ ಪಾಂಡವರನ್ನು ಕಾಡಿಗೆ ಕಳಿಸುತ್ತಾನೆ. ವನವಾಸ ಅಜ್ಞಾತವಾಸ ಮುಗಿಸಿ ಬಂದರೂ ಅವರಿಗೆ ರಾಜ್ಯ ಕೊಡದೇ ಯುದ್ಧ ಮಾಡಿ ಸಾಯುತ್ತಾನೆ. ಈ ಅವಧಿಯಲ್ಲಿ ವಿಧುರನ ಮನೆಯಲ್ಲಿದ್ದ ಕುಂತಿಯ ಮನಸ್ಸಿನಲ್ಲಾದ ಅಸಹನೆ, ಅಸಹಾಯಕತೆ, ದುಗುಡದ ಬಗ್ಗೆ ಕಾದಂಬರಿ ವಿವರಿಸುತ್ತದೆ. ಮಹಾಭಾರತದಲ್ಲಿಯೂ ಅವಳು ಬೆಟ್ಟಗಳಷ್ಟು

ಕಷ್ಟಗಳನ್ನು ಹೊರುವಂತಹ, ದುರಂತದ ಹೆಣ್ಣಾಗಿದ್ದಾಳೆ. ಇಲ್ಲಿ ಕುಂತಿ ಮಂತ್ರದಿಂದ ಮಕ್ಕಳನ್ನು ಪಡೆಯುವುದಿಲ್ಲ. ಮೊದಲ ಮಗ ದೂರ್ವಾಸರಿಂದ ಉಳಿದವರು 'ದೇವ ಜನಾಂಗ'ದ ನಿಯೋಗದಿಂದ' ಹುಟ್ಟಿದವರು. ಈ ಸಂಬಂಧಗಳ ಮೂಲಕ ಕುಂತಿಯ ಕಾಮ, ಒಂಟಿತನ, ವೈಧವ್ಯ, ದುಃಖಗಳೆಲ್ಲ ಇಲ್ಲಿ ಹೊರಸೂಸಿದೆ.

ಕಾಳಿದಾಸನಿಂದ ಜಗತ್ಪ್ರಸಿದ್ಧಳಾದ 'ಶಾಕುಂತಲೆ'ಯ ಅಂತರಂಗವನ್ನು ಲೇಖಕಿ ಬಿಡಿಸಿದ್ದಾರೆ. ಪೌರಾಣಿಕ ಪ್ರಸಂಗಗಳನ್ನು ಆಧುನಿಕ ಸಂವೇದನೆಯ ಮೂಲಕ ಗ್ರಹಿಸಿ ಪುನರ್‌ಸೃಷ್ಟಿಸಿದ್ದಾರೆ. ಇದರಿಂದಾಗಿ ಸಮಕಾಲೀನ ಸಾಹಿತ್ಯದಲ್ಲಿ ಹೊಸ ಅವಿಷ್ಕಾರಗಳೇ ನಡೆಯಿತು. 'ಅಪ್ಪ ಹಾಕಿದ ಆಲದ ಮರ'ದಂತಿದ್ದ ಕೆಲವು ಮೂಢ ಆಚರಣೆಗಳ, ಮಿಥ್‌ಗಳ ಮೇಲೆ ಹೊದಿಸಿದ ಗೊಡ್ಡು ಹೊದಿಕೆಯನ್ನು ಕೊಡವಿ ಹಾಕಿದ್ದಾರೆ. ಯುಗಮಾನಕ್ಕೆ ಚಿಂತನಶೀಲತೆಗೆ ತಕ್ಕಂತೆ ಹಿಂದಿನ ಹಲವು ಸಂಗತಿಗಳನ್ನು ತಮ್ಮದೇ ಆದ ದೃಷ್ಟಿಕೋನದಲ್ಲಿ ನೋಡಿದ್ದಾರೆ. ಶಾಕುಂತಲಾ ಕಾದಂಬರಿಯು ಮೂಲಕತೆಯ ಕೆಲ ಪ್ರಸಂಗಗಳನ್ನು ಯಥವತ್ತಾಗಿರಿಸಿ ಶಕುಂತಲೆಯನ್ನು ಸಾಮಾನ್ಯ ಹೆಣ್ಣಾನಾಗಿ ಸೃಷ್ಟಿಸಿದೆ. ಶಕುಂತಲೆಯು ದುಷ್ಯಂತ ಮಹಾರಾಜನ ಮೋಹಕ್ಕೆ ಬಲಿಯಾಗಿ ಗಾಂಧರ್ವ ವಿವಾಹವಾಗುತ್ತಾಳೆ. ಇವಳ ವೃತ್ತಾಂತ ತಿಳಿದ ಕಾರಣ ದುಷ್ಯಂತನು ಅವಳನ್ನು ಮರೆತಂತೆ ನಟಿಸುತ್ತಾನೆ. ಶಕುಂತಲ ಪಾತ್ರವನ್ನು ಆಧುನಿಕ ಛಾಯೆಯಲ್ಲಿ ನೋಡುವಂತಹ ಹೊಸ ರೂಪವನ್ನು ಲೇಖಕಿ ಕಟ್ಟಿಕೊಟ್ಟಿದ್ದಾರೆ. ಸ್ತ್ರೀ ತಾನು ಅನುಭವಿಸುವ ವಿವಿಧ ಸಮಸ್ಯೆಗಳು, ಅವಳ ನೋವು-ನಿರಾಶೆಗಳು, ಬದುಕಲು ಅವಳು ನಡೆಸುವ ಪ್ರಯತ್ನಗಳನ್ನು ಈ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಗಿದ್ದ ಅಪ್ರಧಾನತೆಯನ್ನು ನೋಡಬಹುದು. ಆಕೆ ನಿರಂತರವಾಗಿ ಅನುಭವಿಸಿದ ದೈಹಿಕ ಮಾನಸಿಕ ದೌರ್ಜನ್ಯಗಳ ಅಮಾನವೀಯ ಸ್ಥಿತಿಯನ್ನು, ಸ್ತ್ರೀವಾದದ ನೆಲೆಯಲ್ಲಿ ಮಾನವೀಯ ದೃಷ್ಟಿಯಿಂದ ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

ಭಾರತೀಯ ಪರಂಪರೆಯಲ್ಲಿ ಹಲವು ರಾಮಾಯಣದ ಕಥೆಗಳಿರುವುದರಿಂದ ಅವು ವಿಭಿನ್ನ ಕಥಾನಕಗಳನ್ನು ಹೊಂದಿರುತ್ತವೆ. ಅಲ್ಲದೆ ಇವು ವಿಶ್ಲೇಷಣೆ, ಸಂಕೀರ್ಣತೆಯನ್ನು ಪಡೆದಿರುತ್ತದೆ. ಪುರಾಣದ ಸೀತೆಯು ಅಂದು ಪ್ರತಿಭಟಿಸದೇ ರಾಮ-ರಾವಣನಿಂದ ಶೋಷಿತಳಾಗಿ ಮೌನ ತಾಳಿದ್ದಳು. ಇಲ್ಲಿ ಕಾದಂಬರಿಯ ಸೀತೆಯು ಮೌನವನ್ನು ಮುರಿದು ಪುರುಷ ವ್ಯವಸ್ಥೆಯನ್ನು ಪ್ರತಿಭಟಿಸುತ್ತಾಳೆ. ರಾಮನ ಒಳಗನ್ನು ಚೆನ್ನಾಗಿ ಅರಿತಿದ್ದ ಸೀತೆಯ ಮೇಲೆ ಪರಿಸ್ಥಿತಿ ಸುತ್ತಲಿನ ಪರಿಸರದ ಒತ್ತಡಗಳು ಬೀರಿರುವ ಪ್ರಭಾವ ಆಕೆಯ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ರಾಮ, ರಾವಣನೊಂದಿಗಿನ ಆಕೆಯ ಸಂಬಂಧದ ಬಗ್ಗೆ ಪ್ರಶ್ನಿಸಿದಾಗ ಇಲ್ಲಿ ಆಕೆಯೂ ರಾಮನ ಚಾರಿತ್ರ್ಯದ ಬಗ್ಗೆ ಅಷ್ಟೇ ಕಟುವಾಗಿ ಪ್ರಶ್ನಿಸುತ್ತಾಳೆ. ಕೌಸಲ್ಯೆಯೊಂದಿಗೆ ಮಾತನಾಡುವ ಸಂದರ್ಭದಲ್ಲಿ ಆಕೆಯೂ ಕಾಡಿನ ದುಷ್ಟ ಮೃಗಗಳಿಗಿಂತಲೂ ಅಯೋಧ್ಯೆಯ ದುಷ್ಟಮೃಗಗಳೇ ಹೆಚ್ಚು ಅಪಾಯಕಾರಿ ಎನ್ನುತ್ತಾಳೆ. ಆಕೆಯ ಪ್ರತಿಭಟನೆಯ ಅಂಶಗಳನ್ನು ಕಾದಂಬರಿಯ ಆರಂಭದಿಂದಲೇ ನೋಡಬಹುದು.

ಪೌರಾಣಿಕ ಸ್ತ್ರೀಪಾತ್ರಗಳನ್ನು ಆರಿಸಿಕೊಂಡು, ಆದಷ್ಟು ಸಮಕಾಲೀನ ಮನಸ್ಸಿನಿಂದ ಗ್ರಹಿಸಿ, ಆ ಪಾತ್ರಗಳ ಜೀವನವನ್ನು ಪುನರ್‍ರಚಿಸುವುದು ಪ್ರಭಾವತಿಯವರ ಕಾದಂಬರಿಗಳ ಮುಖ್ಯ ಉದ್ದೇಶವಾಗಿರುತ್ತದೆ. 'ಅಹಲ್ಯಾ' ಕಾದಂಬರಿಯು ಕೂಡ ಇಂಥ ನೆಲೆಯಲ್ಲಿಯೇ ರೂಪುಗೊಂಡಿರುವುದು. ಅಹಲ್ಯೆ ತನ್ನ ಸುಖ-ದುಃಖಗಳನ್ನು ಹೇಳುವ ಸಾಮಾನ್ಯ ಮಹಿಳೆಯಾಗಿ ನಮ್ಮೆದಿರು ನಿಂತು ತನಗಾದ ಅನ್ಯಾಯದ ಬಗ್ಗೆ ನ್ಯಾಯ ಕೇಳುತ್ತಾಳೆ. ಪು.ತಿ.ನ. ಅವರ 'ಅಹಲ್ಯೆ' ಗೀತನಾಟಕದಲ್ಲಿ ಮತ್ತು ಕುವೆಂಪುರವರ 'ರಾಮಾಯಣ ದರ್ಶನಂ'ನಲ್ಲಿ ಅಹಲ್ಯೆಯ ಪಾತ್ರದ ಆಯಾಮ ವಿಸ್ತಾರವಾಗಿರುವುದು ಕಂಡು ಬರುತ್ತದೆ. ಅಹಲ್ಯೆ ಎದುರಿಸುವ ಸಮಸ್ಯೆಯೆಂದರೆ ಗೌತಮನೊಂದಿಗೆ ವಿವಾಹವಾದರೂ, ಆತ ಅವಳನ್ನು ಸುಖಪಡಿಸುವುದಿಲ್ಲ. ಕೇವಲ ತನ್ನ ಸಾಧನೆಯಲ್ಲಿ ಲೀನನಾಗುತ್ತಾನೆ. ಗಂಡನಿದ್ದು ಅವನ ಸಾಮೀಪ್ಯ ಸಿಗದ ಒಂಟಿ ಜೀವನ ಅಹಲ್ಯೆಯದು. ಈ ಪಾತ್ರದ ಮೂಲಕ ಆಧುನಿಕ ಮಹಿಳೆಯ ಕೆಲವೊಂದು ಸಮಸ್ಯೆಗಳನ್ನು ಚಿತ್ರಿಸಿದ್ದಾರೆ.

ಸಮಕಾಲೀನ ಸಾಹಿತ್ಯ ಧೋರಣೆಯ ಸಂವೇದನೆಗಳ ಹಿನ್ನೆಲೆಯಲ್ಲಿ 'ದ್ರೌಪದಿ', 'ಅಹಲ್ಯಾ', 'ಕುಂತಿ', 'ಸೀತೆ', 'ಶಕುಂತಲಾ' ಪಾತ್ರಗಳನ್ನು ಪ್ರಭಾವತಿಯರು ವ್ಯಾಖ್ಯಾನಿಸತೊಡಗಿದ್ದಾರೆ. ಅದರ ಮುಂದುವರೆದ ಭಾಗವಾಗಿ ಯಶೋಧರ ಕಾದಂಬರಿ ಕಾಣಿಸುತ್ತದೆ. ಬುದ್ಧನಾಗುವ ಮುಂಚೆಯೇ ಆ ಸಿದ್ಧಾರ್ಥನ ಪತ್ನಿಯಾದ ಯಶೋಧರೆಯ ಕಥೆ ಇದಾಗಿದೆ. ಬುದ್ಧನ ಕುರಿತ ಬಹುತೇಕ ಎಲ್ಲ ಕೃತಿಗಳಲ್ಲೂ ಆತನ ಪತ್ನಿ ಯಶೋಧರೆಯ ಕೇವಲ ಪ್ರಸ್ತಾವ ಮಾತ್ರ ಇರುತ್ತದೆ. ಆದರೆ ಆಕೆಯ ಸಂಕಟ ದುಃಖಗಳ ವಿಸ್ತಾರ ನಿರೂಪಣೆ ಕಾಣಿಸುವುದಿಲ್ಲ. ಪ್ರಭಾವತಿಯವರು ಆ ಪಾತ್ರವನ್ನೇ ಕೇಂದ್ರವಾಗಿಸಿರಿಕೊಂಡು 'ಯಶೋಧರ' ಕಾದಂಬರಿಯನ್ನು ರಚಿಸಿದ್ದಾರೆ. ಕೈಹಿಡಿದ ಗಂಡಸ್ಸು ಜಗತ್ತಿನ ಉದ್ಧಾರಕ್ಕೆಂದು ರಾತ್ರೋ ರಾತ್ರಿ ಹೆಂಡತಿ ಮಕ್ಕಳನ್ನು ತೊರೆದು ಹೋಗುತ್ತಾನೆ. ಬದುಕಿನಲ್ಲಿ ಆಗಿರಬಹುದಾದ ಸ್ಥಿತ್ಯಂತರಗಳನ್ನು ಅವಳ ಮಾನಸಿಕ ತಲ್ಲಣ ತಳಮಳಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಚಿಂತಿಸಿರುವುದು ಕಂಡು ಬರುತ್ತದೆ. ಕನ್ನಡದಲ್ಲಿ ಯಶೋಧರೆಯನ್ನು ಕುರಿತು ಬಂದಿರುವ ಕೆಲವು ಕೃತಿಗಳನ್ನು ಆಧಾರವಾಗಿರಿಸಿ ಕೊಂಡು, ತಮ್ಮದೇ ಆದ ಕೆಲವು ಪರಿಕಲ್ಪನೆಗಳೊಂದಿಗೆ ಯಶೋಧರ ಕಾದಂಬರಿಯನ್ನು ರಚಿಸಿದ್ದಾರೆ. ೨೦೦೪ರಲ್ಲಿ ಈ ಕಾದಂಬರಿಗೆ 'ಗೀತಾ ದೇಸಾಯಿ ದತ್ತಿನಿಧಿ ಪ್ರಶಸ್ತಿ' ಲಭಿಸಿದೆ.

ವೇದಕಾಲೀನ ಸ್ತ್ರೀ ಪಾತ್ರ ಒಂದನ್ನು ಕೇಂದ್ರವಾಗಿರಿಸಿಕೊಂಡು ರಚಿತವಾದ "ಗಾರ್ಗಿ" ಪ್ರಭಾವತಿ ಯವರ ಮಹತ್ವದ ಕಾದಂಬರಿಯಾಗಿದೆ. ಕಾದಂಬರಿಯ ಮುನ್ನುಡಿಯಲ್ಲಿ ಲೇಖಕಿ ಆಡಿರುವ ಈ ಮಾತುಗಳು ಬಹುಮುಖ್ಯವಾಗುತ್ತವೆ. "ವ್ಯಾಸರು ನಾಲ್ಕು ವೇದಗಳನ್ನು ತಮ್ಮ ನಾಲ್ವರು ಶಿಷ್ಯರಾದ ಪೈಲ, ಸುಮಂತು, ವೈಶಂಪಾಯನ, ಜೈಮಿನಿ ಇವರಿಗೆ ಕ್ರಮವಾಗಿ ಹಂಚುತ್ತಾರೆ. ವೈಶಂಪಾಯನನು ತನ್ನ ಪಾಲಿಗೆ ಬಂದ ಯಜುರ್ವೇದವನ್ನು ತನ್ನ ಮೆಚ್ಚಿನ ಶಿಷ್ಯನಾದ ಯಜ್ಞಾವಲ್ಕ್ಯನಿಗೆ ಕೊಡುತ್ತಾನೆ. ಯಜ್ಞವಲ್ಕ್ಯನು ಆ ಕಾಲಕ್ಕೆ ಬಹಳ ಮೇಧಾವಿ ಎಂದು ಹೆಸರಾದವನು. ಅವನು ಯಜುರ್ವೇದವನ್ನು ಅಭ್ಯಾಸ ಮಾಡಿ ಅದನ್ನು ಅರವತ್ತೆಂಟು ಉಪನಿಷತ್ತುಗಳಾಗಿ ಪುನರ್‍ರಚಿಸಿದನಂತೆ. ಈ ಕೆಲಸದಲ್ಲಿ

ಅವನಿಗೆ ಸಹಾಯ ಮಾಡಿದರ ಪಟ್ಟಿಯಲ್ಲಿ ವೇದ ಮಂತ್ರಗಳನ್ನು ರಚಿಸಿದ ಗಾರ್ಗಿ, ಮೈತ್ರೇಯಿಯರ ಹೆಸರೂ ಬರುತ್ತದೆ. ಬೃಹಧಾರಣ್ಯಕ ಉಪನಿಷತ್ತಿನಲ್ಲಿ ಉಲ್ಲೇಖವಾಗಿರುವಂತೆ ಗಾರ್ಗಿಯು ಯಜ್ಞವಲ್ಕ್ಯನೊಂದಿಗೆ ಆಕಾಶ ಸತ್ವದ ಬಗ್ಗೆ ಚರ್ಚಿಸಿ ಸೋತು ಹೋಗುತ್ತಾಳೆ. ವ್ಯಾಸರು ವೇದಗಳನ್ನು ವಿಭಾಗ ಮಾಡಿ ಹಂಚುವಲ್ಲಿಂದ ತೊಡಗಿ ಗಾರ್ಗಿಯು ಯಾಜ್ಞವಲ್ಕ್ಯನಿಗೆ ಚರ್ಚೆಯಲ್ಲಿ ಸೋತು, ಮನಸೋಲುವ ವರೆಗೆ ಈ ಕಾದಂಬರಿಯ ಹರಹು ಇದೆ (ಪ್ರಭಾವತಿ ಎಸ್.ವಿ; ೨೦೦೭; ಪು. V). ಗಾರ್ಗಿಯ ಪಾತ್ರಚಿತ್ರಣ ಓದುಗರ ಮನಸ್ಸನ್ನು ಸೆಳೆಯುತ್ತದೆ. ಗಾರ್ಗಿ ಮತ್ತು ಯಜ್ಞವಲ್ಕ್ಯದ ನಡುವಿನ ಪ್ರಶ್ನೋತ್ತರ ಓದುಗರಲ್ಲಿ ಆಸಕ್ತಿ ಮೂಡಿಸುತ್ತದೆ. ಅಂದಿನ ಕಾಲದಲ್ಲಿ ಸ್ತ್ರೀಯರಿಗೆ ಯಾವ ರೀತಿ ಸ್ವತಂತ್ರವಿತ್ತು ಎಂಬುದನ್ನು ಕಾಣಬಹುದು.

ಕೇವಲ ಕಾದಂಬರಿಗಳಲ್ಲಷ್ಟೇ ಅಲ್ಲದೆ ಮಹತ್ವದ ನಾಲ್ಕು ಕವನ ಸಂಕಲನಗಳನ್ನು ಲೇಖಕಿ ಪ್ರಕಟಿಸಿದ್ದಾರೆ. 'ಮಳೆನಿಂತ ಮೇಲಿನ ಮರ', 'ಉಳಿದದ್ದು ಆಕಾಶ', 'ಭೂಮಿ', ಹರಿಯುತಿರಲಿ ಬಿಡು'. ಇವು ಇವರ ಪ್ರಮುಖ ಕವನ ಸಂಕಲನಗಳು. ಕವಿತೆ ರಚನೆಯು ಪ್ರಭಾವತಿಯವರ ಹವ್ಯಾಸಗಳಲ್ಲಿ ಒಂದು ಎಂಬುದು ಇಲ್ಲಿ ಮನದಟ್ಟಾಗುತ್ತದೆ. ಇವರ ಕವನಗಳು ಹೆಚ್ಚಾಗಿ 'ಮುಕ್ತ' ಛಂದಸ್ಸಿನಲ್ಲಿ ರಚನೆಯಾಗಿರುವುದನ್ನು ಕಾಣಬಹುದು. 'ಮಳೆನಿಂತ ಮೇಲಿ ಮರ' ಕವನ ಸಂಕಲನದಲ್ಲಿ ಒಟ್ಟು ೪೦ ಕವಿತೆಗಳಿವೆ. ನವೋದಯದಿಂದ ಮೊದಲು ಮಾಡಿ ಬಂಡಾಯದವರೆಗೂ ಅನೇಕ ಅಲೆಗಳಲ್ಲಿ ಹರಿದು ಬಂದ ಲಯಗಾರಿಕೆ, ಇಡೀ ಆಧುನಿಕ ಕನ್ನಡ ಕಾವ್ಯದ ವೈಶಿಷ್ಟ್ಯವೆಂದೇ ಹೇಳಬಹುದು. ಪ್ರಭಾವತಿಯವರ ಕವಿತೆಗಳಲ್ಲೂ ಈ ಎಲ್ಲ ರಚನೆಗಳನ್ನು ನಾವು ಗುರುತಿಸಬಹುದಾಗಿದೆ.

'ಉಳಿದಿದ್ದು ಆಕಾಶ' ಪ್ರಭಾವತಿಯವರ ಎರಡನೆಯ ಕವನ ಸಂಕಲನವಾಗಿದೆ. ಕಾವ್ಯಾಸಕ್ತರ ತೀವ್ರಗಮನ ಸೆಳೆದ ಈ ಕವಿಯಿತ್ರಿ ಕಾವ್ಯಕರ್ಮದ ಹೊಸ ಸಾಧ್ಯತೆಗಳತ್ತ ಮುಖ ಮಾಡಿದ್ದಾರೆನ್ನಿಸುತ್ತದೆ. ಇದಕ್ಕೆ ಉದಾಹರಣೆಯಾಗಿ 'ಬದುಕು' ಎಂಬ ಕವನವನ್ನು ನೋಡಬಹುದು.

'ಮೇಲೆ ನೇಗಿಲು ಕೆಳಗೆ ಭೂಮಿ
ಅವ್ಯಾಹತ ಅಗೆತ ಚದುರಿ ಬಿದ್ದ ಮಣ್ಣು
ಮೊಳಕೆಯೊಡೆಯುವ ಬೀಜ
ನೀರೊಂದೇ ಬೇಕು
ತುಳಿಯುವ ಕಾಲುಗಳಿಗಿಲ್ಲ ವಿರಾಮ'.

ಹೀಗೆ ಪ್ರತಿಮಾತ್ಮಕವಾಗಿ ಹೆಣ್ಣಿನ ಬದುಕಿನ ಅನುಭವವನ್ನು ಬಿಚ್ಚಿಡುತ್ತ ಕವಿತೆಯು ಬೆಳೆಯುತ್ತದೆ. ೨೦೦೦ರ ಸಾಲಿನಲ್ಲಿ ಈ ಕವನ ಸಂಕಲನಕ್ಕೆ 'ಗೊರೂರು ಪ್ರಶಸ್ತಿ' ಲಭಿಸಿದೆ.

೨೦೦೨ರಲ್ಲಿ ಮುದ್ದಣ ಕಾವ್ಯ ಪ್ರಶಸ್ತಿ ಲಭಿಸಿದ 'ಭೂಮಿ' ಕವಿತೆಯಲ್ಲಿ ಪುರಾಣ ಇತಿಹಾಸಗಳನ್ನು ವರ್ತಮಾನದ ಕಣ್ಣಿನಿಂದ ನೋಡುವ, ವಿಮರ್ಶನ ದೃಷ್ಟಿ ಪ್ರಧಾನವಾಗುತ್ತದೆ. ಭೂಮಿ ಕವನ ಸಂಕಲನವನ್ನು ನಾಲ್ಕು ಭಾಗ ಮಾಡಲಾಗಿದೆ. ಮೊದಲನೆ ಭಾಗ ಒಂದರಲ್ಲಿರುವ ಭೂಮಿ ಕವಿತೆಗಳು ಬಂಡಾಯದ

ಬೆಂಕಿಯುಂಡೆಯಂತೆ ಗೋಚರಿಸಿದರೂ, ಆಕೆಗಿರುವ ಸಿಟ್ಟು, ರೋಷ ಎಷ್ಟೆಂಬುದು ಭೂಕಂಪನ ನಾಶ ವಾದಾಗಲೇ ಅದರ ಬಗ್ಗೆ ಅರಿವು ಬರುತ್ತದೆ. ಮಾನವ ಮತ್ತು ಭೂಮಿಯ ನಡುವಿನ ಅವಿನಾಭಾವ ಸಂಬಂಧದ ಕಡೆಗೆ ದೃಷ್ಟಿಹರಿಸಿದ್ದಾರೆ. ಪ್ರಕೃತಿ ಮತ್ತು ಹೆಣ್ಣನ್ನು ನೋಡುವ ಸಮಾಜದ ದೃಷ್ಟಿಕೋನದ ಬಗ್ಗೆ ಕವಿತೆಗಳಲ್ಲಿ ಮೂಡಿಬಂದಿರುವ ಧ್ವನಿ ಸ್ವಲ್ಪ ಗಟ್ಟಿಯಾಗಿಯೇ ಕೇಳಿಸುತ್ತದೆ. ಭಾಗ ಎರಡರ ಕವಿತೆಗಳು, ಅಹಲ್ಯೆ, ಬುದ್ಧ, ಅಕ್ಕಮಹಾದೇವಿ, ಬಸವಣ್ಣ, ಕನಕದಾಸ, ಗಾಂಧೀಜಿ, ಜಿ.ಎಸ್. ಶಿವರುದ್ರಪ್ಪ ಮುಂತಾದವರ ವ್ಯಕ್ತಿ ಚಿತ್ರಗಳಾಗಿ ಮೂಡಿ ಬಂದಿರುತ್ತವೆ. ಇನ್ನೂಳಿದ ಭಾಗದಲ್ಲಿ ಮೃತ್ಯು ಕವಿತೆಗಳು ಹಾಗೂ ಅನುವಾದಿತ ಕವಿತೆಗಳು ಇವೆ. ತಮಿಳು, ತೆಲುಗು, ಇಂಗ್ಲೀಷ್, ಉರ್ದು ಮೂಲದ ಕವಿತೆಗಳ ಕನ್ನಡಾನುವಾದ ಹೊಸ ಕವಿತೆಗಳಂತೆ ಮೂಡಿ ಬಂದಿವೆ.

'ಮಳೆನಿಂತ ಮೇಲಿನ ಮರ'. 'ಉಳಿದದ್ದು ಆಕಾಶ' ಹಾಗೂ 'ಭೂಮಿ' ಕವನ ಸಂಕಲನಗಳ ನಂತರ 'ಹರಿಯುತಿರಲಿ ಬಿಡು' ಎಂಬ ಕವನ ಸಂಕಲನವನ್ನು ೨೦೦೮ರಲ್ಲಿ ರಚಿಸಿದ್ದಾರೆ. ಕಾವ್ಯ ಎನ್ನು ವಂತಹದ್ದು ಕಾಲದಿಂದ ಕಾಲಕ್ಕೆ ಹೊಸ ಸುಳಿಗಳನ್ನು ಹೊತ್ತುಕೊಂಡು ಹೊಸ ಹೊಸ ದಿಕ್ಕುಗಳತ್ತ ಹರಿಯುತ್ತಲೇ ಇರುತ್ತದೆ. ಹರಿಯುತಿರಲಿ ಸಂಕಲನ ಹೆಸರೇ ಸೂಚಿಸುವಂತೆ ತನ್ನ ಹರಿದಾಟದಲ್ಲಿಯೇ ಹತ್ತಾರು ವಿಸ್ಮಯಗಳನ್ನು ಹುಡುಕಾಡಿದೆ. ಬದುಕಿನ ಅದಮ್ಯ ಪ್ರೀತಿ, ಹಲವು ನಿಗೂಢಗಳ ಪ್ರೀತಿಸುವ ಸಾಲುಗಳು ಸಂಕಲನದಿಂದ ತುಂಬ ಸಿಗುತ್ತವೆ. ಈ ಕವನ ಸಂಕಲನದಲ್ಲಿ ೫೦ ಕವಿತೆಗಳಿವೆ.

ಪ್ರಭಾವತಿಯವರು ಕೇವಲ ಸೃಜನಶೀಲ ಕೃತಿಗಳಲ್ಲದೆ, ಸ್ತ್ರೀವಾದಿ ಚಿಂತನೆ, ಸಾಹಿತ್ಯ ಚಿಂತನೆಗಳಿಗೆ ಸಂಬಂಧಪಟ್ಟ ಕೃತಿಗಳನ್ನು ರಚಿಸಿದ್ದಾರೆ. 'ಕನ್ನಡ ಸಾಹಿತ್ಯದಲ್ಲಿ ದ್ರೌಪದಿ', 'ದ್ರೌಪದಿ ಒಂದು ಅಧ್ಯಯನ' ಮತ್ತು 'ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ' ಇವು ಮಹತ್ವದ ಸಂಶೋಧನಾ ಗ್ರಂಥಗಳಾಗಿವೆ. ಅವುಗಳಲ್ಲಿ 'ದ್ರೌಪದಿ ಒಂದು ಅಧ್ಯಯನ' ಪಿಎಚ್.ಡಿ. ಪ್ರಬಂಧವಾಗಿದೆ. ಮಹಾಭಾರತದ ಮಹತ್ವದ ಪಾತ್ರವಾದ 'ದ್ರೌಪದಿ' ತನ್ನ ಬಂಡಾಯದ ಗುಣದಿಂದಲೇ ಜನಪ್ರಿಯವಾದವಳು. ವ್ಯಾಸರಿಂದ ಭೈರಪ್ಪನವರಿಗೆ ಸಾಹಿತ್ಯ ಕೃತಿಗಳಲ್ಲಿ ದ್ರೌಪದಿಯ ಪಾತ್ರ ಚಿತ್ರಣ ಮೂಡಿ ಬಂದ ರೀತಿಯ ವಿವರಣಾತ್ಮಕ ಸಮೀಕ್ಷೆಯನ್ನು ಲೇಖಕಿ ಇಲ್ಲಿ ಮಾಡಿದ್ದಾರೆ. ವಿವಿಧ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವ ದ್ರೌಪದಿ ಪಾತ್ರ ಚಿತ್ರಣಗಳನ್ನು ಪರಸ್ಪರ ಹೋಲಿಸಿ ನೋಡಿದ್ದಾರೆ. ವ್ಯಾಸಭಾರತ, ಪಂಪ, ರನ್ನ, ಕುಮಾರವ್ಯಾಸರ ಕೃತಿಗಳು, ಜೈನ ಭಾರತ, ಜನಪದ ಸಾಹಿತ್ಯ, ಆಧುನಿಕ ಸಾಹಿತ್ಯ ಹೀಗೆ ತುಂಬ ವಿಸ್ತಾರವಾದ ಹಿನ್ನೆಲೆಯಿಂದ 'ದ್ರೌಪದಿ - ಒಂದು ಅಧ್ಯಯನ' ಕೃತಿ ರಚನೆಯಾಗಿದೆ. ಈ ಮಹಾಪ್ರಬಂಧದಲ್ಲಿ ವ್ಯಕ್ತಿ ವಿಚಾರಕ್ಕೆ ಮಾನ್ಯತೆಯನ್ನು ಕೊಡಲಾಗಿದೆ. ಪುರಾಣದಲ್ಲಿ ದ್ರೌಪದಿಯು ಅಸಹಾಯಕ ಹೆಣ್ಣಾಗಿ ಚಿತ್ರಿತಗೊಂಡಿದ್ದಾಳೆ. ಸಭೆಯಲ್ಲಿ ವಸ್ತ್ರಾಪಹರಣವಾದಾಗ ಕೌರವರ ವಿರುದ್ಧ ಪ್ರತಿಜ್ಞೆ ಮಾಡುತ್ತಾಳೆ. ಇವರ ನಾಶವಾದ ಮೇಲೆಯೇ ಮುಡಿಕಟ್ಟುವೆ ಎಂದು, ಅಂದು ಬಿಚ್ಚಿದ ಮುಡಿಯನ್ನು ಯುದ್ಧವಾದ ಮೇಲೆ ಮತ್ತೆ ಮುಡಿಯನ್ನು ಕಟ್ಟಿಕೊಳ್ಳುತ್ತಾಳೆ. ಇಂತಹ ದ್ರೌಪದಿಯ 'ಶ್ರೀಮುಡಿ'ಯನ್ನು ಪಂಪ, ರನ್ನ, ಕುಮಾರವ್ಯಾಸರ ಕಾವ್ಯಗಳ ಹಿನ್ನೆಲೆಯಲ್ಲಿ ಕುವೆಂಪುರವರು 'ದ್ರೌಪದಿಯ ಶ್ರೀ ಮುಡಿ'

ಎಂಬ ವಿಮರ್ಶಾ ಕೃತಿಯನ್ನು ರಚಿಸಿದರು. ಒಬ್ಬೊಬ್ಬ ಕವಿಯ ಕಲ್ಪನೆಗೆ ತಕ್ಕಂತೆ ಕೃತಿಗಳು ರಚನೆಯಾಗುತ್ತದೆ. ಈ ಕೃತಿಗಳಲ್ಲಿನ ದ್ರೌಪದಿಯ ಪಾತ್ರ ಚಿತ್ರಣದ ಜೊತೆಗೆ ಇರಾವತಿ ಕರ್ವೆಯವರ 'ಯುಗಾಂತ', ಭೈರಪ್ಪನವರ 'ಪರ್ವ', 'ವ್ಯಾಸಭಾರತ' ಮುಂತಾದ ಕೃತಿಗಳ ಪ್ರೇರಣೆಯಿಂದ ಪ್ರಭಾವತಿಯವರು ಪ್ರಸ್ತುತ ಸಂಶೋಧನ ಗ್ರಂಥವನ್ನು ರಚಿಸಿದ್ದಾರೆ.

'ಕನ್ನಡ ಸಾಹಿತ್ಯದಲ್ಲಿ ದ್ರೌಪದಿ' ಮತ್ತು 'ದ್ರೌಪದಿ ಒಂದು ಅಧ್ಯಯನ' ಎಂಬ ಸಂಶೋಧನಾ ಪ್ರಬಂಧಗಳಿಂದ ಹೆಸರಾದ ಪ್ರಭಾವತಿಯವರ ಮತ್ತೊಂದು ಸಂಶೋಧನಾ ಪ್ರಬಂಧವೆಂದರೆ "ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ". ಈ ಕೃತಿಯನ್ನು ಚಂಪೂ, ಷಟ್ಪದಿ, ಸಾಂಗತ್ಯ ಎಂಬ ಆಧಾರದಿಂದ ವಿಂಗಡಿಸಿದ್ದಾರೆ. ಭಾಷಾತ್ಮಕವಾಗಿ ನೋಡಿದರೆ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳ ಪರಿಶೀಲನೆಯೆಂದು ಗ್ರಹಿಸಬಹುದು. ಈ ತೌಲನಿಕ ಸಮೀಕ್ಷೆಗೆ ಮತ್ತಷ್ಟು ಪುಷ್ಟಿ ಬಂದಿರುವುದು ಪದ್ಯ ಕಾವ್ಯಗಳೊಂದಿಗೆ ಗದ್ಯ ಕೃತಿಗಳನ್ನು ಸೇರಿಸಿರುವುದರಿಂದ 'ಚಾವುಂಡರಾಯ ಪುರಾಣ' ಮತ್ತು ನಾಗರಾಜನ 'ಪುಣ್ಯಾಸ್ರವ' ಕೃತಿಗಳಿಂದ ತೊಡಗಿ ಎಚ್.ವಿ. ಸಾವಿತ್ರಮ್ಮನವರ ತನಕ ರಾಮಾಯಣದ ಕಥಾವಸ್ತು ಇರುವ ಕೃತಿಗಳನ್ನು ತೌಲನಿಕವಾಗಿ ನೋಡಿದ್ದಾರೆ. ಹೊಸಗನ್ನಡದಲ್ಲಿ ಅನುವಾದಗೊಂಡಿರುವ ರಾಮಾಯಣ ಕೇಂದ್ರಿತ ಗ್ರಂಥಗಳನ್ನು, ನಾಟಕಗಳನ್ನು ಯಕ್ಷಗಾನ ಪ್ರಸಂಗಗಳನ್ನು ಈ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಪಾಶ್ಚಾತ್ಯ ಪ್ರಭಾವದಿಂದ ಭಾರತಕ್ಕೆ ಬಂದ ಸ್ತ್ರೀವಾದಿ ಕಳೆದ ಒಂದೂವರೆ ದಶಕಗಳಲ್ಲಿ ವ್ಯಾಪಕವಾಗಿ ಹರಡಿದೆ. ಕನ್ನಡದಲ್ಲೆ ಈ ಚಿಂತನೆಯ ೨೫ ಕೃತಿಗಳು ಬೆಳಕು ಕಂಡಿವೆ. ಅವುಗಳಲ್ಲಿ ಪ್ರಭಾವತಿಯವರ 'ಸ್ತ್ರೀವಾದದ ಪ್ರಸ್ತುತತೆ' ಕೂಡ ಒಂದು. 'ಸ್ತ್ರೀವಾದ'ವೆಂಬುದು ಇತ್ತೀಚೆಗೆ ವೇದಿಕೆಗಳಲ್ಲೂ, ಪತ್ರಿಕೆಗಳಲ್ಲೂ, ಪದೇ ಪದೇ ಪ್ರತಿಧ್ವನಿತವಾಗುತ್ತಿರುವ ವಿಚಾರವಾಗಿದೆ. ಈ ವಾದದ ಪ್ರಸ್ತುತತೆ ಕುರಿತ ಪ್ರಬಂಧವೇ ಇದಾಗಿದೆ.

ಸ್ತ್ರೀವಾದದ ಪ್ರಸ್ತುತತೆ ಕೃತಿ ಹತ್ತು ಲೇಖನಗಳನ್ನು ಒಳಗೊಂಡಿದ್ದು ಎರಡು ಭಾಗಗಳಲ್ಲಿ ಬೇರೆ ಬೇರೆ ವಿಷಯಗಳನ್ನು ಚರ್ಚಿಸುತ್ತದೆ. ಸ್ತ್ರೀವಾದಕ್ಕೆ ಸಂಬಂಧಿಸಿದ ಲೇಖನಗಳಲ್ಲಿ ಸಂಚಲನ ಭಾಗದಲ್ಲೂ, ಉಳಿದ ಸಾಹಿತ್ಯ ಸಂಬಂಧಿ ಲೇಖನಗಳು ಸಂಕಲನದಲ್ಲೂ ಇವೆ. ಪ್ರಾಚೀನ ಸಾಹಿತ್ಯದಲ್ಲಿಯೇ ಸ್ತ್ರೀವಾದದ ಮನೋಭಾವಯಿತ್ತು ಎಂದು 'ಸಿಮನ್ ದ ಬೊವ' ಮತ್ತು ಅನಂತಮೂರ್ತಿಯವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಕನ್ನಡ ಲೇಖಕಿಯರ ಚಾರಿತ್ರಿಕ ಬೆಳವಣಿಗೆ ಹೆಜ್ಜೆಗಳನ್ನು ಮೊದಲ ತಲೆಮಾರಿನ ಲೇಖಕಿಯಾದ ತಿರುಮಲಾಂಬ ಅವರ ಕೃತಿಗಳಲ್ಲಿ ಗುರುತಿಸಿದ್ದಾರೆ. ಅಲ್ಲದೇ ಅವರ ಸಮಕಾಲೀನ ಮತ್ತು ತೀರಾ ಇತ್ತೀಚಿನ ಲೇಖಕಿಯರ ಕೃತಿಗಳಲ್ಲಿ ಮೂಡಿದ ಸ್ತ್ರೀವಾದಿ ನೆಲೆಗಳನ್ನು ಗುರುತಿಸುತ್ತಾರೆ. ಮಹಾಭಾರತದ ಪಾತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿದ, ಭೈರಪ್ಪನವರ 'ಪರ್ವ'ವನ್ನು ಸ್ತ್ರೀವಾದಿ ದೃಷ್ಟಿಯಿಂದ ವಿಶ್ಲೇಷಿಸಲು ತೊಡಗುತ್ತಾರೆ. 'ಮಹಿಳೆ ಮತ್ತು ಮಧ್ಯಕಾಲೀನ ಸಾಹಿತ್ಯ' ಲೇಖನದಲ್ಲಿ

೧೩ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಹೆಣ್ಣಿನ ಧ್ವನಿಗಳ ಹುಡುಕಾಟದ ಬಗ್ಗೆ ತಿಳಿಸಿದ್ದಾರೆ. ವಚನಕಾರರು, ಹರಿಹರ, ರಾಘವಾಂಕ, ಚಾಮರಸ, ಲಕ್ಷ್ಮೀಶ, ಕುಮಾರವ್ಯಾಸ, ಮುಂತಾದವರ ಕಾವ್ಯಗಳಲ್ಲಿ ಬಂದ ಸ್ತ್ರೀಚಿತ್ರಣದ ಸ್ವರೂಪವನ್ನು ವಿವರಿಸಿದ್ದಾರೆ.

"ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು"

ಎಂಬ ಪ್ರಸಿದ್ಧ ಸಾಲುಗಳನ್ನು ಹೇಳಿದ ಸಂಚಿ ಹೊನ್ನಮ್ಮರವರ ಸ್ತ್ರೀವಾದಿ ನಿಲುವನ್ನು ಲೇಖಕಿ ಗುರುತಿಸಿದ್ದಾರೆ. ಅಲ್ಲದೆ ಕಾಲದ ಸಂಪ್ರದಾಯಿಕ ಮಿತಿಗಳಲ್ಲಿಯೇ ಕಾಂತ್ರಿಯ ನಿಲುವಿನೊಂದಿಗೆ ಹೆಣ್ಣನ್ನು ಉದಾತ್ತವಾಗಿ, ಆಳ ಅನನ್ಯತೆಯನ್ನು ಗುರುತಿಸಿದ್ದಾರೆ. ಕೃತಿಯ ಎರಡನೇ ಭಾಗವಾದ ಸಂಕಲನದಲ್ಲಿ 'ಕನ್ನಡ ರಾಮಾಯಣ'ಗಳ ಸಮೀಕ್ಷೆಗಳಾಗಿವೆ. ವೈದಿಕ, ಜೈನ, ಬೌದ್ಧ, ಪರಂಪರೆಯಲ್ಲಿನ ರಾಮಾಯಣಗಳಲ್ಲಿ ಆಯಾ ಧರ್ಮಗಳ ತಾತ್ವಿಕ ಧೋರಣೆಗಳನ್ನು ಮತ್ತು ಮಾರ್ಪಾಡುಗಳನ್ನು ಸ್ಥೂಲವಾಗಿ ವಿವರಿಸಿದ್ದಾರೆ.

ಪ್ರಭಾವತಿಯವರ ಚಿತ್ರ-ಭೀತಿಯು ಎಸ್.ಎಲ್. ಭೈರಪ್ಪನವರ ಕಾದಂಬರಿಗಳನ್ನಾಧರಿಸಿದ ವಿಮರ್ಶಾ ಲೇಖನವಾಗಿದೆ. ಭೈರಪ್ಪನವರಿಗಿಂತ ಹಿಂದಿನ ಕಾದಂಬರಿಕಾರರು ಕಾದಂಬರಿಗಳನ್ನು ಕಟ್ಟಿಕೊಟ್ಟಂತ ರೀತಿಯನ್ನು ಈ ಚಿತ್ರ-ಭೀತ್ತಿಯಲ್ಲಿ ಕಾಣಬಹುದು. "೧೯೫೦ರಲ್ಲಿ ಬರವಣಿಗೆ ಪ್ರಾರಂಭಿಸಿದ್ದ ಎಸ್.ಎಲ್. ಭೈರಪ್ಪನವರ ಕಾದಂಬರಿಗಳು ಜನಪ್ರಿಯವಾಗತೊಡಗಿದವು. ಕೆಲವು ಲೇಖಕಿಯರಂತೆ ಜನಪ್ರಿಯತೆಯನ್ನು, ಕಾರಂತರಂತೆ ಗಂಭೀರತೆಯನ್ನು ಎಲ್ಲಕ್ಕಿಂತ ಹೆಚ್ಚಾಗಿ ವಿಷಯ ವೈವಿಧ್ಯತೆಯನ್ನು ಅರಗಿಸಿಕೊಂಡ ಅವರ ಕೃತಿಗಳು ಸಾಮಾನ್ಯ ಓದುಗರಂತೆ ಮತ್ತು ಪಂಡಿತರಿಗೂ ಪ್ರಿಯವಾದವು. ನನ್ನ ಕಾದಂಬರಿಗಳನ್ನು ಓದುವವರಲ್ಲಿ ಲಾಯರುಗಳಿದ್ದಾರೆ, ವೈದ್ಯರಿದ್ದಾರೆ, ನ್ಯಾಯವಾದಿಗಳಿದ್ದಾರೆ, ವಿಜ್ಞಾನಿಗಳಿದ್ದಾರೆ, ಗೃಹಿಣಿಯರಿದ್ದಾರೆ, ಸಾಮಾನ್ಯ ಸಹೃದಯರೂ ಇದ್ದಾರೆ ಎಂಬ ಅವರ ಮಾತಿನಲ್ಲಿ ಸತ್ಯವಿದೆ. ಸಮಾಜದ ಎಲ್ಲ ವರ್ಗದಲ್ಲೂ ಓದುಗರನ್ನು ಪಡೆದಿರುವುದು ವಿಶೇಷದ ಸಂಗತಿ. ಏಕೆಂದರೆ ನಮ್ಮ ಸಾಹಿತ್ಯ ಲೋಕದ ಪರಿಭಾಷೆಯಲ್ಲಿ ಜನಪ್ರಿಯತೆ ಮತ್ತು ಶ್ರೇಷ್ಠತೆ ಎರಡೂ ಎರಡು ಧ್ರುವಗಳು. ಈ ಎರಡು ಧ್ರುವಗಳನ್ನು ಹತ್ತಿರ ತಂದ ಅನೇಕರ ಸಾಲಿನಲ್ಲಿ ಭೈರಪ್ಪನವರದು ಹೆಚ್ಚಿನ ವಿಶೇಷ (ಪ್ರಭಾವತಿ ಎಸ್.ವಿ.; ೨೦೦೫; ಪು. ೧೦-೧೧). ಹೀಗೆ ಭೈರಪ್ಪನವರ ಕಾದಂಬರಿ ಸರ್ವಕಾಲಕ್ಕೂ ಸರ್ವರಿಗೂ ಸಲ್ಲುತ್ತವೆ ಎಂಬುದನ್ನು 'ಚಿತ್ರ-ಭೀತ್ತಿ' ಎಂಬ ಪುಸ್ತಕದಲ್ಲಿ ಲೇಖಕಿಯೂ ಎತ್ತಿ ಹಿಡಿಯುತ್ತಾರೆ. ಭೈರಪ್ಪನವರ ಕಾದಂಬರಿಗಳನ್ನು ಎಲ್ಲ ನೆಲೆಗಟ್ಟುಗಳಲ್ಲೂ ಕುರಿತು ಚರ್ಚಿಸಲಾಗಿದೆ.

ಪ್ರಭಾವತಿಯವರ ವಿಮರ್ಶಾ ಲೇಖನದಲ್ಲಿ ಒಂದಾದ "ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು" ಎನ್ನುವಂತ ಕೃತಿಯು ೨೦೦೨ರಲ್ಲಿ ಪ್ರಕಟವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯದ ನಂತರದ ಕಾಲಘಟ್ಟವನ್ನು ಸ್ತ್ರೀವಾದಿ ಚಳವಳಿಯ ಕಾಲವಾಗಿ

ಗುರುತಿಸಬಹುದಾಗಿದೆ. ಎರಡು ದಶಕಗಳ ಹಿಂದಿನ ಸಿಮೊನ್ ದಿ ಬುವಾಳ ಪುಸ್ತಕದ ಪ್ರಭಾವ ನಮ್ಮ ಲೇಖಕಿಯರ ಮೇಲೆ ಬಹಳಷ್ಟು ಪರಿಣಾಮವನ್ನುಂಟು ಮಾಡಿದೆ. ಜಾನಪದ ಸಾಹಿತ್ಯದಲ್ಲಿಯೂ ಸಹ ಇದರ ಹೊಳವುಯಿತ್ತು ಎಂದು ಹೇಳಬಹುದು. ನಮ್ಮ ಜಾನಪದದ ಹೆಂಗಸರು ತುಂಬ ಗಟ್ಟಿಗರು, ಯಾವುದಕ್ಕೂ ಹೆದರುವವರಲ್ಲ. 'ರಾಮಾಯಣ'ದ 'ಸೀತೆ', 'ಮಹಾಭಾರತ'ದ, 'ದ್ರೌಪದಿ' ಎಲ್ಲ ಇಲ್ಲಿ ದಿಟ್ಟೆಯರೇ. ಸ್ತ್ರೀವಾದಿ ದೃಷ್ಟಿಕೋನದಿಂದ ಅನೇಕ ಸಾಹಿತ್ಯ ಕೃತಿಗಳು ರಚನೆಯಾಗಿರುವುದನ್ನು ಕಾಣಬಹುದಾಗಿದೆ. ವೇದಗಳ ಕಾಲದಲ್ಲೇ, ವೇದ ಮಂತ್ರಗಳನ್ನು ಗಾರ್ಗಿ, ಮೈತ್ರಿಯೇಯರು ರಚಿಸಿದರು. ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯ ಸಹ ಇತ್ತು. ಆದರೆ ಬರುಬರುತ್ತಾ ಪುರುಷಪ್ರಧಾನ ವ್ಯವಸ್ಥೆಯಿಂದಾಗಿ ಮಹಿಳೆಯರಿಗೆ ನಿರ್ದಿಷ್ಟ ಚೌಕಟ್ಟನ್ನು ಹಾಕಿದರೂ, ವಿದ್ಯಾಭ್ಯಾಸ ನಿಷೇಧ, ಮರುಮದುವೆ ನಿಷೇಧ, ಸತಿಪದ್ಧತಿ, ಮುಂತಾದ ನಿರ್ಬಂಧಗಳನ್ನು ಸ್ತ್ರೀಯರ ಮೇಲೆ ಹೇರಲಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ಸ್ವಲ್ಪಮಟ್ಟಿಗೆ ಅನೇಕ ಸುಧಾರಣೆಗಳು ಆದವು. ಪುರಾಣ ಪಾತ್ರಗಳನ್ನೇ ಇಟ್ಟುಕೊಂಡು ಕೃತಿ ರಚನೆ ಮಾಡುವುದರೊಂದಿಗೆ ಸ್ತ್ರೀಯರ ಬದುಕಿನ ಸ್ಥಿತಿಗತಿಯನ್ನು, ಸ್ತ್ರೀವಾದಿ ನೆಲೆಯಲ್ಲಿ ಕಟ್ಟತೊಡಗಿದರು. ಅತ್ತಿಮಬ್ಬೆ, ಅಕ್ಕಮಹಾದೇವಿ, ಸಂಚಿಹೊನ್ನಮ್ಮ, ತಿರುಮಲಾಂಬಾ ಮತ್ತು ಸಮಕಾಲೀನರು ಸೇರಿದಂತೆ ಇವರ ಕೃತಿಗಳಲ್ಲಿ ಸ್ತ್ರೀವಾದಿ ನೆಲೆಯನ್ನು ಗುರುತಿಸಿರುವುದನ್ನು ಕಾಣಬಹುದಾಗಿದೆ. ಪಾಶ್ಚಾತ್ಯ ಪರಿಕಲ್ಪನೆಯ ಮೂಲಕವೇ ಕನ್ನಡವನ್ನು ಪ್ರವೇಶಿಸಿದ ಸ್ತ್ರೀವಾದದ ಪರಿಕಲ್ಪನೆಯನ್ನು ಈ ಕೃತಿಯಲ್ಲಿ ನೋಡಬಹುದು.

'ಹೊರಳು ನೋಟ' ಎಂಬ ಇನ್ನೊಂದು ಕೃತಿಯು ಪ್ರಭಾವತಿಯವರ ವಿವಿಧ ಭಾಷಣಗಳನ್ನು ಮತ್ತು ಲೇಖನಗಳನ್ನು ಒಳಗೊಂಡಿದೆ. ಪೌರಾಣಿಕ ಹಾಗೂ ಆಧುನಿಕ ಪ್ರಸಂಗಗಳನ್ನು ತಮ್ಮದೇ ಆದ ಆಲೋಚನೆಗಳಿಗೆ ನಿಲುಕಿಸಿ ಚರ್ಚಿಸಿರುವುದನ್ನು ಕಾಣಬಹುದು. ವಾಸ್ತವದಲ್ಲಿ ಇದೊಂದು ವಿಮರ್ಶಾ ಸಂಕಲನ. ಒಟ್ಟು ಹನ್ನೆರಡು ಲೇಖನಗಳು ನಾಲ್ಕು ಭಾಗಗಳಲ್ಲಿ ಬಂದಿವೆ.

ಪ್ರಭಾವತಿ ಮತ್ತು ಎಚ್.ಎಲ್. ಪುಷ್ಪರವರು ಇಬ್ಬರೂ ಸೇರಿ 'ಅವಲೋಕನ' ಎಂಬ ಕೃತಿಯನ್ನು ಹೊರತಂದಿದ್ದಾರೆ. ಇದರಲ್ಲಿ ಪ್ರಸಿದ್ಧ ಕವಿಗಳ ಕೃತಿಗಳನ್ನು ಕುರಿತು ಚರ್ಚಿಸಿದ್ದಾರೆ. ಕುವೆಂಪು ರಚಿಸಿದ 'ಶೂದ್ರ ತಪಸ್ವಿ' ನಾಟಕದಲ್ಲಿ, ಶೂದ್ರರ ಬಗ್ಗೆ ತೋರಿಸಿರುವ ಒಲುಮೆ ಹಾಗೂ ಮೂಲ ಕಥೆಯ ವಸ್ತುವನ್ನು ಬದಲಿಸಿಕೊಂಡು ಹೊಸ ಅನ್ವೇಷಣಾ ನಿಲುವನ್ನು ಪ್ರತಿಬಿಂಬಿಸಿರುವ ಬಗ್ಗೆ ಚಿಂತಿಸುತ್ತಾರೆ. ಶೂದ್ರನಿಗೂ ತಪಸ್ಸು ಮಾಡುವ ಅಧಿಕಾರ ಇದೆ ಎಂಬ ನಿಲುವಿನ ಬಗ್ಗೆ ಪ್ರಭಾವತಿಯವರು ಸಹ ಚರ್ಚಿಸಿದ್ದಾರೆ. ಎಂ.ಎನ್. ಮೂರ್ತಿರಾಯರ 'ದೇವರು' ಎಂಬ ವಿಮರ್ಶಾ ಕೃತಿಯಲ್ಲಿ ದೈವಶ್ರದ್ಧೆಯ ಕೆಲವು ಪರಿಣಾಮವನ್ನು, ನಾಸ್ತಿಕರು-ಆಸ್ತಿಕರು ಮುಂತಾದ ನಿಲುವಿನ ಬಗ್ಗೆ ವಿವರಿಸಿದ್ದಾರೆ.

ಇವಲ್ಲದೆ 'ಸಮನ್ವಯ' ಎಂಬ ಮತ್ತೊಂದು ಕೃತಿಯನ್ನು ಪ್ರಭಾವತಿಯವರು ರಚಿಸಿದ್ದಾರೆ. ಇದು ಮುಂಬೆಳಕು ಕನ್ನಡ ಬಳಗ ಆಯೋಜಿಸಿದ ಡಾ. ವಿ.ಕೆ. ಗೋಕಾಕರ ನೆನಪಿನ ಸಾಹಿತ್ಯ ಸ್ಪರ್ಧೆ, ೨೦೦೫ರ ಬಹುಮಾನಿತ ಕೃತಿಯಾಗಿದೆ. ಇದರಲ್ಲಿ ಕಾವ್ಯ, ಕಾದಂಬರಿ, ಗದ್ಯ ಹಾಗೂ ನಾಟಕ ಕ್ಷೇತ್ರಗಳ ಉತ್ತಮ ಕೃತಿಗಳನ್ನು ಆಯ್ಕೆ ಮಾಡಿ, ಅದರ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ.

ಇವೆಷ್ಟೇ ಅಲ್ಲದೇ ಹಲವಾರು ವಿಮರ್ಶಾ ಲೇಖನಗಳು, ಕವಿತೆಗಳು ವಿವಿಧ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಕಳೆದ ೨೫ ವರ್ಷಗಳಿಂದ ನಾಡಿನ ಬೇರೆ ಬೇರೆ ಪತ್ರಿಕೆಗಳಲ್ಲಿ ಸಹ ಸಾಹಿತ್ಯದ ಬಗ್ಗೆ ಬರೆಯುತ್ತಿದ್ದಾರೆ. 'ಭಾರತೀಯ ಪರಂಪರೆಯಲ್ಲಿ ಸ್ತ್ರೀವಾದ', 'ಕನ್ನಡ ಸಾಹಿತ್ಯ ಪರಂಪರೆ ಮತ್ತು ಮಹಿಳಾ ಸಾಹಿತ್ಯ' ಎಂಬ ಲೇಖನಗಳು 'ಮಹಿಳಾಲೋಕ' ಮತ್ತು 'ಮಹಿಳಾ ಅಧ್ಯಯನ' ಎಂಬ ಸಂಚಿಕೆಯಲ್ಲಿ ಹೊರಬಂದಿವೆ. 'ಭೂಮಿ', 'ಶಾಂತರಸ', 'ಪ್ರಶ್ನೆ', 'ಅನಿಸಿಕೆ', 'ಕಟ್ಟುಕೆಡವು' ಹೀಗೆ ಹಲವಾರು ಕವನಗಳು ೧೯೮೭ರಿಂದ ಇಂದಿನವರೆಗೂ ಸಂಕ್ರಮಣದಲ್ಲಿ ಪ್ರಕಟವಾಗುತ್ತಾ, ಹಲವಾರು ಕಾದಂಬರಿಗಳ ವಿಮರ್ಶೆ ಸಹ ಬಂದಿವೆ.

೧೯೯೩ರಲ್ಲಿ 'ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯ' ಎಂಬ ವಿಮರ್ಶೆಯು 'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ' ಎಂಬ ವಿಚಾರಸಂಕಿರಣ ಮಾಲೆಯಲ್ಲಿ ಪ್ರಕಟವಾಗಿದೆ. ೧೯೯೯ರಲ್ಲಿ ಶಾರದಾ ಶಾಮಣ್ಣನವರ 'ಭಾರತೀಯ ಮಹಿಳೆ' ಮತ್ತು ೧೯೯೨ರಲ್ಲಿ ಎಚ್.ಎಲ್. ಪುಷ್ಪರವರು ಸಂಪಾದಿಸಿದ ಕವಿತೆಗಳಲ್ಲಿ ಪ್ರಭಾವತಿಯವರ 'ಮಳೆನಿಂತ ಮೇಲಿನ ಮರ' ಕವನ ಸಂಕಲನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಬಿಡುಗಡೆ ಮಾಡಿದ್ದಾರೆ. ೧೯೯೯ರ ಸಾಹಿತ್ಯ ವಿಮರ್ಶಾ ಲೇಖನದಲ್ಲಿ 'ಮಹಿಳೆ ಮತ್ತು ಮಧ್ಯಕಾಲೀನ ಸಾಹಿತ್ಯ' ಎಂಬ ಲೇಖನವು ೨೮, ೨೯, ಮಾರ್ಚ್ ೧೯೯೯ ರಂದು ಹರಿಹರದಲ್ಲಿ ನಡೆದ 'ಮಹಿಳಾ ಅಭಿವ್ಯಕ್ತಿ ಮತ್ತು ಸ್ತ್ರೀವಾದ' ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧವಾಗಿದೆ. ೨೦೦೧ನೇ ವರ್ಷದ ಏಪ್ರಿಲ್‌ನಲ್ಲಿ ಚನ್ನಪಟ್ಟಣ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು" ಎಂಬ ಭಾಷಣವು 'ಪ್ರಜಾವಾಣಿ'ಯ ಸಾಹಿತ್ಯ ಸಂವಾದದಲ್ಲಿ ಅದೇ ವರ್ಷ ಜುಲೈ ತಿಂಗಳಿನಲ್ಲಿ ಪ್ರಕಟವಾಯಿತು.

'ಕನ್ನಡಿಗರ ಕನ್ನಡಿ', 'ಬಹು ಜನ ಕನ್ನಡಿಗರು', 'ಕನ್ನಡದ ಮನೆಯಿಂದ' ಹಾಗೂ 'ಉಷಾಕಿರಣ' ಪತ್ರಿಕೆಗಳಲ್ಲಿ 'ಸ್ತ್ರೀವಾದಿ ಲೇಖನಗಳು' ಎಂಬ ಅಂಕಣ ಬರಹಗಳನ್ನು ಬರೆಯುತ್ತಿದ್ದಾರೆ. ಒಟ್ಟಿನಲ್ಲಿ ಪ್ರಭಾವತಿಯವರು ಸೃಜನಶೀಲ ಲೇಖಕಿಯಾಗಿ, ಸ್ತ್ರೀವಾದಿ ಚಿಂತಕರಾಗಿ, ಅದೇ ರೀತಿ ಸಾಹಿತ್ಯ ಚಿಂತಕರಾಗಿ, ನಮಗಿಲ್ಲಿ ಪ್ರಸ್ತುತವೆನಿಸುತ್ತಾರೆ.

೨.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಎಸ್.ವಿ. ಪ್ರಭಾವತಿಯವರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಅಧ್ಯಯನವೊಂದು ನಡೆದಿರುವುದು ಗಮನಕ್ಕೆ ಬಂದಿದೆ. ೨೦೦೬ರಲ್ಲಿ ಬಸವರಾಜ ಜಿ. ಅವರು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದ "ಎಸ್.ವಿ. ಪ್ರಭಾವತಿಯವರ ಕಾದಂಬರಿಗಳ ಅಧ್ಯಯನ" ಎಂಬ ಎಂ.ಫಿಲ್. ನಿಬಂಧವೊಂದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ತ್ರಿವೇಣಿ, ತಿರುಮಲಾಂಬ, ಅನುಪಮಾ ನಿರಂಜನ, ಎಚ್.ವಿ. ಸಾವಿತ್ರಮ್ಮ ಮೊದಲಾದ ಕನ್ನಡದ ಇತರ ಲೇಖಕಿಯರ ಕಾದಂಬರಿಗಳ ಹಿನ್ನೆಲೆಯೊಂದಿಗೆ ಅಧ್ಯಯನಕಾರರು ಇಲ್ಲಿ ಎಸ್.ವಿ. ಪ್ರಭಾವತಿ ಅವರ ಒಟ್ಟಾರೆ ಕಾದಂಬರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮುಖ್ಯವಾಗಿ ಪ್ರಸ್ತುತ ಅಧ್ಯಯನವೂ ಸ್ತ್ರೀವಾದಿ ದೃಷ್ಟಿಕೋನದಿಂದ ಸಾಗಿದೆ.

ಜೆ.ಕೆ. ರಮೇಶ್ ಅವರು ೨೦೦೧ರಲ್ಲಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕನ್ನಡದಲ್ಲಿ ಪೌರಾಣಿಕ ಕಾದಂಬರಿಗಳ ಒಂದು ಅಧ್ಯಯನ" ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಪ್ರಭಾವತಿಯವರ ಕೆಲವು ಕಾದಂಬರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇವೆಲ್ಲದೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣಗಳ ಬಳಕೆಗೆ ಸಂಬಂಧಿಸಿದಂತೆಯೂ ಕೆಲವು ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಕೆಲವು ಪಿಎಚ್.ಡಿ., ಎಂ.ಫಿಲ್. ನಿಬಂಧಗಳಾದರೆ ಇನ್ನೂ ಕೆಲವು ಅಧ್ಯಯನ ಗ್ರಂಥಗಳು ಹಾಗೂ ವಿಮರ್ಶಾ ಲೇಖನಗಳಾಗಿವೆ. ಕೆ.ಎಲ್. ಗೋಪಾಲಕೃಷ್ಣಯ್ಯ ಅವರ 'ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ' ಮತ್ತು 'ಪುರಾಣ' ಎಂಬೆರಡು ಕೃತಿಗಳು ವಿ.ಕೆ. ಮಣಿಮಾಲಿನಿಯವರ 'ದ್ರೌಪದಿ ಒಂದು ಸಮೀಕ್ಷೆ' ಸ್ವತಃ ಎಸ್.ವಿ. ಪ್ರಭಾವತಿಯವರು ಬರೆದ 'ಕನ್ನಡ ಸಾಹಿತ್ಯದಲ್ಲಿ ದ್ರೌಪದಿ', 'ದ್ರೌಪದಿ ಒಂದು ಅಧ್ಯಯನ' ಮತ್ತು 'ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ' ಮುಂತಾದ ಕೃತಿಗಳು ಪ್ರಮುಖವೆನ್ನಿಸುತ್ತವೆ.

ಇವೆಲ್ಲದೆ ವಿಜಯೇಂದ್ರ ಬಿಂದುರಾವ್ ಕುಲಕರ್ಣಿರವರ 'ಆಧುನಿಕ ಕನ್ನಡ ನಾಟಕಗಳಲ್ಲಿ ಪೌರಾಣಿಕ ವಸ್ತು' ಎಂಬ ಪಿಎಚ್.ಡಿ. ಮಹಾಪ್ರಬಂಧ, ಅಮರೇಶ ನುಗಡೋಣಿರವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ' ಎಂಬ ಎಂ.ಫಿಲ್ ನಿಬಂಧಗಳೂ ಕೂಡ ಇಲ್ಲಿ ಉಲ್ಲೇಖನೀಯವೆನಿಸುತ್ತವೆ. ಇಂತಹ ಅಧ್ಯಯನಗಳ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣಗಳ ಪುನರ್‌ಕಥನಕ್ಕೆ ಸಂಬಂಧಿಸಿದಂತೆ ಹಲವಾರು ಲೇಖನಗಳೂ ಅಲ್ಲಲ್ಲಿ ಪ್ರಕಟವಾಗಿವೆ. ಈ ಎಲ್ಲ ಅಧ್ಯಯನ ಪ್ರಬಂಧ, ಲೇಖನಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಪ್ರಸ್ತುತ ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳ ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ.

• • •

ಅಧ್ಯಾಯ ಮೂರು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣಗಳ ಪುನರ್‌ಕಥನ : ಒಂದು ಸ್ಥೂಲ ನೋಟ

ಅಧ್ಯಾಯ ಮೂರು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣಗಳ ಪುನರ್‌ಕಥನ : ಒಂದು ಸ್ಥೂಲ ನೋಟ

ಸಾಹಿತ್ಯ ಕೃಷಿಯಲ್ಲಿ ತೊಡಗಿದವರಿಗೆ ಪುರಾಣಗಳು ಪಿತ್ರಾರ್ಜಿತ ಆಸ್ತಿಯಿದ್ದ ಹಾಗೆ. ಕುತೂಹಲಕಾರಿಯಾದ ವಸ್ತು, ಚಮತ್ಕಾರಿಕ ಚಿಂತನೆ, ಸಂಕೇತ, ಪ್ರತಿಮೆ, ರೂಪಕ, ಉಪಮಾದ್ಯಲಂಕಾರಗಳು, ಅದ್ಭುತರಮ್ಯ ಸನ್ನಿವೇಶಗಳು, ಪ್ರಭಾವಶಾಲಿ ಪಾತ್ರಗಳು ಇವುಗಳಿಗೆಲ್ಲ ಪುರಾಣಗಳು ಅಕ್ಷಯ ಪಾತ್ರೆಗಳಿದ್ದಂತೆ. ಪುರಾಣ ಸಾಹಿತ್ಯ ಪ್ರಾಚೀನವಾದುದಾದರೂ ಅದರಲ್ಲಿ ಬರುವ ಘಟನೆಗಳು, ಪಾತ್ರಗಳು, ಪರಿಸರ ಇಂದಿನವರೆಗೂ ಸಾಹಿತಿಗಳಿಗೆ ಪ್ರೇರಕ ಆಗರವಾಗಿರುವುದನ್ನು ಕಾಣುತ್ತೇವೆ. ಅಂದಿನ ಪಾತ್ರಗಳನ್ನು ಆಧಾರವಾಗಿ ತೆಗೆದುಕೊಂಡರೂ ಅವುಗಳಲ್ಲಿ ಕವಿ ತನ್ನದೇ ಆದ ರೀತಿಯಲ್ಲಿ ವೈಭವೀಕರಿಸಿ ಹೊಸ ಸೃಷ್ಟಿಗಳಂತೆ ನಿರ್ಮಿಸಿರುವುದನ್ನು ನೋಡಬಹುದು.

ಪುರಾಣಗಳು ವಿಶಿಷ್ಟ ಲಕ್ಷಣಯುಕ್ತವಾಗಿ ಸಂಸ್ಕೃತದಲ್ಲಿ ರಚಿತವಾಗಿದ್ದರೂ, ಇವು ಅನೇಕ ಶತಮಾನಗಳಿಂದ ಈ ದೇಶದ ಜನರ ಮೇಲೆ ತಮ್ಮ ಅದ್ಭುತ ಪ್ರಭಾವವನ್ನು ಬೀರುತ್ತ ಬಂದಿವೆ. ಭಾರತೀಯ ಸಾಹಿತ್ಯ ಪರಂಪರೆಯನ್ನು ಗಮನಿಸಿದರೆ, ಇವು ಜನರನ್ನು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುವ ಉದ್ದೇಶವಿರಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ವೇದೋಪನಿಷತ್ತುಗಳ ಬೋಧನೆಯನ್ನು ದೇವರ ದಯೆ, ಪ್ರೀತಿಗಳನ್ನು, ಶಾಪ-ವಿಶಾಪಗಳ ಪ್ರಭಾವಗಳನ್ನು ಇಂತಹ ಕೃತಿಗಳಲ್ಲಿ ಚಿತ್ರಿಸಲಾಗಿದೆ. ಅಲ್ಲದೆ ಅತ್ಯಂತ ಸಂಕೀರ್ಣ ಸಾಂಸ್ಕೃತಿಕ ಸಂಗತಿಯನ್ನು ಹೊಂದಿರುವ ಪುರಾಣವು ಹೊಸ ಆಯಾಮಗಳನ್ನು ಒಳಗೊಳ್ಳುತ್ತಾ ಸದಾ ವಿಕಸನಶೀಲವಾಗುತ್ತಾ ಸಾಗಿದೆ.

ಸಂಸ್ಕೃತದ ಆದಿಕವಿಗಳೆನಿಸಿದ ವ್ಯಾಸ, ವಾಲ್ಮೀಕಿಯರು ವೈದಿಕ ಪುರಾಣಗಳಿಂದಲೂ ಮೌಖಿಕ ಕಥಾ ಸಂಪ್ರದಾಯಗಳಿಂದಲೂ ಸಾಮಾಗ್ರಿಯನ್ನು ಸ್ವೀಕರಿಸಿ ಮಹಾಭಾರತ, ರಾಮಾಯಣಗಳನ್ನು ರಚಿಸಿದರು. ಅದೇ ಮಾರ್ಗದಲ್ಲಿ ಮುಂದೆ ಭಾಸ, ಕಾಳಿದಾಸಾದಿ ಮಹಾಕವಿಗಳು ಈ ಮಹಾಕಾವ್ಯಗಳಿಂದಲೂ ಇನ್ನಿತರ ಪುರಾಣಗಳಿಂದಲೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಸ್ತು, ತಂತ್ರಾದಿಗಳನ್ನು ತೆಗೆದುಕೊಂಡು ಕಾವ್ಯಗಳನ್ನು, ನಾಟಕಗಳನ್ನು ರೂಪಿಸಿದರು. ಅಲ್ಲದೆ ತಮಗಿಂತ ಪ್ರಾಚೀನವಾದ ಗ್ರಂಥಗಳಿಂದ ವಸ್ತು,

ಸನ್ನಿವೇಶ, ಪಾತ್ರಗಳನ್ನು ಸ್ವೀಕರಿಸಿ ತಮ್ಮ ಸ್ವತಂತ್ರ ಕೃತಿ ಎನ್ನುವಂತೆ ಪುನರ್‌ರಚಿಸುವಾಗ ತಮಗೆ ಉಚಿತವೆನಿಸುವ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಹೀಗೆ ಪುರಾಣಗಳಿಂದ ಆರಂಭವಾದ ಸಾಹಿತ್ಯ ಮಾರ್ಗವು ಪರಂಪರಾಗತವಾಗಿ ಬೆಳೆದು ಬಂದಿದೆ.

ಒಂದು ವಿಶಿಷ್ಟ ಮಾದರಿಯ ಕೃತಿಗಳಿಗೆ ಪುರಾಣವೆಂಬ ಹೆಸರನ್ನು ಕೊಟ್ಟ ಮೇಲೆ, ಈ ಶಬ್ದಕ್ಕೆ ಬೇರೆ ಬೇರೆ ವ್ಯುತ್ಪತ್ತಿಗಳೂ, ವ್ಯಾಖ್ಯಾನಗಳೂ ಹುಟ್ಟಿಕೊಂಡವು. ಅವುಗಳಲ್ಲಿ ಕ್ರಿ.ಪೂ. ೩ನೆಯ ಶತಮಾನ ದಲ್ಲಿದ್ದ ಪಾಣಿನ್ಯಾಚಾರ್ಯರ ಪ್ರಕಾರ "ದೇವರ ಸಂಬಂಧವಾದ ಕಥೆಗಳು, ಋಷಿಗಳು ಹಾಗೂ ರಾಜರ ವಂಶಾವಳಿಗಳು, ಮೊದಲಾದುವನ್ನು ಸೂತರೆಂಬುವರು ಪ್ರಾಚೀನ ಕಾಲದಿಂದಲೂ ತಲತಲಾಂತರವಾಗಿ ರಕ್ಷಿಸಿಕೊಂಡು ಬಂದಿದ್ದು, ಅವುಗಳೇ ಮುಂದೆ ಪುರಾಣಗಳೆನಿಸಿದವು" (ವಿದ್ಯಾಶಂಕರ್ ಎಸ್.; ೨೦೦೬; ಪು. ೩).

ಮಾನವನು ತಿಳಿದರಬೇಕಾದ ತತ್ವವಿಚಾರಗಳನ್ನು, ಅವನ್ನು ಅನುಷ್ಠಾನದಲ್ಲಿ ತರಲು ಅನುದಿನದ ಬಾಳಿನಲ್ಲಿ ಅನುಸರಿಸಬೇಕಾದ ನೀತಿನಿಯಮಗಳನ್ನು ಈ ಗ್ರಂಥಗಳು ವಿವರಿಸುತ್ತವೆ. ಹಾಗೆ ಈ ಪುರಾಣಗಳು ಲೋಕಕಲ್ಯಾಣ ಸುಗಮವಾಗಿ ಸಾಗಬೇಕು. ಆ ಮೂಲಕ ಜನರು ಈ ಪ್ರಕೃತಿಗೆ ವಿಧೇಯರಾಗಿ ನಡೆದುಕೊಂಡು ಬಾಳಲಿ ಎನ್ನುವ ಆಶಯವನ್ನು ಹೊಂದಿವೆ. ಮಾನವ, ರಾಕ್ಷಸ, ದೇವರು, ಪ್ರಾಣಿ ಪಕ್ಷಿಗಳ ಚಮತ್ಕಾರಗಳ ಬಗ್ಗೆ ಮಾನವನಿಗೆ ಅರಿವು ಮಾಡಿಸಿ, ಆ ಮೂಲಕ ಮನುಷ್ಯ ಭಯ - ದೇವರ ಧ್ಯಾನ, ಪ್ರಕೃತಿಯೊಂದಿಗಿನ ಸಂಬಂಧದಿಂದ ತನ್ನದೇ ಆದ ಜೀವನವನ್ನು ನಡೆಸಲಿಕ್ಕೆ ಈ ಪುರಾಣಗಳು ಸೃಷ್ಟಿಯಾದಂತೆ ಕಂಡು ಬರುತ್ತವೆ.

ಪುರಾಣ ಶಬ್ದಕ್ಕೆ ನಿಘಂಟುಕಾರರು ಕೊಡುವ ಅರ್ಥ 'ಪ್ರಾಚೀನ'ವೆಂಬುದು 'ಮಿಥ್' ಹಾಗೂ 'ಮೈಥಾಲಜಿ' ಎಂಬ ಸಮಾನಾರ್ಥಕ ಪದಗಳನ್ನು ಬಳಸಲಾಗುತ್ತದೆ. ನಮ್ಮಲ್ಲಿ ಅವು ಬಳಕೆಯಾಗಲು ಪ್ರೇರಣೆ ನೀಡಿದವರು ಗ್ರೀಕ್ ಬರಹಗಾರರು. ಅವರಿಗೆ ನಮ್ಮಲ್ಲಿ ಬಳಕೆಯಲ್ಲಿರುವಂತೆ 'ಮೈಥಾಲಜಿ' ಎಂದರೆ ಬರಿಯ ಪುರಾಣದ ಅಧ್ಯಯನವಲ್ಲ; ಪುರಾಣ ಕಥೆಗಳನ್ನು ಹೇಳುವುದು ಎಂಬಂತಿದೆ. ಪುರಾಣ ಶಬ್ದವು ಮೊತ್ತಮೊದಲು ಇತಿಹಾಸ ಪೂರ್ವದ ವಿಶ್ವೋತ್ಪತ್ತಿ, ವೈಚಿತ್ರದ ಕಾಲ್ಪನಿಕ ಕಥೆಗಳಿಗೆ ಸಂಬಂಧಿಸಿತ್ತು. ಜಾನಪದ ಗೀತೆಗಳ ರೂಪದಲ್ಲಿದ್ದ ಅವನ್ನು 'ಪ್ರಾಚೀನ ಗಾಥಾ' ಎಂದು ಕರೆಯುತ್ತಿದ್ದರು. ಅವುಗಳ ಸಂಕಲನವು 'ಪುರಾಣ ಗಾಥಾ' ಆಯಿತು ಮತ್ತು ಆ ರೀತಿಯ ಕೃತಿಗಳೆಲ್ಲ ಮುಂದೆ 'ಪುರಾಣ'ವೆಂಬ ಅನ್ವರ್ಥ ನಾಮದಿಂದಲೇ ರೂಢಿಯಲ್ಲಿ ಬಂದವು ಎಂಬುದು ಪುರಾಣ ಪಂಡಿತರನೇಕರ ಅಭಿಪ್ರಾಯ.

ಮಹರ್ಷಿ ಅರವಿಂದರು ಒಂದೆಡೆ ತಿಳಿಸಿದಂತೆ, "ಪುರಾಣಗಳು ಪುರಾತನ ಕಾಲದಿಂದ ಸಾಗಿ ಬಂದಿರುವ ಸೃಷ್ಟಿಯ ವಿವರಣೆ, ಸಾಂಕೇತಿಕ ಕಟ್ಟುಕಥೆ, ರೂಪಕ, ಸಂಪ್ರದಾಯ, ಮತ, ಸಮಾಜ ನಿಯಮ ಮೊದಲಾದವುಗಳ ಲೋಕಪ್ರಿಯ ನಿರೂಪಣೆಗಳಾಗಿರಬೇಕೆಂಬ ಮೂಲೋದ್ದೇಶದಿಂದ ಕೂಡಿದ್ದುವು" ಇವು ಎಲ್ಲ ಪುರಾಣಗಳಲ್ಲೂ ಕಂಡು ಬರುವ ಅಂಶಗಳಾಗಿವೆ ಎಂದಿದ್ದಾರೆ (ವಿದ್ಯಾಶಂಕರ್ ಎಸ್.; ೨೦೦೬; ಪು. ೬).

ಸಂಸ್ಕೃತ ವಿದ್ವಾಂಸರಾದ ರಾಘವಾಚಾರ್ಯರು ಪುರಾಣವನ್ನು "'ಪುರಾ+ನವ' ಎಂದು ಸೂತ್ರೀಕರಿಸಿದ್ದಾರೆ. ಅಂದರೆ 'ಅತ್ಯಂತ ಪ್ರಾಚೀನವಾದರೂ ಸದಾ ನೂತನವಾದವು'" ಎಂದು ತಿಳಿಯಬಹುದು (ಗೋಪಾಲಕೃಷ್ಣಯ್ಯ.ಕೆ.ಎಲ್.; ೧೯೮೭; ಪು. ೪).

ಇಂತಹ ಪುರಾಣದ ಹುಟ್ಟಿನ ಬಗ್ಗೆ 'ಭಗವನ್ ಕೃಷ್ಣದ್ವೈಪಾಯನರು' "ಸಂಸ್ಕೃತದಲ್ಲಿದ್ದ ಆ ಪ್ರೌಢ ಸಾಹಿತ್ಯವಾದ ವೇದರಾಶಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಎಂಬ ನಾಲ್ವರು ಶಿಷ್ಯರಿಗೆ ಉಪದೇಶಿಸಿದರು. ಅನಂತರ ನಾನಾ ಭಾಷೆಗಳಲ್ಲಿದ್ದ ಮತ್ತು ತಲಾತಲಾಂತರಗಳಿಂದ ಬಂದಿದ್ದ ಜನಪದ ಸಾಹಿತ್ಯವಾದ ಕಥೆ, ಕಟ್ಟುಕಥೆ, ಉಪಕಥೆ, ಮೊದಲಾದವನ್ನು ಪುರಾಣ ರೂಪವಾಗಿ ರಚಿಸಿ ತಮ್ಮ ಐದನೆಯ ಶಿಷ್ಯನಾದ ರೋಮಹರ್ಷಣಸೂತನಿಗೆ ಬೋಧಿಸಿದರು. ಹೀಗಾಗಿ ಮೂಲ ಪುರಾಣ ಸಂಹಿತೆಯು ಜನ್ಮ ತಾಳಿದ ಬಗೆಯನ್ನು ಬ್ರಹ್ಮಂಡ, ವಾಯು ಮತ್ತು ವಿಷ್ಣು ಪುರಾಣಗಳಲ್ಲಿ ನೋಡುತ್ತೇವೆ" (ವಿದ್ಯಾಶಂಕರ್; ೨೦೦೬; ಪು. ೫).

ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಕೌಟಿಲ್ಯನು ತನ್ನ ಗ್ರಂಥವಾದ 'ಅರ್ಥಶಾಸ್ತ್ರ'ದಲ್ಲಿ ಪುರಾಣವನ್ನು ಹೇಳಲು "ಪುರಾಣಿಕರು, ಸೂತರು ಮತ್ತು ಮಗಧರನ್ನು ರಾಜನು ಸಂಬಂಳ ಕೊಟ್ಟು ನೇಮಿಸಿಕೊಳ್ಳುತ್ತಿದ್ದನು ಎಂದು ಹೇಳಿದ್ದಾನೆ" (ಅದೇ; ಪು. ೧೩).

ಪುರಾಣವೆಂದೊಡನೆ ನೆನಪಿಗೆ ಬರುವುದು. ವ್ಯಾಸ ಮಹರ್ಷಿಗಳು ರಚಿಸಿದರೆಂದು ಹೇಳಲಾಗುವ ಹದಿನೆಂಟು ಪುರಾಣಗಳು ಮತ್ತು ಅವುಗಳ ಉಪಪುರಾಣಗಳು.

"ಅಷ್ಟಾದಶ ಪುರಾಣಾನಿ ಕರ್ತ್ವಾ ಸತ್ಯವರ್ತೀಸುತಃ
ಭಾರತಾಖ್ಯಾನ ಮೂಲಂ ಚಕ್ರೇ ತದುಪ ಬ್ರಹ್ಮಣಂ."

ಹೀಗೆ ವಿಪುಲವಾಗಿರುವ ಪುರಾಣ ಗ್ರಂಥಗಳ ಪೈಕಿ ಕೆಲವನ್ನು ಪ್ರತ್ಯೇಕಿಸಿ 'ಮಹಾಪುರಾಣ'ಗಳೆಂದು ಕರೆಯಲಾಗಿದೆ. ಇಂತಹ ಮಹಾಪುರಾಣಗಳೆಂದರೆ;

೧.	ಬ್ರಾಹ್ಮಣ ಪುರಾಣ	೧೦,೦೦೦ ಶ್ಲೋಕಗಳು
೨.	ಪದ್ಮ ಪುರಾಣ	೫೫,೦೦೦ ಶ್ಲೋಕಗಳು
೩.	ವೈಷ್ಣವ ಪುರಾಣ	೨೩,೦೦೦ ಶ್ಲೋಕಗಳು
೪.	ಶೈವ ಪುರಾಣ	೨೪,೦೦೦ ಶ್ಲೋಕಗಳು
೫.	ಭಾಗವತ ಪುರಾಣ	೧೮,೦೦೦ ಶ್ಲೋಕಗಳು
೬.	ನಾರದೀಯ ಪುರಾಣ	೨೫,೦೦೦ ಶ್ಲೋಕಗಳು
೭.	ಮಾರ್ಕಂಡೇಯ ಪುರಾಣ	೯,೦೦೦ ಶ್ಲೋಕಗಳು

೮. ಅಗ್ನಿ ಪುರಾಣ ೧೬,೦೦೦ ಶ್ಲೋಕಗಳು

೯. ಭವಿಷ್ಯ ಪುರಾಣ ೧೪,೦೦೦ ಶ್ಲೋಕಗಳು

೧೦. ಬ್ರಹ್ಮ ವೈವರ್ತ ಪುರಾಣ ೧೮,೦೦೦ ಶ್ಲೋಕಗಳು

೧೧. ಲೈಂಗ್ಯ ಪುರಾಣ ೧೧,೦೦೦ ಶ್ಲೋಕಗಳು

೧೨. ವರಾಹ ಪುರಾಣ ೨೪,೦೦೦ ಶ್ಲೋಕಗಳು

೧೩. ಸ್ಕಾಂದ ಪುರಾಣ ೮೧,೦೦೦ ಶ್ಲೋಕಗಳು

೧೪. ವಾಮನ ಪುರಾಣ ೧೦,೦೦೦ ಶ್ಲೋಕಗಳು

೧೫. ಕೂರ್ಮ ಪುರಾಣ ೧೭,೦೦೦ ಶ್ಲೋಕಗಳು

೧೬. ಮತ್ಸ್ಯ ಪುರಾಣ ೧೪,೦೦೦ ಶ್ಲೋಕಗಳು

೧೭. ಗಾರುಡ ಪುರಾಣ ೧೯,೦೦೦ ಶ್ಲೋಕಗಳು

೧೮. ಬ್ರಹ್ಮಾಂಡ ಪುರಾಣ ೧೨,೮೦೦ ಶ್ಲೋಕಗಳು

ಈ ಪುರಾಣಗಳ ಬಹುಮುಖದ ಬೆಳವಣಿಗೆ ಮತ್ತು ವರ್ಗೀಕರಣದ ಬಗ್ಗೆ ಸದಾನಂದ ನಾಯಕರು ಅಭಿಪ್ರಾಯ ಗಮರ್ನಾಹವಾದದ್ದು. "ಪ್ರತಿಯೊಂದು ಪುರಾಣವೂ ಪ್ರತ್ಯೇಕವಾಗಿ ರಚಿತವಾಯಿತೆಂದು ಕೇಳುವುದಕ್ಕಿಂತ, ಪುರಾಣ ಸಾಹಿತ್ಯವು ನೂರಾರು ವರ್ಷಗಳವರೆಗೆ ಹಲವು ಮುಖಗಳಿಂದ ಬೆಳೆದು ಕೊನೆಗೊಂಡು, ವ್ಯಾಸ ಸಮುದಾಯವು ಅವುಗಳನ್ನು ಹದಿನೆಂಟು ಪುರಾಣಗಳನ್ನಾಗಿ ಮಾಡಿರಬಹುದೆಂದು ಅವರು ಊಹಿಸಿದ್ದಾರೆ" (ವಿದ್ಯಾಶಂಕರ ಎಸ್.; ೨೦೦೬; ಪು. ೯-೧೦).

ಮಹಾಪುರಾಣಗಳು ದಶಲಕ್ಷಣಗಳನ್ನು, ಉಪಪುರಾಣಗಳು ಪಂಚ ಲಕ್ಷಣಗಳನ್ನು ಹೊಂದಿರ ಬೇಕೆಂಬುದು ಸಾಮಾನ್ಯ ನಿಯಮವಾದರೂ ಎಲ್ಲ ಪುರಾಣಗಳು, ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತೆ ಎಂಬ ಪಂಚ ವಿಷಯಗಳನ್ನೇ ಪ್ರಧಾನವಾಗಿಟ್ಟುಕೊಂಡು ರಚಿತವಾಗಿವೆ.

ಅಮರಸಿಂಹನ 'ಅಮರಕೋಶ' ಕೃತಿಯಲ್ಲಿ ಪಂಚ ಲಕ್ಷಣದ ಪುರಾಣವನ್ನು ಈ ರೀತಿ ಸೂತ್ರೀಕರಿಸ ಲಾಗಿದೆ.

> "ಸರ್ಗಶ್ಚ
> ಪ್ರತಿ ಸರ್ಗಶ್ಚ
> ಮನ್ವಂತ ರಾಣಿ ಚ
> ವಂಶಾನುಚರಿತಂ, ಚೈವ
> ಪುರಾಣಂ ಪಂಚ ಲಕ್ಷಣಂ".

ಇವುಗಳಲ್ಲಿ ಸರ್ಗ, ಪ್ರತಿಸರ್ಗಗಳೆಂದರೆ, ಪ್ರಥಮ ಸೃಷ್ಟಿ ಮತ್ತು ಪುನಃಸೃಷ್ಟಿ ಅಥವಾ ವಿಶ್ವವಿಕಾಸ; ವಂಶವೆಂದರೆ ಋಷಿಗಳು ಹಾಗೂ ಪೂರ್ವಜರ ಚರಿತ್ರೆ; ಮನ್ವಂತರವೆಂದರೆ ವಿವಿಧ ಮನುಗಳ ಕಲಾವಧಿ;

ವಂಶಾನುಚರಿತವೆಂದರೆ ರಾಜರುಗಳ ವಂಶಾವಳಿಯನ್ನು ನಿರೂಪಿಸುವುದು ಎಂದರ್ಥ. ಹೀಗೆ ಮನುಷ್ಯ ಎಂದು ಪ್ರಕೃತಿಯನ್ನು ತನ್ನ ಪ್ರಶ್ನಾರ್ಥಕ ದೃಷ್ಟಿಯಿಂದ ವೀಕ್ಷಿಸಿದನೋ, ಅಂದೇ ಅವನಲ್ಲಿ ವೈಜ್ಞಾನಿಕ ಅರ್ಥಾತ್ ಪೌರಾಣಿಕ ಕಲ್ಪನೆಗಳು ಹುಟ್ಟಿದ್ದವು. ಆತ ದೇವರನ್ನು ಸೃಷ್ಟಿಮಾಡಿ ತನ್ನ ಸಾಮರ್ಥ್ಯಕ್ಕೆ ಮೀರಿದ್ದನ್ನು ಕುರಿತು ತನ್ನಿಂದಲೇ ಹೊರಡುವ ಪ್ರಶ್ನೆಗೆ, ದೇವರು ಎಂಬ ಶಕ್ತಿಯಲ್ಲಿ ಉತ್ತರವನ್ನು ಹುಡುಕಿಕೊಂಡನು. ದೇವರನ್ನು ಮುಂದೆ ಇಟ್ಟುಕೊಂಡು, ತನಗೆ ಹೊಳೆದ ಅನೇಕ ವೈಜ್ಞಾನಿಕ ಅನುಮಾನ ಗಳಿಗೆ, ಊಹೆಗಳಿಗೆ, ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ ಫಲವಾಗಿಯೇ ಸತ್ಯವನ್ನು ಅನಂತ ಸುರುಳಿಯಲ್ಲಿ ಸುತ್ತಿಕೊಂಡು, ಪುರಾಣ ಕಲ್ಪನೆಗಳು ಚಿಗುರೊಡೆದವೆಂದು ಹೇಳಬಹುದು.

ಹೀಗೆ ಜನಾಂಗ ನಂಬಿದ ದೇವರ, ಮೂಲ ಪುರುಷನ ಮತ್ತು ಸಾಂಸ್ಕೃತಿಕ ವೀರರ ಚರಿತ್ರೆಗಳನ್ನು ಹೇಳುವ ಪುರಾಣಗಳ ಉದ್ದೇಶ - ಜನಾಂಗದ ಶ್ರೇಷ್ಠತೆ, ಹಳಮೆ, ಪವಿತ್ರತೆ, ಧರ್ಮ ಮತ್ತು ಧಾರ್ಮಿಕ ತತ್ವಗಳ ಪ್ರತಿಪಾದನೆಗಳಾಗಿವೆ. ಒಂದೊಂದು ಜನಾಂಗವೂ ತನ್ನ ಜನಾಂಗದ ಮೂಲವೇ ಅತ್ಯಂತ ಪ್ರಾಚೀನವಾದುದು ಮತ್ತು ಪವಿತ್ರವಾದುವು ಎಂಬುದನ್ನು ಸಾರುವ ಭರದಲ್ಲಿ ಅನೇಕ ಪೌರಾಣಿಕ ಕಲ್ಪನೆಗಳನ್ನು ಸೃಷ್ಟಿಸಿಕೊಂಡಿವೆ. ಪ್ರತಿಯೊಂದು ಜನಾಂಗವು ತನಗೊಬ್ಬ ಮೂಲ ಪುರುಷನನ್ನು ಗುರುತಿಸಿ ಕೊಳ್ಳಲು ಹವಣಿಸಿವೆ. ಈ ಮಹಾಪುರುಷನಿಂದಲೇ ತಮ್ಮ ಜನಾಂಗ ಪ್ರಾರಂಭವಾಯಿತೆಂದು ಕಥೆ ಕಟ್ಟಿ ಹೇಳುತ್ತದೆ. ಇಂತಹ ಜನಪದ ಪುರಾಣಗಳಲ್ಲಿ ಕಾಣುವ ಮುಖ್ಯ ಲಕ್ಷಣಗಳನ್ನು ಹೊತ್ತೇ ಶಿಷ್ಟಪದ ಪುರಾಣಗಳು ಧಾರ್ಮಿಕ ಚೌಕಟ್ಟಿನಲ್ಲಿ ಬೆಳೆದುಕೊಂಡು ಬಂದವು. ಹೀಗಾಗಿ ಈ ಪುರಾಣಗಳ ವ್ಯಾಪ್ತಿ, ಉದ್ದೇಶಗಳು, ಅಲ್ಪಮಟ್ಟಿಗೆ ವಿಸ್ತಾರಗೊಂಡವು. ಧಾರ್ಮಿಕ ತತ್ವಗಳ ಪ್ರತಿಪಾದನೆ, ಪ್ರಚಾರ, ಮಹಾಪುರುಷರ ಲೀಲಾಸದೃಶ ಚರಿತ್ರೆಗಳಿಗೆ ಇಲ್ಲಿ ಹೆಚ್ಚಿನ ಒತ್ತು ಬಿದ್ದಿತು. ಒಂದು ರೀತಿಯಲ್ಲಿ 'ಹೆರ್ಸ್ಕೊವಿಟ್ಸ್' ಅವರು ಹೇಳುವಂತೆ "ವಿಶ್ವಾಸದ ಕರಾರು ಪಾತ್ರಗಳಾಗಿ ಪುರಾಣಗಳು ಜನಪ್ರಿಯತೆಗಳಿಸತೊಡಗಿದವು" (ಲಕ್ಕಪ್ಪಗೌಡ ಎಚ್.ಜೆ. (ಸಂ); ೧೯೯೧; ಪು. ೪೨). ಪುರಾಣಗಳು, ಜನಪದರೆಲ್ಲ ನಂಬಿ ಬಳಕೆಗೆ ತಂದ ಸಂಗತಿಗಳನ್ನೇ ಪ್ರತಿಪಾದನೆ ಮಾಡುತ್ತವೆ. ಹೀಗಾಗಿ ಶಿಷ್ಟಪದ ಪುರಾಣಗಳ ವಸ್ತು ಮೂಲ ಜಾನಪದ ಎನಿಸಿಕೊಳ್ಳುತ್ತದೆ. ಶಿಷ್ಟ ಪುರಾಣಗಳ ನಂತರದ ಸೃಷ್ಟಿಗಳು, ಪುರಾಣ ಕಾವ್ಯಗಳು ಮತ್ತು ಧಾರ್ಮಿಕ ಕಾವ್ಯಗಳಾಗಿರುತ್ತವೆ. ಪ್ರತಿಭಾವಂತರಾದ ಕವಿಗಳು ಧರ್ಮದ ಒಳತಾತ್ವಿಕತೆಯ ಸತ್ಯಾಸತ್ಯತೆಯನ್ನು ಮನಗಂಡು ಆ ಧರ್ಮದ ನೆಲೆಯಲ್ಲಿ ಪುರಾಣಗಳನ್ನು ಕಟ್ಟುವ ಕೆಲಸ ಮಾಡಿದರನ್ನಬಹುದು. ಪುರಾಣವನ್ನು ಧರ್ಮದ ಹಿನ್ನೆಲೆಯಲ್ಲಿ ನೋಡುವುದಾದರೆ ಜೈನ ಕವಿಗಳೆ ಪುರಾಣ ಕಾವ್ಯ ಪರಂಪರೆಯನ್ನು ಪ್ರಾರಂಭಿಸಿದವರು. ಇವರು ತಮ್ಮ ಕಾವ್ಯಗಳಲ್ಲಿ ಮಹಾಪುರುಷರ ದಿವ್ಯ ಚರಿತ್ರೆಯನ್ನು, ಅವರು ಲೋಕೋದ್ಧಾರಕ್ಕಾಗಿ ಮಾಡಿದ ದಿವ್ಯೋಪದೇಶವನ್ನು ಮತ್ತು ವಿಶಿಷ್ಟ ಲಕ್ಷಣಗಳಿಂದ ಬದ್ಧವಾದ ಕೃತಿಗಳನ್ನು ಜೈನ ಕವಿಗಳು ರಚಿಸತೊಡಗಿದರು.

ಹತ್ತನೆಯ ಶತಮಾನದಿಂದ ಪ್ರಾರಂಭವಾಗುವ ಕನ್ನಡ ಸಾಹಿತ್ಯವು ಒಂದಲ್ಲ ಒಂದು ಕಾರಣದಿಂದ ಅದು ಪಡೆದುಕೊಂಡ ವಸ್ತು, ಪುರಾಣ ಮತ್ತು ಮಹಾಕಾವ್ಯಗಳಿಂದ ಆಯ್ದುಕೊಂಡದ್ದಾಗಿದೆ. ಪುರಾಣಗಳು,

ರಾಮಾಯಣ, ಮಹಾಭಾರತದಂಥ ಮಹಾಕಾವ್ಯಗಳು ಮನುಷ್ಯ ಸಂಸ್ಕೃತಿಯ ಮುಖ್ಯ ಅಂಗಗಳೇ ಆಗಿವೆ. ಇದರಿಂದ ಒಂದು ಜನಾಂಗವನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲು ಇವುಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ಭಾರತೀಯ ಭಾಷಾ ಸಾಹಿತ್ಯದ ಮೇಲೆ ಪುರಾಣಗಳು ಮತ್ತು ಮಹಾಕಾವ್ಯಗಳು ಅಗಾಧವಾದ ರೀತಿಯಲ್ಲಿ ಪರಿಣಾಮ ಬೀರಿದವು. ಕವಿಗಳ ಸೃಜನಶೀಲ ಸಾಮರ್ಥ್ಯದ ಅಭಿವ್ಯಕ್ತಿಗೆ ಪೂರಕವೂ ಮತ್ತು ಸವಾಲುಗಳಾದವು. ಇವುಗಳಿಂದ ಸ್ಫೂರ್ತಿ ಪಡೆಯದೆ ಇರುವ ಯಾವುದೇ ಒಂದು ಜನಾಂಗದ, ಭಾಷಾ ಸಾಹಿತ್ಯದ ಪರಂಪರೆ ಇದೆ ಎಂಬುದಿಲ್ಲ. ಯಾಕೆಂದರೆ ಇವುಗಳಲ್ಲಿ ಕಾಲಮಾನದ ಚಿಂತನೆಗಳಿವೆ. ಬದುಕಿಗೆ ಅಗತ್ಯವಾದ ನೀತಿ, ಆದರ್ಶಗಳ ಮಾದರಿಗಳಿವೆ. ಈ ಕಾರಣದಿಂದ ಇವು ಸಂವಹನೆಗೊಳ್ಳುತ್ತಲೇ ಬೆಳೆಯುತ್ತವೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪನಿಂದ ಹಿಡಿದು ಈ ಹೊತ್ತಿನ ಆಧುನಿಕ ಸಾಹಿತ್ಯವನ್ನು ಅವಲೋಕಿಸಿದರೆ, ಪುರಾಣ ಮತ್ತು ಚರಿತ್ರೆಯಿಂದ ವಸ್ತುವನ್ನು ಪಡೆದುಕೊಂಡಿರುವುದು ಕಾಣುತ್ತದೆ. ಪುರಾಣ ಮತ್ತು ಚರಿತ್ರೆಯು ಮತ್ತೆ ಮತ್ತೆ ಸಾಹಿತ್ಯದಲ್ಲಿ ಪುನಾರಚನೆಯಾಗುತ್ತಿರುವುದು ಕುತೂಹಲಕಾರಿ ಯಾದ ಸಂಗತಿಯಾಗಿದೆ. ನಿರೂಪಣೆ ಮತ್ತು ವ್ಯಾಖ್ಯಾನ ಎರಡೂ ನೆಲೆಯಲ್ಲಿ ಇದು ಅಭಿವ್ಯಕ್ತವಾಗುತ್ತಾ ಮುಂದುವರಿದಿದೆ. ಆದಿಕವಿ ಪಂಪನು ತನ್ನ ಎರಡು ಕಾವ್ಯಗಳಿಗೆ ಆಧರಿಸಿದ ವಸ್ತುವು ಪುರಾಣ ಮತ್ತು ಮಹಾಕಾವ್ಯಗಳಿಂದಲೇ; 'ಪಂಪ ಭಾರತ'ಕ್ಕೆ ವ್ಯಾಸನ ಮಹಾಭಾರತವನ್ನು ಆಶ್ರಯಿಸಿದ್ದಾನೆ. ಮಹಾಭಾರತದ ವಸ್ತುವನ್ನು ಆಧರಿಸಿದ್ದರೂ ಪಂಪ ತನ್ನ ಯುಗದ ಧರ್ಮವನ್ನು ಪ್ರತಿಪಾದಿಸಿರುವುದಿಂದ ಅದೊಂದು ಶ್ರೇಷ್ಠ ಸೃಜನಶೀಲ ರಚನೆಯಾಗಿದೆ. ಪಂಪನ ಕೃತಿಯಲ್ಲಿ ಅರಿಕೇಸರಿಯನ್ನು ಕಥಾನಾಯಕ ಅರ್ಜುನ ನೊಂದಿಗೆ ಹೋಲಿಸಿ ಪಂಪ ತನ್ನ ಕೃತಿಯ ನಾಯಕನನ್ನಾಗಿಸಿದ್ದಾನೆ. ಪಾಂಡವರಲ್ಲಿ ನಾಯಕ ಧರ್ಮರಾಯ ನಾಗಿ ಕಂಡರೂ, ಮಧ್ಯಮ ಪಾಂಡವನಾದ ಅರ್ಜುನನ್ನೇ ಆಯ್ದುಕೊಂಡು ನಾಯಕನನ್ನಾಗಿ ಮಾಡಿದ್ದು ವಿಶೇಷವಾಗಿದೆ. ಪಂಪನ ಕಾವ್ಯಮಾರ್ಗವನ್ನು ಮುಂದೆ ರನ್ನ ಮತ್ತಿತರ ಕವಿಗಳು ಅನುಸರಿಸಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಜೈನ ಕವಿಗಳ ಅಮೋಘವಾದ ಕೊಡುಗೆಗಳೆಂದರೆ ಜೈನ ಪುರಾಣಗಳು. ಹತ್ತನೆಯ ಶತಮಾನದಿಂದ ಪ್ರಾರಂಭವಾದ ಈ ಪುರಾಣಗಳ ಬೆಳೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹು ಹುಲುಸಾಗಿ ಬೆಳೆದು ಬಂದಿದೆ. ಕನ್ನಡ ಜೈನ ಪುರಾಣಗಳೆಂದರೆ, ಗುಣವರ್ಮರ 'ಹರಿವಂಶ ಪುರಾಣ' ಪಂಪನ 'ಆದಿಪುರಾಣ', ರನ್ನನ 'ಅಜಿತಪುರಾಣ', ಪೊನ್ನನ 'ಶಾಂತಿನಾಥ ಪುರಾಣ', ಚಾವುಂಡರಾಯನ 'ತ್ರಿಷಷ್ಟಿಲಕ್ಷಣ ಮಹಾಪುರಾಣ', ನಾಗಚಂದ್ರನ 'ಮಲ್ಲಿನಾಥ ಪುರಾಣ' ಎರಡನೇ ನಾಗವರ್ಮನ 'ವರ್ಧಮಾನ ಪುರಾಣ', ನೇಮಿಚಂದ್ರನ 'ನೇಮಿನಾಥ ಪುರಾಣ', ಜನ್ನನ 'ಅನಂತನಾಥ ಪುರಾಣ' ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪುರಾಣ ಕೃತಿಗಳು ಪುನರ್‌ಕಥನಗೊಂಡು ತನ್ನ ಕಾಲದ ಅಗತ್ಯಗಳ ಹಿನ್ನೆಲೆಯಲ್ಲಿ ಜನ್ಮ ತಾಳಿರುವುದನ್ನು ನೋಡಬಹುದು. ಕನ್ನಡ ಕಾವ್ಯ ಚರಿತ್ರೆಯ ಅನಿವಾರ್ಯ ಭಾಗವೆಂಬಂತೆ ಕಾಣಿಸಿ ಕೊಂಡ ಹಲವು ಪುರಾಣ ಕಾವ್ಯಗಳು, ಕಾವ್ಯ ಧರ್ಮ ಮತ್ತು ಧರ್ಮಗಳ ಸಮನ್ವಯಕ್ಕೆ ನಿದರ್ಶನ

ವಾಗಿರುವಂತೆ ನಮ್ಮ ಕವಿಗಳ ತಾತ್ವಿಕತೆ, ವೈಚಾರಿಕತೆಯ ದೃಷ್ಟಿಕೋನಕ್ಕೆ ಅವು ನಿರ್ದಶವಾಗಿ ನಿಲ್ಲುತ್ತವೆ. ಕನ್ನಡಕ್ಕೆ ಮೊದಲ ಜೈನ ಪುರಾಣ ನೀಡಿರುವ ಪಂಪನಾಗಲಿ, ನಂತರ ಆ ದಾರಿಯಲ್ಲಿ ನಡೆದ ಹೋದ ಪೊನ್ನ, ರನ್ನ, ನಾಗವರ್ಮ, ಶಾಂತಿನಾಥ, ನಾಗಚಂದ್ರ, ಜನ್ನ ಇತ್ಯಾದಿ ಕವಿಗಳಾಗಲಿ ಕನ್ನಡ ಕಾವ್ಯದಲ್ಲಿ ಪುರಾಣ ಪರಂಪರೆಯೊಂದನ್ನು ಗಟ್ಟಿಗೊಳಿಸಿದರು. ಪಂಪನು ಪ್ರಾಕೃತ - ಸಂಸ್ಕೃತ ಜೈನ ಪುರಾಣಗಳನ್ನು ಅನುಸರಿಸಿ ಕನ್ನಡದಲ್ಲಿ ಪುರಾಣದ ಲಕ್ಷಣವನ್ನು ಹೇಳಿದ ಮೊದಲ ಕವಿ. ಆತನು 'ಆದಿಪುರಾಣ'ದಲ್ಲಿ;

> "ಆ ಪುರಾಣಕ್ಕಂ ಲೋಕಾಕಾರಕಥನಮುಂ, ದೇಶನಿವೇಶೋಪದೇಶಮುಂ,
> ನಗರ ಸಂಪತ್ಪರಿವರ್ಣನಮುಂ, ರಾಜ್ಯರಾಮನೀಯಕಾಖ್ಯಾನಮುಂ,
> ತೀರ್ಥಮಹಿಮಾ ಸಮರ್ಥನಮುಂ, ಚತುರ್ಗತಿ ಸ್ವರೂಪ ನಿರೂಪಣಮುಂ,
> ತಪೋದಾನ ವಿಧಾನ ವ್ಯಾವರ್ಣನಮುಂ, ತತ್ಫಲ ಪ್ರಾಪತ್ತಿ
> ಪ್ರಕಟನಮುಮೆಂದಿಂತವಯವಂಗಳೆಂಟಕ್ಕುಂ".

(ಗುರುಪಾದ ಮುರಿಗುದ್ದಿ (ಸಂ); ೨೦೦೧; ಪು. ೪)

ಕನ್ನಡದ ಮಟ್ಟಿಗೆ ಪುರಾಣಕ್ಕೆ ಮೊದಲು ಲಕ್ಷಣ ನೀಡಿ, ಅದರ ಸ್ವರೂಪ ನಿರ್ಧರಿಸಿದ ಪಂಪ, ಸಹಜವಾಗಿಯೆ ಮುಂದಿನ ಜೈನ ಕವಿಗಳನ್ನು ಗಾಢವಾಗಿ ಪ್ರಭಾವಿಸಿದ್ದಾನೆ. ಜೈನ ಧರ್ಮದ ಪ್ರಕಾರ ಜೀವದ ವಿಕಾಸ ಪಥದ ಕಥನಗಳು ಮತ್ತು ಕರ್ಮ ಬಂಧದಿಂದ ಪೂರ್ತಿ ಬಿಡುಗಡೆಗೊಂಡು ಕೊನೆಗೆ 'ಜಿನ' ಅವಸ್ಥೆಗೆ ಸೇರುವ ವಿಚಾರಗಳು ಈ ಪುರಾಣಗಳಲ್ಲಿ ತುಂಬಿಕೊಳ್ಳುತ್ತವೆ.

ಜೈನ ಕವಿಗಳು ಮಹಾಭಾರತವನ್ನು ಬರೆದಂತೆ ರಾಮಾಯಣಗಳನ್ನು ಬರೆದಿದ್ದಾರೆ. ಕನ್ನಡ ಪರಂಪರೆಯನ್ನು ಆಶ್ರಯಿಸುವ ಮೂಲಕ ಅಲ್ಲಿಯು ಧರ್ಮಾಚರಣೆಗಳನ್ನೇ ಆಧರಿಸಿ ವೈದಿಕ ರಾಮಾಯಣ ಗಳು ರಚಿತವಾಗಿ ಒಂದು ಪರಂಪರೆಗೆ ಕಾರಣವಾದಂತೆ, ಜೈನ ಧರ್ಮದ ಉದ್ದೇಶಕ್ಕನುಗುಣವಾಗಿ ಜೈನ ರಾಮಾಯಣಗಳ ಪರಂಪರೆಯೊಂದಿದೆ. ವಿಮಲ ಸೂರಿ ಪ್ರಾಕೃತದಲ್ಲಿ ಬರೆದ 'ಪಉಮಚರಿಯ' ಮತ್ತು ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ರಚಿಸಿದ 'ಉತ್ತರ ಪುರಾಣ', ಕನ್ನಡದಲ್ಲಿ ಈ ಎರಡು ಪುರಾಣಗಳ ಪ್ರಭಾವವೂ ಕಾಣಿಸಿಕೊಂಡಿದೆ. ಹದಿನಾರನೆಯ ಶತಮಾನದ 'ಸಾಳ್ವ ಭಾರತ'ವು ಮೊದಲ ಜೈನ ಭಾರತವಾಗಿದೆ. ಇದಕ್ಕೆ ಮೂಲವಾದುದ್ದು 'ಹರಿವಂಶ ಪುರಾಣ'. ಇದು ಎಂಟನೆಯ ಶತಮಾನದಲ್ಲಿದ್ದ ಜಿನಸೇನಾಚಾರ್ಯನದು. ಹರಿವಂಶ - ಕುರುವಂಶಗಳ ಕಥೆ ಇದರಲ್ಲಿ ಜೈನ ದೃಷ್ಟಿಯಿಂದ ನಿರೂಪಿತವಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಸಾಹಿತ್ಯದ ವಾತಾವರಣ ತೀರಾ ಬದಲಾಯಿತು. ಶಿವಶರಣರು ವಚನಗಳನ್ನು ಬರೆಯುವುದರ ಮೂಲಕ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಕಲ್ಪಿಸಿದರು. ವಸ್ತು, ಭಾಷೆ ಮತ್ತು ನಿರೂಪಣೆಯ ದೃಷ್ಟಿಯಿಂದ ಹಿಂದಿನ ಸಾಹಿತ್ಯಕ್ಕಿಂತ ಸಮಗ್ರವಾಗಿ ಬದಲಾಯಿತು. ಹಾಗೆ ನೋಡಿದರೆ ಸಾಹಿತ್ಯ ರಚಿಸುವುದೇ ಅವರ ಗುರಿಯಾಗಿರಲಿಲ್ಲ. ಶರಣರು ಮನುಷ್ಯ ಬದುಕಿಗೆ ಹೊಸ ಶಕ್ತಿ ಒದಗಿಸುವ ಮೂಲಕ ಒಂದು ಸಾಂಸ್ಕೃತಿಕವಾದ ಒಂದು ಹೊಸ ತಿರುವು ಸೃಷ್ಟಿಸಿದರು. ಅಲ್ಲಿಯವರೆಗಿದ್ದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವಾತಾವರಣಕ್ಕೆ ವಿರುದ್ಧವಾಗಿ ಬೇರೆಯದೇ ಒಂದು ವ್ಯವಸ್ಥೆಯನ್ನು

ಹುಟ್ಟು ಹಾಕುವ ಸಲುವಾಗಿ, ಹಿಂದಿದ್ದ ಬಹುತೇಕ ಮೌಲ್ಯಗಳನ್ನು ತಿರಸ್ಕರಿಸಿ, ಅವುಗಳ ಸ್ಥಳದಲ್ಲಿ ತಮ್ಮದೇ ಆದ ವ್ಯವಸ್ಥೆಯೊಂದನ್ನು ಸ್ಥಾಪಿಸಲು ಹೆಣಗಿದರು. ಬಸವಣ್ಣನ ನೇತೃತ್ವದಲ್ಲಿ ಅಸಂಖ್ಯಾತ ಜನ ಶರಣರು, ಸಾಮಾಜಿಕ ಬದಲಾವಣೆಗೆ ಶ್ರಮಿಸಿದರು. ವೈದಿಕ ಧರ್ಮವನ್ನೇ ತಿರಸ್ಕರಿಸಿ, ಅದು ಒಳಗೊಂಡಿದ್ದ ಕರ್ಮ ಸಿದ್ಧಾಂತ, ವರ್ಣಾಶ್ರಮ ಪದ್ಧತಿಯನ್ನು ನಿರಾಕರಿಸಿದರು. ಎಲ್ಲರೂ ಸಮಾನರೆಂದು ಭಾವಿಸಿ, ಸ್ತ್ರೀಯರಿಗೆ ಗೌರವದ ಸ್ಥಾನಮಾನ ಕಲ್ಪಿಸಿದರು. ಹೀಗಾಗಿ ಶರಣರು ಸಂಸ್ಕೃತ ಭಾಷೆಯನ್ನು, ವೈದಿಕ ಸಾಹಿತ್ಯವನ್ನು ಬಹಿರಂಗವಾಗಿ ತೆಗಳಿದರು.

> "ವೇದಶಾಸ್ತ್ರಾಗವು ಪುರಾಣಂಗಳೆಂಬುವ
> ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ
> ಅವು ಕುಟ್ಟತೀರ?" ....ಅಕ್ಕಮಹಾದೇವಿ.

ಹೀಗೆ ವೇದ, ಪುರಾಣ, ರಾಮಾಯಣ, ಮಹಾಭಾರತಗಳನ್ನು ತಿರಸ್ಕರಿಸಿದರು. ತಿರಸ್ಕರಿಸಿದ ಇವರು ಪ್ರತಿ ಸಂಸ್ಕೃತಿಯನ್ನು ನಿರ್ಮಾಣ ಮಾಡಿದರು. ಜೊತೆಗೆ ವೈದಿಕ ಅಥವಾ ಪರಂಪರಾಗತ ಪುರಾಣಗಳನ್ನು ಅಲ್ಲಗೆಳೆದು ಪ್ರತಿ ಪುರಾಣಗಳನ್ನು ಸೃಷ್ಟಿಸುವತ್ತ ದೃಷ್ಟಿಹರಿಸಿದರು.

> "ಎಲ್ಲ ಪುರಾಣಕ್ಕೆ ಹೆಸರುಂಟು. ನಮ್ಮ ಪುರಾಣಕ್ಕೆ ಹೆಸರಿಲ್ಲ ನೋಡವ್ವಾ
> ಲಿಂಗದ ಮಹತ್ವದ ಹೇಳಿದಲ್ಲಿ ಲಿಂಗ ಪುರಾಣವೆನಿಸಿತ್ತು.
> ಷಣ್ಮುಖನ ಮಹಾತ್ಮ್ಯವ ಹೇಳಿದಲ್ಲಿ ಸ್ಕಂದ ಪುರಾಣವೆನಿಸಿತು.
> ವೀರಭದ್ರನ ಮಹಾತ್ಮ್ಯವ ಹೇಳಿದಲ್ಲಿ ದಕ್ಷಖಂಡವೆನಿಸಿತ್ತು
> ಶಿವನ ಮಹಿಮೆ, ಕಾಶೀ ಮಹಿಮೆಯ ಹೇಳಿದಲ್ಲಿ ಕಾಶಿ ಪುರಾಣವೆನಿಸಿತ್ತು
> ನಮ್ಮ ಪುರಾಣ ಹೆಸರಿಡಬೇಕೆಂದಡೆ,
> ನಿಶ್ಶಬ್ದ ನಿರವಲಯ ಪುರಾಣಗಳ ತಾನೆಯೊಯಿತ್ತು ನೋಡಾ".
>
> (- ಸಿದ್ಧರಾಮ)

ಇಲ್ಲಿ ಹಳೆ ಪುರಾಣಗಳ ಜಾಗದಲ್ಲಿ ಹೊಸ ಪುರಾಣಗಳ ಉದ್ದೇಶವನ್ನು ಪ್ರಸ್ತಾಪಿಸುತ್ತಾರೆ. ಇದು ಪುರಾಣಗಳ ದೃಷ್ಟಿಯಿಂದ ಮಾತ್ರವಾಗದೆ, ಸಾಹಿತ್ಯದ ದೃಷ್ಟಿಯಿಂದಲೂ ಅನನ್ಯವಾದದ್ದು, ಪುರಾಣದ ರೂಪಕಗಳನ್ನು ತಮ್ಮ ಕಾಲದ ಸಂಸ್ಕೃತಿಯ ನೆಲೆಗಳಿಂದಲೆ ಎತ್ತಿ ಕಟ್ಟುವುದರ ಮೂಲಕ, ಅದಕ್ಕೊಂದು ಹೊಸ ಆಯಾಮ ಸಾಧ್ಯವಾಗುವಂತೆ ಮಾಡಿದರು.

ಹೀಗೆ ಕನ್ನಡ ಭಾಷೆ-ಸಾಹಿತ್ಯಗಳ ದಿಕ್ಕು-ದಿಸೆಗಳನ್ನು ಬದಲಾಯಿಸಿದ ವಚನಕಾರರ ಆಂದೋಲನವು ಜನಪರವಾದ ಚಿಂತನೆಗಳನ್ನು ಗಟ್ಟಿಗೊಳಿಸಿದಂತೆ, ಜನಮುಖಿಯಾದ ಕಾವ್ಯಕ್ಕೆ ಪ್ರೇರಣೆಯನ್ನು ನೀಡಿತು. ವಚನಕಾರರ ನಂತರ ಬಂದ ಹರಿಹರ ಕವಿಯು ತನ್ನ ಕ್ರಾಂತ ಸೃಷ್ಟಿ, ಮುಂದಾಲೋಚನೆಗಳಿಂದಾಗಿ ರಗಳೆಗಳ ಹೊಸದಾರಿ ನಿರ್ಮಿಸಿದನು. ಅಲ್ಲದೆ ವೀರಶೈವ ಪುರಾಣಗಳಿಗೆ ಹರಿಹರನ ಧ್ಯೇಯ-ಧೋರಣೆಗಳೇ ಒಂದು ಬಗೆಯ ಚೌಕಟ್ಟು ಒದಗಿಸುತ್ತವೆ. ರಾಜಪ್ರಭುತ್ವ ಕಾಲದ ಪಾಂಡಿತ್ಯಪೂರ್ಣ ಚಂಪೂ ಕೃತಿಗಳಿಗೆ

ಬದಲಾಗಿ, ದೇಸಿ ರೂಪದ ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯಗಳಲ್ಲಿ ವೀರಶೈವ ಪುರಾಣಗಳು ಅಭಿವ್ಯಕ್ತಗೊಂಡುದು ಮಹತ್ವದ ಬದಲಾವಣೆಯಾಗಿದೆ. ಕನ್ನಡದ ಹಲವು ಕಾವ್ಯ ಕೃತಿಗಳಲ್ಲಿ ಗುರು-ಶಿಷ್ಯನಿಗೆ, ಮುನಿ-ರಾಜನಿಗೆ, ಪತಿ-ಸತಿಗೆ, ಪ್ರೇಮಿ-ಪ್ರೇಯಸಿಗೆ, ಭಕ್ತ-ದೇವನಿಗೆ ಕಾವ್ಯ ನಿರೂಪಿಸಿದ ತಂತ್ರ ಬಳಕೆಯಾಗಿದೆ. ಇದು ಕೂಡ ವಚನ ಚಳುವಳಿಯ ತರುವಾಯ ಕಾವ್ಯದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದೆ. ಚಂಪೂ ಕಾವ್ಯಗಳಿಗಿಂತ ಹಾಡುಗಬ್ಬದ ಕಾವ್ಯಗಳಲ್ಲಿ ಈ ತಂತ್ರ ವ್ಯಾಪಕವಾಗಿದೆ. ಇದು ಮುದ್ದಣನ ಕೃತಿಗಳವರೆಗೂ ಭಿನ್ನ ಭಿನ್ನವಾಗಿ ಕಾಣಿಸಿದೆ.

ಇಂಥ ಒಟ್ಟು ಕನ್ನಡ ಸಾಹಿತ್ಯ ಸಂದರ್ಭವನ್ನು, ಕೆ. ಎಲ್. ಗೋಪಾಲ ಕೃಷ್ಣಯ್ಯನವರು ತಮ್ಮ 'ಪುರಾಣ' ಕೃತಿಯಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ. "ಮೂಲ ರೂಪ ಎಂದು ಭಾವಿಸಿರುವ ಪುರಾಣ ಸಂದರ್ಭಕ್ಕೂ, ಪ್ರಸ್ತುತ ಸಾಹಿತ್ಯ ಕೃತಿಗೂ ವ್ಯತ್ಯಾಸಗಳಿರುವುದು ಕಂಡು ಬಂದಾಗ ಇವುಗಳ ಪೈಕಿ ಯಾವುದು 'ಸರಿ' ಯಾವುದು 'ತಪ್ಪು' ಎಂದು ಪ್ರಶ್ನಿಸುವ ಮತ್ತು ಸರಿಯಾದುದ್ದನ್ನು ತಿಳಿದುಕೊಳ್ಳಬೇಕೆಂಬ ಮನಸ್ಸಾಗುವುದು ಸಹಜ. ಆದರೆ ಒಂದು ದೃಷ್ಟಿಯಿಂದ ಇಂಥ ಪ್ರಶ್ನೆಯೇ ಅನಗತ್ಯ: 'ಸರಿ', 'ತಪ್ಪು'ಗಳ ನಿರ್ಣಯವು ಇಲ್ಲಿ ಕೆಲಸಕ್ಕೆ ಬಾರದು. ಏಕೆಂದರೆ ಸೃಜನಾತ್ಮಕ ತಪ್ಪುಗಳ ರೂಪದಲ್ಲಿಯೇ ಪುರಾಣವು ಬದುಕಿ ಬಾಳುತ್ತದೆ. ಕರಾರುವಕ್ಕಾದುದನ್ನು ಮಾತ್ರವೇ ಒಪ್ಪಿಕೊಳ್ಳಬೇಕೆಂಬ ಉಮೇದಿನಿಂದ ಜನರು 'ತಪ್ಪು'ಗಳನ್ನು ಖಂಡಿಸತೊಡಗಿದರೆ, ಸೃಜನಾತ್ಮಕ ಸಾಹಿತ್ಯ ಸಂವೇದನೆಯು ಬತ್ತಿ ಹೋಗಿ, ಕೇವಲ ಹಳೆಯದರ ನಕಲು ಪ್ರತಿಗಳು ಮಾತ್ರ ಹೊರಬರಲಾರಂಭಿಸುತ್ತವೆ. ಆದ್ದರಿಂದ ಚರಿತ್ರೆಯ ಪಾಂಡಿತ್ಯವನ್ನು ತಮ್ಮ ಮೇಲೆ ಹೇರುವ ತವಕ ಮತ್ತು ಉದ್ದೇಶಪೂರ್ವಕವಾದ ಉಪೇಕ್ಷೆಗಳ ಹೊರತಾಗಿ ಪುರಾಣಗಳು ಬೇರೆ ಯಾವುದೇ ಬಗೆಯ 'ಉಪಚಾರ'ವನ್ನು ಒಪ್ಪಿಕೊಳ್ಳಬಲ್ಲವು. ಉಪೇಕ್ಷೆಯಿಂದ ಪುರಾಣಗಳಿಗೆ ತುಕ್ಕು ಹಿಡಿಯುತ್ತದೆ. ಆದರೆ ಸೃಜನಶೀಲರು ಮಾಡುವ ತಪ್ಪುಗಳಿಂದ ಅವು 'ಪುನಃ-ಪುರಾಣ'ಗೊಳ್ಳುತ್ತಿವೆ" (ಕೆ.ಎಲ್. ಗೋಪಾಲಕೃಷ್ಣಯ್ಯ; ೧೯೯೦; ಪು. ೭೧-೭೨).

ಹದಿನೆಂಟನೆಯ ಶತಮಾನದಲ್ಲಿ ಕಳಲೆ ನಂಜರಾಜನು 'ಹರಿವಂಶ'ವನ್ನು ಹರಿದಾಸನು 'ಸಂಕ್ಷೇಪ ಭಾಗವತ'ವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿರುವರು. ಹತ್ತೊಂಬತ್ತನೆಯ ಶತಮಾನದಲ್ಲಿ ಮೈಸೂರಿನ ಅರಸರಾದ ಕೃಷ್ಣರಾಜರು 'ಭಾಗವತ' ಮತ್ತು 'ಹರಿವಂಶ'ವನ್ನು ರಚಿಸಿದರೆ, ಇಪ್ಪತ್ತನೆಯ ಶತಮಾನದಲ್ಲಿ ಗಳಗನಾಥರು 'ವಚನ ಭಾಗವತ'ವನ್ನು, ಎ.ಆರ್. ಕೃಷ್ಣಶಾಸ್ತ್ರಿಯವರು 'ವಚನ ಭಾರತವ'ನ್ನು ರಚಿಸಿರುವರು. ಇನ್ನೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣ ಕಾವ್ಯಪರಂಪರೆಯು ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಬಂದ ಮುದ್ದಣ ಕವಿಯು ರಚಿಸಿದ 'ರಾಮಾಯಣ'ಗಳಿಂದ ಪ್ರಾರಂಭವಾಗುತ್ತದೆ. ಈ ಕಾಲಾಘಟ್ಟದಲ್ಲಿ ಪೌರಾಣಿಕ ಉಪಾಖ್ಯಾನಗಳು ಹೊಸ ಹುಟ್ಟನ್ನು ಪಡೆದವು. ಮುದ್ದಣನಿಂದ 'ಅದ್ಭುತ ರಾಮಾಯಣ', 'ಶ್ರೀರಾಮ ಪಟ್ಟಾಭಿಷೇಕ' ಮತ್ತು 'ರಾಮಶ್ವಮೇದ'ವೆಂಬ ಕೃತಿಗಳ ರಚನೆಯಾದವು. ಇಪ್ಪತ್ತನೆಯ ಶತಮಾನದ ಪ್ರಾರಂಭಕ್ಕಾಗಲೇ ಸಾಹಿತ್ಯದ ದಿಕ್ಕು ಬದಲಾಯಿತು.

ಭಾರತೀಯ ಸಮಾಜದ ಮೇಲೆ ಆಧುನಿಕತೆ ದಾಳಿ ನಡೆಸಿತ್ತು. ಮಹಾಕಾವ್ಯಗಳು ಹುಟ್ಟುವ ಸಾಧ್ಯತೆಗಳು ಕಮ್ಮಿಯಾದವು. ಮಹಾಕಾವ್ಯಗಳ ಸ್ಥಾನದಲ್ಲಿ ಕಾದಂಬರಿಗಳು ನಿಲ್ಲ ತೊಡಗಿದವು. ಕಾವ್ಯವು ಭಾವಗೀತೆಯ ಸ್ಥಾನಕ್ಕೆ ಬಂದಿತು. ಸಣ್ಣಕತೆ ಮತ್ತು ನಾಟಕಗಳು ಬದಲಾಗುತ್ತಿದ್ದ ಸಮಾಜದಲ್ಲಿ ಉದ್ಭವಿಸುತ್ತಿದ್ದ ಸಾಮಾಜಿಕ ಸಮಸ್ಯೆಗಳನ್ನು ಪ್ರತಿಬಿಂಬಿಸಲು ಮೀಸಲಾದವು. ಸಾಹಿತ್ಯದ ಪ್ರಕಾರಗಳ ಸಂಖ್ಯೆ ಬೆಳೆದು ಅವುಗಳದೇ ಆದ ವಸ್ತುವನ್ನು - ವಿಷಯವನ್ನು ಅವುಗಳಿಗಿರುವ ಮಿತಿಯಲ್ಲೇ ಬೆಳೆಯತೊಡಗಿದವು. ಕನ್ನಡದಲ್ಲಿ ನೂತನ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಸಣ್ಣಕಥೆ, ಕಾವ್ಯ, ನಾಟಕ, ಪ್ರಬಂಧ, ಮಹಾಕಾವ್ಯಗಳು ಹುಟ್ಟಿಕೊಂಡವು.

ಅಭಿನಯ ಪ್ರಧಾನವಾದ ನಾಟಕ ಕಲೆಗೂ, ಆಯಾ ಜನಾಂಗದ ಮತ ಧಾರ್ಮಿಕ ಆಚರಣೆಗಳಿಗೂ, ಆದ್ದರಿಂದ ಪುರಾಣಕ್ಕೂ, ಮೂಲದಲ್ಲಿಯೆ ಅತ್ಯಂತ ನಿಕಟವರ್ತಿಯಾದ ಸಂಬಂಧವಿರಬೇಕೆಂಬುದು ಸಂಸ್ಕೃತಿ ಶಾಸ್ತ್ರಜ್ಞರ ಸಾಮಾನ್ಯ ಅಭಿಪ್ರಾಯ. ನಮ್ಮ ನಾಡಿನಲ್ಲಿ ಪರಂಪರಾಗತವಾಗಿ ಬಂದ 'ಜನಪದ ರಂಗಭೂಮಿ' ಮತ್ತು 'ವೃತ್ತಿನಾಟಕ ಕಂಪನಿ'ಗಳಲ್ಲಿ ಪೌರಾಣಿಕ ಸಂದರ್ಭಗಳನ್ನೂ, ದೇವ-ದೇವತೆಗಳ ಪಾತ್ರಗಳನ್ನು ಒಳಗೊಂಡ ನಾಟಕಗಳನ್ನು ಬಹುಹಿಂದಿನಿಂದ ಅಭಿನಯಿಸುತ್ತಾ ಬಂದಿದ್ದಾರೆ. 'ರಾಮಾಯಣ', 'ಮಹಾಭಾರತ'ಗಳಿಂದ ಮಾತ್ರವಲ್ಲದೆ 'ಶಿವಪುರಾಣ', 'ಭಾಗವತ ಪುರಾಣ', 'ದೇವಿ ಮಹಾತ್ಮೆ' ಮೊದಲಾದವುಗಳಿಂದ ಸನ್ನಿವೇಶಗಳನ್ನು ಆರಿಸಿಕೊಂಡಿದ್ದಾರೆ. ಪೌರಾಣಿಕ ನಾಟಕ ಎಂದೊಡನೆಯೇ ದೇವ-ದೇವತೆ ಋಷಿಗಳು ಪ್ರಧಾನ ಪಾತ್ರಗಳಾಗಿದ್ದು ಅವರ ಶಾಪ, ಅವತಾರ ಮೊದಲಾದ ಶಕ್ತಿ ಪ್ರದರ್ಶನವೇ ಪ್ರಧಾನವಾಗುಳ್ಳ ಸನಾತನ ಭಾರತೀಯ ಪುರಾಣ ಕತೆಗಳ ನಾಟಕ ರೂಪ ಎಂಬ ಕಲ್ಪನೆ ನಮ್ಮ ಮನಸ್ಸಿಗೆ ಬರುತ್ತದೆ. ಸ್ವತಂತ್ರಪೂರ್ವ ಕನ್ನಡ ನಾಟಕ ಪರಂಪರೆಯಲ್ಲಿ ವೃತ್ತಿ ನಾಟಕ ಕಂಪನಿಗಳಿಗಾಗಿ ಬರೆದ ನಾಟಕಗಳಲ್ಲಿ ದೈವೀ ಪವಾಡ, ಪೌರಾಣಿಕ ಸನ್ನಿವೇಶ, ಅಲೌಕಿಕ ನಾಯಕರ, ಲೌಕಿಕ ಅಭೀಪ್ಸೆಗಳ ಹಿನ್ನೆಲೆಯಲ್ಲಿ ಬೋಧಿಸಲ್ಪಡುವ ಸರಳ ನೀತಿಯೇ ನಾಟಕದ ಜೀವಳವಾಗಿದ್ದುವು. ಎಷ್ಟೋ ನಾಟಕಗಳಲ್ಲಿ ಸದ್ಯದ ಸಾಮಾಜಿಕ ಮೌಲ್ಯಗಳಿಗೆ ತೀರಾ ವ್ಯತಿರಿಕ್ತವಾದ ಸಹಗಮನ ವರ್ಣಾಶ್ರಮ ಧರ್ಮಗಳ ಪ್ರತಿಪಾದನೆ ಕ್ಷಾತ್ರಧರ್ಮದ ಶ್ಲಾಘನೆ ಇಂಥ ವಿಚಾರಗಳೇ ಪ್ರಧಾನ ಆಶಯಗಳಾಗಿದ್ದವು. 'ಪುರಾಣದ ವಸ್ತುವಿನ ವೈಭವೀಕರಣ ಹೆಚ್ಚಿನ ಜನಪ್ರಿಯ ನಾಟಕಗಳಿಂದಲೇ ಎಂಬುದನ್ನು ನಾವು ಮರೆಯುವಂತಿಲ್ಲ. ಸಂಸ್ಕೃತದ ಪ್ರಸಿದ್ಧ ನಾಟಕಗಳ ಅನುವಾದಿಂದ ಆರಂಭವಾದ ಪೌರಾಣಿಕ ನಾಟಕಗಳು ಸ್ವಾತಂತ್ರ್ಯ ಪೂರ್ವ ನಾಟಕ ಕಂಪನಿಗಳಲ್ಲಿ ವಿಜೃಂಭಿಸಿದವು. ಸಾಮಾಜಿಕ ನಾಟಕಗಳು ಹೆಚ್ಚು ಹೆಚ್ಚಾಗಿ ಬರಲು ಆರಂಭವಾದ ಮೇಲೂ ಪೌರಾಣಿಕ ನಾಟಕಗಳ ಕಡೆಗೆ ನಮ್ಮ ನಾಟಕಕಾರರ ಆಸಕ್ತಿ ಕಮ್ಮಿ ಆಗಲಿಲ್ಲ. ಕೇವಲ ಪವಾಡ - ಅತಿಮಾನುಷ ಮಾನವೀಯ ಮೌಲ್ಯ ಪ್ರತಿಪಾದನೆ, ಪುರಾಣ ಕತೆಗಳಿಗೆ ಹೊಸ ವ್ಯಾಖ್ಯಾನ ಆಯಾಮ ನೀಡುವಿಕೆ, ಪುರಾಣದ ಒಳ ಪಾತ್ರಗಳ ಉದಾತ್ತೀಕರಣದ ಮೇಲೆ ಒತ್ತು ಕೊಡುವ ನಾಟಕಗಳು ಬಂದವು. ಕನ್ನಡ ನಾಟಕ ರಚನೆಗೆ ಗ್ರೀಕ್ ರಂಗಭೂಮಿಯಿಂದ ಪ್ರೇರಣೆ ಪಡೆದ ಬಿ.ಎಂ. ಶ್ರೀಯವರು ಪೌರಾಣಿಕ ನಾಟಕಗಳನ್ನು ಬರೆಯುವವರಿಗೆ

ಒಂದು ಮೇಲ್ಪಂಕ್ತಿ ಹಾಕಿಕೊಟ್ಟರು. ಸಾಮಾನ್ಯವಾಗಿ ನಾಯಕನ ಸಾವಿನಲ್ಲಿ ಕೊನೆಗೊಳ್ಳುವ 'ದುರಂತ' ನಾಟಕಕ್ಕೆ 'ರುದ್ರನಾಟಕ'ವೆಂಬ ಹೆಸರನ್ನು ಕೊಟ್ಟವರು ಅವರೇ. ಶ್ರೀಯವರ 'ಅಶ್ವತ್ಥಾಮನ್', 'ಗದಾಯುದ್ಧ ನಾಟಕ', ಎಸ್.ವಿ. ರಂಗಣ್ಣನವರ 'ಹರಿಶ್ಚಂದ್ರ' - ಇಂತಹ ನಾಟಕಗಳು ಪೌರಾಣಿಕ ಪಾತ್ರಗಳಿಗೆ ಹೊಸ ರೂಪ ಕೊಡುವ ಪ್ರಯತ್ನಗಳು ನಡೆದವು. ಸಿ.ಕೆ. ವೆಂಕಟರಾಮಯ್ಯನವರ 'ಮಂಡೋದರಿ', 'ನಚಿಕೇತ', ವಿ.ಸೀ. ಅವರ 'ಆಗ್ರಹ', ಬಿ.ಎಂ. ಶ್ರೀಯವರ 'ಅಶ್ವತ್ಥಾಮನ್', ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ', 'ಯಮನ ಸೋಲು', 'ಬೆರಳಗೆಕೊರಳ್', 'ಶೂದ್ರ ತಪಸ್ವಿ', ಶ್ರೀರಂಗದ "ಕಚ-ದೇವಯಾನಿ', ಗೋವಿಂದ ಪೈಗಳ 'ಹೆಬ್ಬೆರಳು' ಇವು ಸ್ವಾತಂತ್ರ್ಯಪೂರ್ವದ ಕೆಲವು ಮುಖ್ಯ ಪೌರಾಣಿಕ ನಾಟಕಗಳು.

ಪೌರಾಣಿಕ ನಾಟಕಗಳಿಗೆ ಹೊಸ ಆಯಾಮ ಕೊಡುವ ಪ್ರಯತ್ನವನ್ನು, ಪುರಾಣ ಕತೆಯನ್ನು ಯಾವುದಾದರೊಂದು ಸಮಕಾಲೀನ ಸಮಸ್ಯೆಯ ಚಿತ್ರಣಕ್ಕೆ ಮಾನವೀಯ ಸಂಬಂಧದ ಪ್ರತಿಪಾದನೆಗೆ ಬಳಸಿದ್ದನ್ನು ಶ್ರೀರಂಗರ ನಾಟಕಗಳಲ್ಲಿ ಕಾಣುತ್ತೇವೆ. ಅವರ 'ಸಂಜೀವಿನೀ' ಇದಕ್ಕೆ ಒಳ್ಳೆಯ ಉದಾಹರಣೆ ಯಾಗಿದೆ. ಪುರಾಣ ಪ್ರತೀಕಗಳನ್ನು ಭಗ್ನಗೊಳಿಸದೆ ಪುರಾಣ ಕಾಲದ ಮಾನವೀಯ ತಾಕಲಾಟಗಳನ್ನು ವರ್ತಮಾನ ಕಾಲದ ಮಾನವೀಯ ತಾಕಲಾಟಗಳನ್ನಾಗಿ ಚಿತ್ರಿಸುವ ಅಪೂರ್ವ ಕುಸುರಿ ಕೆಲಸವನ್ನು ಶ್ರೀರಂಗರ ನಾಟಕಗಳಲ್ಲಿ ಕಾಣಬಹುದು.

ಗಿರೀಶ್ ಕಾರ್ನಾಡರ "ಯಾಯತಿ" ಆಧುನಿಕ ವಿಚಾರಶೀಲತೆ ಮತ್ತು ಅಪೂರ್ವ ಸಂಯೋಜನಾ ಕೌಶಲಗಳಿಂದ ಮೆರದ ನಾಟಕ. ಮಹಾಭಾರತದ ಯಾಯಾತಿಯ ಕಥೆಗೆ ಹೊಸ ಆಯಾಮವನ್ನು ಈ ನಾಟಕದಲ್ಲಿ ಕಾರ್ನಾಡರು ಒದಗಿಸಿದ್ದಾರೆ. ಪಾತ್ರಗಳ ಬಾಯಲ್ಲಿ ಬರುವ ಮಾತುಗಳು ನವ್ಯಪ್ರಜ್ಞೆಯ, ಅಂತರಂಗ ನಿರೀಕ್ಷಣೆ, ಮನೋವೈಜ್ಞಾನಿಕ ವಿಶ್ಲೇಷಣೆ, ಅನಾಥಪ್ರಜ್ಞೆಗೆ ಸಂಬಂಧಿಸಿವೆ. ಪುರಾಣದ ಚೌಕಟ್ಟಿನಲ್ಲಿ ಇವೇ ಮಾತುಗಳನ್ನು ಇರಿಸಿದಾಗಲೂ ಆ ಪಾತ್ರಗಳಿಗೆ ಕಿಂಚಿತ್ತೂ ದೋಷ ತಟ್ಟದಂತೆ ಸಂವೇದನೆಗಳ ಸರ್ವಕಾಲಿಕತೆಯನ್ನು ಈ ನಾಟಕದಲ್ಲಿ ತಂದಿದ್ದಾರೆ. ಚಂದ್ರಶೇಖರ ಕಂಬಾರರ 'ಋಷ್ಯಶೃಂಗ', 'ಹುಲಿಯ ನೆರಳು' ಆಧುನಿಕ ವಸ್ತುಗಳಿರುವ ನಾಟಕಗಳು ಜನಪದ ಪುರಾಣವನ್ನು ಆಧರಿಸಿ ಹಳ್ಳಿಯೊಂದರ ಅವನತಿಯನ್ನು ಚಿತ್ರಿಸುವ 'ಋಷ್ಯಶೃಂಗ' ನಾಟಕ-ಕಾವ್ಯಗಳ ಅದ್ಭುತ ಸಂಗಮ ವಾಗಿರುವ ಕೃತಿ. ಅಲ್ಲದೇ ಮನುಷ್ಯನ ಪರಿಪೂರ್ಣತೆಯ ಹಂಬಲ ಮತ್ತು ಹತಾಶೆಯನ್ನು ವಸ್ತುವನ್ನಾಗಿಸಿ ಕಾರ್ನಾಡರು 'ಹಯವದನ' ಎಂಬ ನಾಟಕವನ್ನು ರಚಿಸಿದ್ದಾರೆ.

ಸಾಮಾಜಿಕ ಆರ್ಥಿಕ ನ್ಯಾಯಕ್ಕಾಗಿ ಶೋಷಿತ ವರ್ಗಗಳ ಚಳುವಳಿ ಇವುಗಳಿಗೆ ಸಂವಾದಿಯಾಗಿ, ಕನ್ನಡ ಸಾಹಿತ್ಯ ಹಾಗೂ ನಾಟಕ ಕ್ಷೇತ್ರದಲ್ಲಿ ಬದಲಾವಣೆ ಉಂಟಾಯಿತು. ಜನರಲ್ಲಿ ಜಾಗೃತಿ ಮೂಡಿಸಲು 'ಮಾರೀಚ ಬಂಧುಗಳು' ಮತ್ತು 'ಬಕ' ನಾಟಕಗಳು ರಚನೆಯಾದವು. ಎಂ.ಎಸ್.ಕೆ. ಪ್ರಭು ಅವರ 'ಬಕ' ರಾಜಕೀಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳಿದ್ದ ತುರ್ತು ಪರಿಸ್ಥಿತಿಯಲ್ಲಿ, ಪುರಾಣದ

ಮುಖವಾಡ ಹಾಕಿಕೊಂಡು ವರ್ತಮಾನಕ್ಕೆ ಅಗತ್ಯವಿದ್ದ ಸಂದೇಶಗಳನ್ನು ನೀಡಿತು. ಈ ನಾಟಕಕ್ಕೆ ಮಹಾಭಾರತದ ಬಕಾಸುರ ವಧೆಯ ಕಥಾವಸ್ತುವನ್ನು ಲೇಖಕರು ಆಯ್ದುಕೊಂಡಿದ್ದಾರೆ.

ಬೃಹಸ್ಪತಿಯ ಶಿಷ್ಯನಾದ ಚಂದ್ರ, ಗುರುಪತ್ನಿ ತಾರೆಯೊಂದಿಗೆ ಸೇರಿ ಬುಧನನ್ನು ಪಡೆದು ಬ್ರಹ್ಮನಿಂದ ಶಪಿತನಾಗುವ ಪೌರಾಣಿಕ ಕತೆಯೇ ಎಚ್.ಎಸ್. ವೆಂಕಟೇಶ್ ಮೂರ್ತಿಯವರ 'ಹೆಜ್ಜೆಗಳು' ಎಂಬ ನಾಟಕದ ತಿರುಳಾಗಿದೆ. ಪುರಾಣಗಳನ್ನು ಶೋಧಿಸುವ, ಅರ್ಥೈಸುವ ಇನ್ನೊಬ್ಬ ಕವಿ ಎಚ್.ಎಸ್. ಶಿವಪ್ರಕಾಶ್, ಪುರಾಣ-ಐತಿಹ್ಯಗಳನ್ನು ಆಧರಿಸಿದ ಇತ್ತೀಚಿನ ನಾಟಕ 'ಮಂಟೇಸ್ವಾಮಿಯ ಕಥಾ ಪ್ರಸಾರಾಂಗ' ಪವಾಡಗಳಿಗೆ ಹೊಸ ಆಯಾಮ ನೀಡುತ್ತದೆ. ರಾಮದಾಸರ 'ಇದು ಭಾರತದಲ್ಲಿ ಜಮದಗ್ನಿಕಾರ್ತವೀರ್ಯ ರಿಂದ ಕರ್ಣನ ಅಂತ್ಯದವರೆಗಿನ ಕಥೆಯನ್ನು ಭ್ರಷ್ಟಚಾರ, ಜಾತೀಯ ಶೋಷಣೆ ಮುಂತಾದ ಅಂದು-ಇಂದಿನ ಸಮಸ್ಯೆಗಳ ಬೆಳಕಿನಲ್ಲಿ ಚಿತ್ರಿಸಲಾಗಿದೆ. ವೇಣುಗೋಪಾಲ ಕಾಸರಗೋಡು ಅವರ 'ಮಹಾಭಾರತ' ದಲ್ಲಿ ಹಸಿದು ಹೊಟ್ಟೆಗಾಗಿ ಹಂಬಲಿಸುತ್ತಿರುವ ಮುದುಕನಿಗೆ ಪಾಂಡವರಾಗಲಿ, ಕೌರವರಾಗಲಿ ನೆರವು ನೀಡುವುದಿಲ್ಲ. ಕೌರವ ಪಾಂಡವರ ಕಥಾವಸ್ತುವನ್ನು ಸಮಕಾಲೀನ ರಾಜಕಾರಣಕ್ಕೆ ಅನ್ವಯಗೊಳಿಸಿರುವ ನಾಟಕವಿದು. ಎಸ್. ಅನಂತ ನಾರಾಯಣರ 'ಪೂರ್ಣಾಹುತಿ', 'ಕೃಷ್ಣಪ್ರಿಯಶಕುನಿ', 'ಅಂಬೆ' ಇವು ಗಮನಾರ್ಹ ನಾಟಕಗಳು. ಅಂಶುಮಾಲಿಯವರ 'ರೂಪಕ ರಾಮಾಯಣ' ಬಿ.ವಿ. ಕಾರಂತರ 'ಅಳಿಲು ರಾಮಾಯಣ' ಮಕ್ಕಳಿಗಾಗಿ ರಚಿಸಿದ ಒಳ್ಳೆಯ ರಂಗ ಕೃತಿಗಳು. ಭಾರತದಲ್ಲಿ ಬರುವ 'ಏಕಲವ್ಯನ ಗುರುದಕ್ಷಿಣೆ ಪ್ರಸಂಗ'ವನ್ನು ಅವಲಂಬಿಸಿ ಕುವೆಂಪು ಅವರು 'ಬೆರಳ್ಗೆಕೊರಳ್' ಎಂಬ, ಗೋವಿಂದ ಪೈ ಅವರು 'ಹೆಬ್ಬೆರಳು' ಎಂಬ ಮತ್ತು ಟಿ.ಪಿ. ಕೈಲಾಸಂ ಅವರು 'ಪರ್ಪಸ್' ಎಂಬ ನಾಟಕಗಳನ್ನು ರಚಿಸಿದ್ದಾರೆ. ರಾಮಾಯಣ ಮತ್ತು ಭಾಗವತ ಪುರಾಣಗಳಲ್ಲಿ ಉಕ್ತವಾಗಿರುವ ಸಂದರ್ಭಗಳನ್ನು ಬಳಸಿ ಪು.ತಿ.ನ. ಅವರು 'ಅಹಲ್ಯೆ' ಮತ್ತು 'ಗೋಕುಲ ನಿರ್ಗಮನ' ಮೊದಲಾದ ಗೀತಾ ನಾಟಕಗಳನ್ನು ರಚಿಸಿದ್ದಾರೆ. ಇತ್ತೀಚಿನ ದಶಕದ ಪೌರಾಣಿಕ ನಾಟಕಗಳೆಲ್ಲವೂ ವೈಚಾರಿಕ ನೆಲೆಗಟ್ಟಿನಲ್ಲಿ ನಿಂತು ಯೋಚಿಸ ಬಲ್ಲ ನಾಟಕ ರಚನೆಯನ್ನು, ಗಂಭೀರವಾಗಿ ಪರಿಗಣಿಸುವ ಕನ್ನಡದ ಮುಖ್ಯ ನಾಟಕಕಾರರಿಂದಲೇ ರಚನೆಯಾದವುಗಳು ಎಂಬುದೊಂದು ವಿಶೇಷ.

ಆಧುನಿಕ ಸಾಹಿತ್ಯ ಪ್ರಕಾರವಾದ 'ಭಾವಗೀತೆ'ಯಲ್ಲಿ ಪೌರಾಣಿಕ ಕಲ್ಪನೆಗಳು ಆವರಣ ಸೃಷ್ಟಿ, ವರ್ಣನೆ ಮತ್ತು ಅಲಂಕಾರಗಳ ಅಂಗವಾಗಿ, ಅಂದರೆ ಒಟ್ಟಿನ ಮೇಲೆ ನಿರ್ದೇಶನಾತ್ಮಕವಾಗಿ ಬಳಕೆಯಾಗಿ ರುವುದೇ ಹೆಚ್ಚು. 'ಭಾಗವತ ಪುರಾಣ'ದ ಅದರಲ್ಲೂ ಶ್ರೀಕೃಷ್ಣನ ಬಾಲ್ಯ ಯೌವನಗಳಿಗೆ ಸಂಬಂಧಿಸಿದ ಪ್ರಸಂಗಗಳು ವಿಶೇಷವಾಗಿ ನಮ್ಮ ಕವಿಗಳ ಗಮನ ಸೆಳೆದವು. ಪು.ತಿ.ನ. ಕುವೆಂಪು ಜಿ.ಎಸ್. ಶಿವರುದ್ರಪ್ಪ, ಸುರಂ ಎಕ್ಕುಂಡಿ ಮೊದಲಾದವರು ಶ್ರೀಕೃಷ್ಣ ಚರಿತೆಯ ಪ್ರಸಂಗಗಳನ್ನು ಆಧರಿಸಿ ಹಲವು ಸುಂದರ ಭಾವಗೀತೆಗಳನ್ನು ರಚಿಸಿದ್ದಾರೆ.

ಪುರಾಣವನ್ನು ಇಂದಿನ ಜೀವನದ ನೆಲೆಗಟ್ಟಿನಲ್ಲಿ ನೋಡುವುದು ಅಡಿಗರ ಕಾವ್ಯವಿಧಾನದ ಒಂದು ಪ್ರಮುಖ ಲಕ್ಷಣ. ಇಂದು ನೆನ್ನೆಗಳ ತೌಲನಿಕ ಅಧ್ಯಾಯಕ್ಕೆ ಪುರಾಣಗಳನ್ನು ಮೂಲವಾಗಿಟ್ಟುಕೊಳ್ಳುವುದರ

ಮೂಲಕ ಎರಡು ಬದುಕುಗಳನ್ನು ಶೋಧಿಸುವುದು ಅವರ ಕಾವ್ಯದ ಆಶಯ. ಅಲ್ಲದೆ ಇಂದಿನ ರಾಜಕೀಯದ ಮೌಲ್ಯ ದಮನ ಪ್ರವೃತ್ತಿಯ ಸ್ವರೂಪವನ್ನು ಚಿತ್ರಿಸಲು ಪುರಾಣ ವ್ಯಕ್ತಿಗಳ ಮಾದರಿಯಲ್ಲೇ ಹೊಸ ಪೌರಾಣಿಕ ಪರಿಕಲ್ಪನೆಗಳನ್ನು ಸೃಷ್ಟಿಸಿ ಪುರಾಣ ಜಗತ್ತಿಗೆ ಹೊಸ ಆಯಾಮವನ್ನು ನೀಡುವುದು ಅಡಿಗರ ಮತ್ತೊಂದು ಆಶಯ.

"ಯಾವ ಮೋಹನ ಮುರಲಿ ಕರೆಯಿತು
ದೂರ ತೀರಕೆ ನಿನ್ನನು
ಯಾವ ಬೃಂದಾವನವು ಸೆಳೆಯಿತು
ನಿನ್ನ ಮಣ್ಣಿನ ಕಣ್ಣನು?"

"ನೆಲತಾಯ ಮಾಯಕದ ಅರಗಿನರಮನೆಯಲ್ಲಿ
ಹಸ್ತಿನಾವತಿಯ ಸ್ಮೃತಿ ಹೊತ್ತಲಿಲ್ಲ
ಮಯ ನಿರ್ಮಿತವೊ ಸುಯೋಧನ ರಚಿತವೋ ಅಂತು
ಕಡ್ಡಿಗೀರುವ ತನಕ ಶಂಕೆಯಿಲ್ಲ".

"ಎದೆಯಲಿ ಹಿರಣಾಕ್ಷ ಪೀಠ ಸುಸ್ಥಿರವಿರಲು
ಬುರುಡೆಯಲಿ ಪ್ರಹ್ಲಾದ ಪುಟಿವುದುಂಟೆ?"

ಈ ಸಾಲುಗಳನ್ನೆಲ್ಲ ಗಮನಿಸಿದಾಗ ಅಡಿಗರು ಭಾಗವತ, ಮಹಾಭಾರತ, ರಾಮಾಯಣ ಹಾಗೂ ಪುರಾಣಗಳಿಂದ ಗಾಢ ಸಂಸ್ಕಾರವನ್ನು ಪಡೆದಿದ್ದಾರೆಂಬುದು ವೇದ್ಯವಾಗುತ್ತದೆ.

ಅಡಿಗರು 'ಹಿಮಗಿರಿಯ ಕಂದರ', 'ಭೂಮಿಗೀತ', ಮೊದಲಾದ ಕವಿತೆಗಳಲ್ಲಿ ವೇದ ಉಪನಿಷತ್ತುಗಳಿಂದಲೂ, ಹಿಂದೂ, ಬೌದ್ಧ, ಗ್ರೀಕ್, ಪುರಾಣಗಳಿಂದಲೂ, ಕಥಾವಸ್ತುವನ್ನು ಬಳಸಿಕೊಂಡಿದ್ದಾರೆ. ವಿನಾಯಕರ 'ದ್ಯಾವಾಪೃಥವೀ' ಎಂಬ ನೀಳ್ಗವಿತೆಯು ಭೂಮಿ-ಆಕಾಶಗಳ ಬಗೆಗೆ ಪ್ರಾಚೀನ ಭಾರತೀಯ ಕಲ್ಪನೆಗಳನ್ನು ಅಳವಡಿಸಿಕೊಂಡಿದ್ದಾರೆ. ಅಲ್ಲದೆ ಇವರ 'ತ್ರಿಶಂಕುವಿನ ಪ್ರಜ್ಞಾ ಪ್ರಭಾತ', 'ಊರ್ಣನಾಭಾವತಾರ', 'ದ್ಯಾವಾಪೃಥಿವೀ', 'ಭಾರತ ಸಿಂಧು ರಶ್ಮಿ' ಇವುಗಳನ್ನು ನವಪುರಾಣಗಳೆಂದೇ ಕರೆಯಲಾಗುತ್ತದೆ.

ಇಪ್ಪತ್ತನೆಯ ಶತಮಾನದ ಕನ್ನಡ ಮಹಾಕಾವ್ಯವಾದ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಭರತಖಂಡದ ಪ್ರಾಚೀನ ಸಾಹಿತ್ಯ ಕೃತಿಗಳ ಸತ್ವವನ್ನೆಲ್ಲ ಅರಗಿಸಿಕೊಂಡು ರಚನೆಯಾದದ್ದು. ಮಹಾಕವಿಯೊಬ್ಬನ ಮಹಾಕಾವ್ಯವನ್ನು ಮುಟ್ಟಿ ಜಾಲಾಡಿ ಮತ್ತೊಂದು ಅದ್ಭುತ ಕಾವ್ಯ ರಚಿಸಿ ಅಪ್ರಧಾನ ಪಾತ್ರಗಳಿಗೂ ಪ್ರಾಧಾನ್ಯತೆಯನ್ನು ನೀಡಿ ಉಚಿತ ನ್ಯಾಯಾ ಒದಗಿಸುವ ದಿಟ್ಟ ಧೈರ್ಯ ಮಾಡಿದವರು ಮಹಾಕವಿ ಕುವೆಂಪು. ಅವರು ತಮ್ಮ ಕಾವ್ಯಕ್ಕೆ ಪುರಾಣದ ವಸ್ತುವನ್ನೇ ಆರಿಸಿಕೊಂಡು ಮಹಾಕಾವ್ಯದ ಪ್ರತಿಯೊಂದು ಪಾತ್ರವನ್ನು 'ಪರಕಾಯ ಪ್ರವೇಶ' ಮಾಡಿ ಮಾತನಾಡಿದ್ದಾರೆ. ಕಾವ್ಯದಲ್ಲಿಯ ಒಂದೊಂದು

ಪಾತ್ರವೂ ಸ್ತ್ರೀ ಸಹಜವೆನಿಸಿದರೂ ಉತ್ಕೃಷ್ಟತೆಯಿಂದ ಸಮಾಜದ ಇಂದಿನ ಮಹಿಳಾ ಮಹಾಮಣಿಗಳ ಗುಣ, ಸ್ವಭಾವ, ನಡತೆಗೆ ಹಿಡಿದ ಕನ್ನಡಿಯಾಗಿವೆ.

ಇವುಗಳ ಜೊತೆಗೆ ಕುವೆಂಪುರವರ ಖಂಡಕಾವ್ಯ 'ಚಿತ್ರಾಂಗದ' ಕಡೆಂಗೋಡ್ಲು ಶಂಕರಭಟ್ಟ ಕಥನ ಕವನ 'ಮಾದ್ರಿಯ ಚಿತೆ' ರಾಮಚಂದ್ರ ಶರ್ಮರ ನವ್ಯಪ್ರಜ್ಞೆಯ ಕವಿತೆ 'ಪಾಂಡು-ಮಾದ್ರಿ' ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ಭೂಸನೂರು ಮಠರ 'ಭವ್ಯಮಾನವ' ಅಕ್ಕನ ಮೂಲಕ 'ಮಹಾಮಾನವನು ಮರ್ತ್ಯಲೋಕದ ಮಾನವನಲ್ಲಿಯೇ ಜಾಗೃತಗೊಳ್ಳುವನೆಂಬ ದರ್ಶನದಲ್ಲಿ ಸತ್ಯವಿದೆ ಎಂಬ ಸಂಗತಿಯನ್ನು ಈ ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಮಹಾಕಾವ್ಯದಲ್ಲಿ ಬರುವ ಪ್ರಮುಖ ಪಾತ್ರಗಳಾದ ಅಕ್ಕಮಹಾದೇವಿ, ಗುರು ಚೆನ್ನಮಲ್ಲ, ಗಿರಿಮಲ್ಲ ಇವರಿಂದ ಸಮಸ್ತ ಮಾನವ ಪ್ರಪಂಚದ ವಿವಿಧ ಮುಖಗಳನ್ನು ತೋರಿಸಿ, ಬದುಕಿನ ಸಮಗ್ರ ಅರ್ಥವನ್ನು ಕೊಡಲು ಪ್ರಯತ್ನಿಸಿದ್ದಾರೆ.

ಸಣ್ಣಕತೆಯ ಪ್ರವರ್ತಕರಾದ ಮಾಸ್ತಿಯವರು ಪುರಾಣಗಳಿಂದಲೂ ಪ್ರಾಚೀನ ಸಾಹಿತ್ಯದಿಂದಲೂ ವಸ್ತುವನ್ನೆತ್ತಿಕೊಂಡು 'ಗೌತಮಿ ಹೇಳಿದ ಕಥೆ', 'ಸಾರಿಪುತ್ರನ ಕೊನೆಯ ದಿನಗಳು', 'ಕುಚೇಲನ ಭಾಗ್ಯ', 'ಹೇಮಕೂಟದಿಂದ ಬಂದ ಮೇಲೆ' ಮೊದಲಾದ ಕಥೆಗಳನ್ನು ಬರೆದಿದ್ದಾರೆ.

ಆಧುನಿಕ ಸಾಹಿತ್ಯ ಪ್ರಕಾರಗಳ ಪೈಕಿ ಪುರಾಣಗಳ ಬಳಕೆಗೆ ಹೆಚ್ಚು ಅವಕಾಶವಿರುವುದು ಕಾದಂಬರಿ ಕ್ಷೇತ್ರದಲ್ಲಿ. ಜನಸಾಮಾನ್ಯರ ಅಶೋತ್ತರಗಳನ್ನು, ಸಂಸ್ಕೃತಿಯನ್ನು, ಅಭಿರುಚಿಯನ್ನು ಪ್ರತಿಬಿಂಬಿಸಿ ಅವರ ಸಾಹಿತ್ಯಾಸಕ್ತಿಯನ್ನು ತಣಿಸುವ ಮಾಧ್ಯಮವು ಕೂಡ ಕಾದಂಬರಿಯಾಗಿದೆ. ಮಾನವ ಕೇಂದ್ರಿತವಾಗಿರುವ ಪುರಾಣ ಸಾರ್ವತ್ರಿಕ, ಸಾರ್ವಕಾಲಿಕ ಗುಣಗಳನ್ನು ಹೊಂದಿರುತ್ತದೆ. ಈ ಸರ್ವಕಾಲಿಕತೆ ಲೇಖಕರ-ಓದಗರ ನಡುವಿನ ಕೊಂಡಿಯಾಗಿರುತ್ತದೆ. ನಮ್ಮ ಇಂದಿನ ಸಮಾಜ ನೈತಿಕವಾಗಿ ಸಾಮಾಜಿಕವಾಗಿ, ಅಧಃಪತನಗೊಂಡ ಕಲಿಯುಗಕ್ಕೆ ಸೇರಿದ್ದು. ಈ ಪರಿಸ್ಥಿತಿಯ ಸುಧಾರಣೆಗೆ ಬೇಕಾದ ಆದರ್ಶವಾದದ ಮೌಲ್ಯಗಳ ನೆಲೆ ಇಂದಿನ ಬದುಕಿನಲ್ಲಿ ದುರ್ಲಭ. ನಮ್ಮ ಸಮಸ್ಯೆಗಳ ಪರಿಹಾರದ ಮೂಲ ನಮ್ಮ ಸಂಸ್ಕೃತಿಯ ಪಾರಂಪರಿಕ ಆದರ್ಶಗಳ ಪುನರುತ್ಥಾನದಲ್ಲಿದೆ ಎಂಬ ಪೂರ್ವಸಿದ್ಧಾಂತ ಕೆಲವು ಪೌರಾಣಿಕ ಕಾದಂಬರಿಕಾರರಲ್ಲಿ ಕಂಡು ಬರುತ್ತದೆ.

ದೇವುಡು ನರಸಿಂಹಶಾಸ್ತ್ರಿಗಳ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ' ಮತ್ತು 'ಮಹಾದರ್ಶನ'ಗಳು, ಗಂಭೀರ ಸ್ವರೂಪದ ಪೌರಾಣಿಕ ಕಾದಂಬರಿಗಳಾದರೆ, ಕಾರಂತರ 'ದೇವದೂತರು' ಕಾದಂಬರಿಯಲ್ಲಿ ಪೌರಾಣಿಕ ಕಲ್ಪನೆಗಳನ್ನು ವಿಡಂಬನೆಗಾಗಿ ಬಳಸಲಾಗಿದೆ. ರಾವ್‌ಬಹದ್ದೂರರ 'ಗ್ರಾಮಾಯಣ' ಹೆಸರಿನ ಸಾದೃಶ್ಯದಿಂದ 'ರಾಮಾಯಣ'ವನ್ನು ನೆನಪಿಗೆ ತರುತ್ತದೆ; ಶ್ರೀರಂಗರ 'ವಿಶ್ವಮಿತ್ರ ಸೃಷ್ಟಿ'ಯೂ ವ್ಯಂಗ್ಯ ರೂಪದಲ್ಲಿ ಇದನ್ನೇ ಮಾಡುತ್ತದೆ. ಈ ಎರಡು ಕೃತಿಗಳೂ 'ಅಂದಿನ ಮತ್ತು ಇಂದಿನ' ಪರಿಸರಗಳನ್ನು ಹೋಲಿಸಿ ನೋಡಲು ಅವಕಾಶ ಮಾಡಿಕೊಡುತ್ತವೆ. ಶಂಕರ ಮೊಕಾಶಿಪುಣೇಕರ್ ಅವರ 'ಅವಧೇಶ್ವರಿ'ಯು

ವೇದಕಾಲೀನ ರಾಜಕೀಯವನ್ನು ಕುರಿತಾದದ್ದು. 'ಛಾಂದೋಗ್ಯೋಪನಿಷತ್ತಿ'ನಲ್ಲಿ ಬರುವ ಸತ್ಯಕಾಮ ಜಾಬಾಲಿಯ ಕತೆಯನ್ನು ಆಧರಿಸಿ, ತ.ರಾ.ಸು. ಅವರು ಬರೆದ 'ನಾಲ್ಕು×ನಾಲ್ಕು = ಒಂದು' ಭಾರತೀಯ ಪ್ರಾಚೀನ ಮೌಲ್ಯಗಳ ಮಹತ್ವವನ್ನು ಎತ್ತಿ ಹಿಡಿಯುವ ಒಂದು ಪ್ರಯತ್ನವಾಗಿದೆ. ನಮ್ಮ ಸಂಸ್ಕೃತಿಯ ಆಳ-ಸ್ತರಗಳನ್ನು ಘಟನೆಗಳನ್ನು ಕನ್ನಡದ ಮಹನೀಯರಾದ ದೇವುಡು, ಕುವೆಂಪು, ಮಾಸ್ತಿ, ವಿನಾಯಕರಂಥ ಎತ್ತರದ ಮಹನೀಯರು ಗುರುತಿಸಿದ್ದಾರೆ. ದೇವುಡು, ತ.ರಾ.ಸು. ಹಾಗೂ ಶಂಕರ ಮೊಕಾಶಿಪುಣೇಕರ್ ಅವರುಗಳು ಪೌರಾಣಿಕ ಪಾತ್ರಗಳನ್ನು ಜನಸಾಮಾನ್ಯನು ಅನುಸರಿಸಬೇಕಾದ ಆದರ್ಶಗಳ ಪ್ರತಿ ಮೂರ್ತಿಗಳಾಗಿ ಚಿತ್ರಿಸಿದ್ದಾರೆ. ಮಾನವ ಸ್ವಭಾವ ತಲುಪಬಹುದಾದ ಎತ್ತರ, ಅದು ಇಳಿಯಬಹುದಾದ ಪ್ರಪಾತ ಇವೆರಡಕ್ಕೂ ಮಾದರಿಗಳಿಗಾಗಿ ಕಾದಂಬರಿಕಾರರು ಪುರಾಣವನ್ನು ಬಳಸಿಕೊಂಡಿದ್ದಾರೆ. ಭೈರಪ್ಪನವರ 'ಪರ್ವ' ಮಾನವ ಅನುಭವದ ವಿವಿಧ ಮುಖ ರೂಪ, ಮಾನವ ಸಂಬಂಧ ಸ್ವರೂಪ ಮತ್ತು ವಿವೇಚನೆಗಳನ್ನು ಇಪ್ಪತ್ತನೇ ಶತಮಾನದ ಆಧುನಿಕ ಮಾನವ ಪ್ರಜ್ಞೆಯಿಂದ ಅರ್ಥೈಸುವ ಮಹತ್ವದ ಕಾದಂಬರಿಯಾಗಿದೆ.

ಬರಗೂರು ರಾಮಚಂದ್ರಪ್ಪ ಅವರ 'ಶಬರಿ' ಪುರಾಣದ ಪಾತ್ರವೊಂದನ್ನು ಪ್ರತೀಕವಾಗಿ ಬಳಸಿಕೊಂಡು ತೀರಾ ಸಾಮಾಜಿಕ ಮತ್ತು ಆಧುನಿಕವಾದ ವಿಚಾರಗಳನ್ನು ಪ್ರತಿಪಾದಿಸಿದ ಕಾದಂಬರಿಯಾಗಿದೆ.

'ಮಾಧವಿ' ಎಂಬ ಪೌರಾಣಿಕ ಕಾದಂಬರಿ ರಚಿಸಿದ ಅನುಪಮಾ ನಿರಂಜನ ಅವರ ನೆಲೆಯನ್ನು ಆಧುನಿಕ ಎಂದು ಕರೆಯಬಹುದು. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳು ಅನುಭವಿಸುವ ಕಷ್ಟ ಕೋಟಲೆಗಳ ಪ್ರತಿನಿಧಿಯಾಗಿ 'ಮಾಧವಿ' ರೂಪುಗೊಂಡಿದ್ದಾಳೆ. ಎಲ್ಲ ಕಾಲದ ಶೋಷಿತ ಹೆಣ್ಣಿನ ಸಂಕೇತ ಇವಳು ಎನ್ನುವ ಅನುಪಮಾ ಅವರ ಸ್ತ್ರೀವಾದಿ ಧೋರಣೆ ಸುಸ್ಪಷ್ಟವಾಗಿ ಕಾಣುತ್ತದೆ. ಹೆಚ್.ವಿ. ಸಾವಿತ್ರಮ್ಮ ಅವರ 'ಸೀತೆರಾಮರಾವಣ', 'ವಿಮುಕ್ತಿ' ಕಾದಂಬರಿಗಳು, ರಾಮಾಯಣದ ಕತೆಯನ್ನು ಆಧುನಿಕ ವಿದ್ಯಾವಂತೆ, ಪ್ರಜ್ಞಾವಂತ ಹೆಣ್ಣಿನ ದೃಷ್ಟಿಕೋನದಿಂದ ಅರ್ಥೈಸುವ ಒಂದು ಪ್ರಯತ್ನ. ಪುತ್ರಕಾಮೇಷ್ಠಿಯಾಗ ಮಾಡಿ ದೇವತೆಗಳು ನೀಡಿದ ಪಾಯಸ ಕುಡಿದು ಗರ್ಭಧರಿಸುವ ಕೌಸಲ್ಯಾದಿಗಳು ಈ ಪವಾಡವನ್ನು ಪ್ರಶ್ನಿಸುವ ಆಧುನಿಕರಲ್ಲದಿದ್ದರೂ, ಗಂಡಮಕ್ಕಳು ತಮ್ಮನ್ನು ಕೀಳಾಗಿ ಕಂಡು ಅನ್ಯಾಯ ವೆಸಗಿದಾಗ ಸ್ವ-ಪ್ರಜ್ಞೆ ಜಾಗ್ರತವಾಗಿ ಅದನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಪ್ರಶ್ನಿಸುವ ಪಾತ್ರಗಳಾಗಿದ್ದಾರೆ. ಸೀತೆ, ಸಾವಿತ್ರಿ, ದ್ರೌಪದಿಯರು ಭಾರತದ ಆದರ್ಶ ನಾರಿಮಣಿಯರು. ಈ ಆದರ್ಶದ ಹೊರೆ ಹೊರಲಾಗದೆ ತೇಕುತ್ತಿರುವ ಇಂದಿನ ಹೆಣ್ಣಿಗೆ ಈ ರೀತಿಯ ಓದು ಬಹಳ ಸ್ಫೂರ್ತಿದಾಯಕ, ಅದೇ ಪುರಾಣ ಕತೆಯಲ್ಲೇ ಹುದುಗಿರುವ, ಹೇಳದೇ ಬಿಟ್ಟಿರುವ ಸಾಧ್ಯತೆಗಳನ್ನು ಶೋಧಿಸುವ ಮೂಲಕ 'ಪರ್ವ', 'ಸೀತೆ ರಾಮರಾವಣ', 'ಮಾಧವಿ', 'ವಿಮುಕ್ತಿ', ಕಾದಂಬರಿಗಳು ಪುರಾಣಕತೆಗಳಿಗೆ ಹೊಸ ಪ್ರಸ್ತುತತೆಯನ್ನು ತಂದುಕೊಟ್ಟಿವೆ.

ಯಾವುದೇ ನಾಡಿನ ಸಂಸ್ಕೃತಿ-ಸಾಹಿತ್ಯಗಳ ನಡುವಿನ ಪರಸ್ಪರ ಸಂಬಂಧ ಸಂಕೀರ್ಣವಾದದ್ದು. ಸಾಹಿತ್ಯ ಸಂಸ್ಕೃತಿಯ ಪ್ರತಿಬಿಂಬವಾಗಿರುತ್ತಲೇ ಸಂಸ್ಕೃತಿಯನ್ನು ರೂಪಿಸುವ ಹೊಣೆಯನ್ನು ಸಹ ಹೊತ್ತಿರುತ್ತದೆ. ವರ್ಣಭೇದ, ಲಿಂಗಭೇದಗಳ ಆಧಾರದ ಮೇಲೆ ಬೆಳೆದಿರುವ ನಮ್ಮ ಸಂಸ್ಕೃತಿ ಪಲ್ಲಟಗೊಂಡು ಸಮಾನತೆಯನ್ನು ಆಧಾರವಾಗಿಸಿಕೊಳ್ಳಲು ಹೆಣಗುತ್ತಿವೆ. ಇದಕ್ಕೆ ವಿರುದ್ಧವಾಗಿ ಯಥಾಸ್ಥಿತಿವಾದವನ್ನು ಬೆಂಬಲಿಸುವ ನೂರಾರು ಶಕ್ತಿಗಳು ದುಡಿಯುತ್ತಿವೆ. ಜನಮನದಲ್ಲಿ ನೆಲೆಸಿ ಆರ್ಷ ಪ್ರತೀಕಗಳಾಗಿ ಬಿಟ್ಟಿರುವ ರಾಮಾಯಣ, ಮಹಾಭಾರತಗಳನ್ನು ಹಳೆಯ ಆದರ್ಶಗಳನ್ನೇ ಮುಂದುವರಿಸಿಕೊಂಡು ಬರುವ ಸಾಧನಗಳನ್ನಾಗಿ ಬಳಸಲಾಗುತ್ತಿದೆ. 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಲು ಸಾಧ್ಯ ಇದೇ' ಎಂದು ಕಲಾತ್ಮಕವಾಗಿ, ಸೃಜನಶೀಲವಾಗಿ ತೋರಿಸುವ ಮೂಲಕ ಸಂಸ್ಕೃತಿಯ ಈ ಪ್ರಭಾವವನ್ನು ತಡೆಯಲು, ಅದರ ಅಪಾಯದ ಅರಿವು ಎಚ್ಚರ ಮೂಡಿಸಲು ಸಾಧ್ಯವಾಗಬಹುದು. ಈ ದೃಷ್ಟಿಯಿಂದ ನೋಡಿದರೆ ಇಂದಿನದನ್ನು ಮಾತ್ರ ಒಳಗೊಳ್ಳುವ ಸಾಮಾಜಿಕ ಕಾದಂಬರಿಗಿಂತ ಹಿಂದು- ಮುಂದಿನದನ್ನು ಒಳಗೊಂಡೇ ಬೆಳೆಯುವ ಪೌರಾಣಿಕ ಕಾದಂಬರಿಗೆ ಹೆಚ್ಚಿನ ಕಸುವಿದೆ.)

ಮೇಲೆ ವಿವರಿಸಿದ ಪುರಾಣ, ಕಾವ್ಯ, ನಾಟಕ, ಕವನ, ಕಥೆ, ಕಾದಂಬರಿ ಈ ಎಲ್ಲವುಗಳನ್ನು ಪರಿಶೀಲಿಸಿದಾಗ ನಮಗೆ ಪುರಾಣದ ಒಳಗಿದ್ದ ವೇದನೆ, ಅಲ್ಲೇ ಅಡಗಿ ಕುಳಿತಿದ್ದ ಸಂಗತಿಗಳು ಪಾತ್ರಗಳು ಇನ್ನೊಂದು ಕಾಲಕ್ಕೆ ತನ್ನ ಬದುಕನ್ನು ಕಟ್ಟಿ ಕೊಳ್ಳಲ್ಲಿಕ್ಕೆ ಹಂಬಲಿಸುವ ಹಪಾಹಪಿಯನ್ನು ಕಾಣುತ್ತೇವೆ. ಆಪಾಹಪಿಗೆ ನಮ್ಮ ಕವಿಗಳು, ಕಾದಂಬರಿಕಾರರು, ನಾಟಕಕಾರರೂ, ಕಥೆಗಾರರು ಒಂದು ಜಾಗಕೊಟ್ಟು ಆ ಪುರಾಣ ಪಾತ್ರಗಳಿಗೆ ಮತ್ತೆ ಜೀವ ನೀಡಿ ಕಾಲತೀತವಾದ, ಕಾಲದ ಒತ್ತಡದಲ್ಲಿ ನಮಗೂ ಇಲ್ಲಿ ಸ್ಥಾನವಿದೆ, ನಾವು ಈಗ ಬದುಕುವ ಸಮಾಜದೊಂದಿಗೆ ಮುಖಾಮುಖಿಯಾಗಿ ನಮ್ಮ ಹಿಂದಿನ ಧೋರಣೆಗಳು ಈಗ ಮರುಹುಟ್ಟು ಪಡೆದುಕೊಂಡಿವೆ ಎಂಬುದನ್ನು ನಿರೂಪಿಸುವಂತೆ ಪುನರ್‌ಸೃಷ್ಟಿ ಮಾಡಿದ್ದಾರೆ.

ಹೀಗೆ ಪುರಾಣದ ಅಧ್ಯಯನವು ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸೀಮಿತಗೊಳ್ಳದೆ, ಮಾನವಶಾಸ್ತ್ರ, ಮನಃಶಾಸ್ತ್ರಗಳ, ವಿಮರ್ಶೆಗಳ ಕ್ಷೇತ್ರದಲ್ಲಿಯು ಸ್ಥಾನ ಪಡೆದಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿನ ಪುರಾಣಗಳ ಪುನರ್‌ಕಥನವನ್ನು ವಿಚಾರ ಮಾಡಿದಾಗ ನಾವು ಆ ಪುರಾಣಗಳು ಹೇಗೆ ರೂಪುಗೊಂಡವು, ಯಾಕಾಗಿ ರೂಪು ಪಡೆದವು ಹಾಗೆ ರೂಪ ಪಡೆಯಲ್ಲಿಕ್ಕೆ ಇರುವ ಕಾರಣ ಅಥವಾ ತುರ್ತುಗಳೇನು ಎನ್ನುವುದರ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸಬೇಕಾಗುತ್ತದೆ. ಈ ಹಿನ್ನೆಲೆಯೊಂದಿಗೆ ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳನ್ನು ಅಧ್ಯಾಯಕ್ಕೆ ಒಳಪಡಿಸಬೇಕಾದ ಅವಶ್ಯಕತೆಯಿದೆ. ಇಂದಿನ ಸಮಾಜದ ಜೊತೆಗೆ ಅವರ ಕಾದಂಬರಿಗಳು ಹೇಗೆ ಮುಖಾಮುಖಿಯಾಗುತ್ತವೆ. ಹೇಗೆ ಅನುಸಂಧಾನ ನಡೆಸಿವೆ ಮತ್ತು ಆ ರೀತಿ ಪುರಾಣ ಪಾತ್ರಗಳು ಮತ್ತೆ ಮತ್ತೆ ಮೈದಾಳುವುದರ ಹಿಂದಿನ ತಾತ್ವಿಕತೆ ಹೇಗೆ ಕೆಲಸ ಮಾಡಿದೆ ಎನ್ನುವ ವಿಚಾರ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

"ಆದಿಪುರಾಣ ಅಸುರರಿಗೆ ಮಾರಿ
ವೇದುಪುರಾಣ ಹೋತಿಂಗೆ ಮಾರಿ
ರಾಮಪುರಾಣ ಗೋತ್ರಕ್ಕೆ ಮಾರಿ
ಪುರಾಣಕ್ಕೆ ಮೊದಲು ನಿಮ್ಮ ಪುರಾಣ ಕರ್ಮಕ್ಕೆ ಪ್ರತಿಯಿಲ್ಲ...."

ಎನ್ನುವ ವಚನಕಾರರ ಆಶಯ ಪುರಾಣದೊಳಗಿರುವ ಅಂತಃಕರಣವನ್ನು ಕಲಿಕಿ ಬಿಡುತ್ತದೆ. ಈ ಹಿನ್ನೆಲೆಯಲ್ಲಿ ಪುರಾಣವನ್ನು ಆಧುನಿಕ ಸಂದರ್ಭದಲ್ಲಿ ಕಾದಂಬರಿಕಾರರು ಹೇಗೆ ಅದರೊಳಹೊಕ್ಕು ಅಲ್ಲಿರುವ ಜಿಡ್ಡುಗಳನ್ನು ಕೆದಕಿ ಅದಕ್ಕೆ ಪ್ರತಿಯಾಗಿ ತಮ್ಮ ಕಾಲದ ತುರ್ತಿನಲ್ಲಿ ಆ ಪಾತ್ರಗಳ ಪ್ರಸ್ತುತತೆಯನ್ನು ಕಟ್ಟುವ, ಕೆಡಹುವ ಕ್ರಿಯೆಗಳು ಹೇಗೆ ನಡೆದಿವೆ ಎನ್ನುವಂಥದ್ದು ಮುಖ್ಯವಾಗುತ್ತದೆ.

• • •

ಅಧ್ಯಾಯ ನಾಲ್ಕು

ಎಸ್.ವಿ. ಪ್ರಭಾವತಿಯವರ ಕಾದಂಬರಿಗಳಲ್ಲಿ ರಾಮಾಯಣದ ಸ್ತ್ರೀಪಾತ್ರಗಳು

೪.೧. ಅಹಲ್ಯಾ

೪.೨. ಸೀತಾ

ಅಧ್ಯಾಯ ನಾಲ್ಕು

ಎಸ್.ವಿ. ಪ್ರಭಾವತಿಯವರ ಕಾದಂಬರಿಗಳಲ್ಲಿ ರಾಮಾಯಣದ ಸ್ತ್ರೀಪಾತ್ರಗಳು

'ರಾಮಾಯಣ', 'ಮಹಾಭಾರತ' ಕೃತಿಗಳು ಭರತಖಂಡದ ಪ್ರಖ್ಯಾತ ಮಹಾಕಾವ್ಯಗಳು. ಇವುಗಳಲ್ಲಿ ಪ್ರತಿಪಾದಿತವಾದ ತತ್ವಗಳು ಎಲ್ಲ ಕಾಲಗಳಲ್ಲಿಯೂ ಅನುಸರಣೀಯ. ಪ್ರಾಚೀನ ಗ್ರೀಸ್ ದೇಶಕ್ಕೆ ಹೋಮರ ಕವಿಯ 'ಇಲಿಯಡ್' ಹೇಗೋ ಹಾಗೆ ನಮ್ಮ ದೇಶಕ್ಕೆ ರಾಮಾಯಣ ಮಹಾಭಾರತಗಳು. ಎಷ್ಟೋ ಶತಮಾನಗಳು ಉರುಳಿ ಹೋಗಿದ್ದರೂ ಈ ಮಹಾಗ್ರಂಥಗಳ ಪ್ರವಾಹವು ಎಂದಿಗೂ ಬತ್ತಿ ಹೋಗುವುದಿಲ್ಲ. ನಮ್ಮ ಪ್ರಾಚೀನ ಕವಿಗಳೆಲ್ಲರೂ ವ್ಯಾಸ-ವಾಲ್ಮೀಕಿಯರನ್ನು ಸ್ಮರಿಸಿ, ತಮ್ಮ ಕಾವ್ಯ, ನಾಟಕಗಳಿಗೆ ವಸ್ತುವನ್ನು ಆರಿಸಿಕೊಳ್ಳುವುದರಲ್ಲಿ ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಈ ಎರಡು ಮಹಾಗ್ರಂಥಗಳಿಗೆ ಶರಣು ಹೋಗಿದ್ದಾರೆ. ರಾಮಾಯಣ ಆದರ್ಶ ಪ್ರಧಾನವಾಗಿದ್ದರೆ ಮಹಾಭಾರತ ವಸ್ತುನಿಷ್ಠವಾದದ್ದು. ಇವೆರಡೂ ಭರತಖಂಡದ ದಿವ್ಯಚಕ್ಷುಗಳಿಂತಿದ್ದು ಸಾಂಸ್ಕೃತಿಕ ಅನನ್ಯತೆಯನ್ನು ಪಡೆದಿವೆ. ಆದಿಕವಿಯಿಂದ ರಚಿತವಾದ ಸಾವಿರಾರರು ವರ್ಷಗಳಿಂದ ಕವಿಮನ ಮತ್ತು ಜನಮನಗಳನ್ನು ಆಕರ್ಷಿಸುತ್ತಾ ಬಂದಿರುವ 'ರಾಮಾಯಣ' ಮಾನವೀಯ ಮೌಲ್ಯಗಳ ಗಣಿಯಾಗಿವೆ. ಧರ್ಮ - ಅಧರ್ಮ, ಸತ್ಯ - ಅಸತ್ಯ, ನಿಸ್ವಾರ್ಥ - ಸ್ವಾರ್ಥ, ದೈವಿಕ - ದಾನವ ಮೊದಲಾದ ಹೋರಾಟವನ್ನು ಚಿತ್ರಿಸುವುದರೊಂದಿಗೆ ಧರ್ಮ, ಸತ್ಯ ನಿಸ್ವಾರ್ಥ, ದೈವಿಕ ಅಂಶಗಳಿಗೆ ಜಯವೆನ್ನುವ ರಾಮಾಯಣದ ಆದರ್ಶವೂ ಹಲವೂ ದೃಷ್ಟಿಕೋನಗಳಿಂದ ಮಹತ್ವವನ್ನು ಪಡೆದುಕೊಳ್ಳುತ್ತದೆ.

"ರಾಮಾಯಣ ಮತ್ತು ಮಹಾಭಾರತಗಳು ಭಾರತೀಯ ಸಂಸ್ಕೃತಿಯ ವಿಶ್ವಕೋಶಗಳು" ಎಂದು ಸ್ವಾಮಿವಿವೇಕನಂದರು ಈ ಎರಡೂ ಮಹಾಕಾವ್ಯಗಳನ್ನು ಕೊಂಡಾಡಿದ್ದಾರೆ. "ರಾಮಾಯಣ ಭ್ರಾತೃ ಪ್ರೇಮ ಸಾಫಲ್ಯದ ಸಕಾರ ಗೌರಿಶಂಕರವಾದರೆ ಮಹಾಭಾರತ ವೈಫಲ್ಯದ ವೈಶಂಪಾಯನ" (ಮಾಳಿ.ವಿ.ಎಸ್; ಪು. ೧೪-೧೫). ರಾಮಾಯಣವು ಭಾರತದ ಸಚ್ಚಾರಿತ್ರ್ಯವನ್ನು ಪ್ರತಿಬಿಂಬಿಸುವ ಗ್ರಂಥ. ಆದರೆ ಮಹಾಭಾರತದ ಸಂಸ್ಕೃತಿ ರಾಮಾಯಣಕ್ಕಿಂತ ಭಿನ್ನವಾದುದು. ಅಲ್ಲಿಯ ದಾಯದಿ ಕಲಹ, ಇಡೀ ಕುರುಕುಲವನ್ನೇ ನುಂಗಿ ಹಾಕಿತು. ಆದರೆ ಇಲ್ಲಿಯ ಸಹೋದರ ಪ್ರೇಮ, ಸೀತೆ, ಅಹಲ್ಯಾ, ಊರ್ಮಿಳಾ, ಮಂಡೋದರಿಯಂಥ ಮಹಾಸತಿಯರ ಪತಿವ್ರತಾ - ಧರ್ಮ ರಾಮಾಯಣವನ್ನು ಅಮರಕಾವ್ಯವಾಗಿಸಿತು.

"ತಿಣಿಕಿದನು ಫಣಿರಾಯ ರಾಮಾ
ಯಣದ ಕವಿಗಳ ಭಾರದಲಿ ತಿಂ
ತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರವಿಲ್ಲ"

(ಕುಮಾರವ್ಯಾಸ)

ಎಂದಂತೆ ಭೂಮಿಗೆ ಭಾರವಾಗುವಷ್ಟು ರಾಮಾಯಣಗಳು ಬಂದಿವೆ.

ರಾಮಾಯಣ ಕಥಾವಸ್ತು ವಾಲ್ಮೀಕಿಯಿಂದ, ಭಾಸ, ಭವಭೂತಿ, ನಾಗಚಂದ್ರ ಮುಂತಾದ ಹತ್ತಾರು ಮಹಾಕವಿಗಳ ಮತ್ತು ಹೆಸರಿಸಲೂ ಸಾಧ್ಯವಿಲ್ಲದ ಸಾವಿರಾರು ಕಿರಿಯ ಕವಿಗಳ ಮಾನಸಲೋಕದಲ್ಲಿ ವಿಹರಿಸಿದೆ. ಸೃಜನಶೀಲ ಸಾಹಿತ್ಯ ರಚನೆಯಲ್ಲಿ ಹೆಚ್ಚಿನ ಕೃತಿಗಳನ್ನು ನೀಡಿರುವ ಬರಹಗಾರರು ಸಾಹಿತ್ಯಿಕ ಚಳುವಳಿಗಳಿಂದಾಗಲೀ, ಯಾವುದೇ ಪಂಥಗಳಿಂದಾಗಲೀ, ತಮ್ಮನ್ನು ಗುರುತಿಸಿಕೊಂಡಿರುವುದು ಕಡಿಮೆ. ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಮಹತ್ವಪೂರ್ಣ ಕೃತಿಗಳನ್ನು ರಚಿಸಿರುವ ಬರಹಗಾರರು, ತಮ್ಮ ಕೃತಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣಕ್ಕೆ ಮತ್ತು ಸ್ತ್ರೀಕೇಂದ್ರಿತ ವಸ್ತುವಿಗೆ ಆದ್ಯತೆ ನೀಡಿದ್ದಾರೆ. ಹೆಣ್ಣನ್ನು ಮಾನವೀಯ ನೆಲೆಯಲ್ಲಿ ಕಾಣುವುದು ಅವಳ ಸಮಸ್ಯೆಯನ್ನು ಇಡೀ ಸಮುದಾಯದ ಸಮಸ್ಯೆಯಾಗಿ ಕಾಣುವುದರ ಜೊತೆಗೆ ತಮ್ಮ ಭಿನ್ನ ದೃಷ್ಟಿಕೋನದಿಂದ ಚಿತ್ರಿಸಿದ್ದಾರೆ. ಈ ಹಿನ್ನೆಯಲ್ಲಿ ಪ್ರಸ್ತುತ ಕಾದಂಬರಿಗಳ, ಲೇಖಕಿಯಾದ ಪ್ರಭಾವತಿಯವರ ರಾಮಾಯಣ ವಸ್ತುವನ್ನು ಆಧರಿಸಿದ ಅಹಲ್ಯಾ, ಸೀತಾ ಕಾದಂಬರಿಗಳು ಸ್ತ್ರೀ ಪ್ರಧಾನ ಕೃತಿಗಳಾಗಿವೆ. ಈ ಪಾತ್ರಗಳೆಲ್ಲ ಪುರಾಣ ಪ್ರಸಿದ್ಧ ಮಹಿಳೆಯರನ್ನು ಕುರಿತದಾಗಿವೆ. ಪುರುಷ ಪ್ರಧಾನ ಸಂಸ್ಕೃತಿಯ ವ್ಯವಸ್ಥೆಯಲ್ಲಿ ಶೋಷಿತ ಪಾತ್ರಗಳು ಆಧುನಿಕ ನೆಲೆಗಳಲ್ಲಿ ಅಂದಿನ ಶೋಷಣೆಯ ಪರಂಪರೆಯನ್ನು ಪ್ರಬಲವಾಗಿ ಪ್ರತಿಭಟಿಸುತ್ತವೆ. ಕಾದಂಬರಿಗಳಲ್ಲಿ ಸ್ತ್ರೀಪಾತ್ರಗಳನ್ನು ವಿಶೇಷವಾಗಿ ಚಿತ್ರಿಸಿರುವುದರಿಂದ, ಪುರುಷ ಪ್ರಧಾನ ಪಾತ್ರಗಳು ಅಷ್ಟಾಗಿ ಪರಿಣಾಮಕಾರಿಯಾಗಿಲ್ಲ ಎಂಬುದು ಕಂಡು ಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯ ಶೋಷಿತ ಪಾತ್ರಗಳಿಗೆ ಜೀವ ನೀಡಿ ಸ್ತ್ರೀವಾದದ ಹಿನ್ನೆಲೆಯಲ್ಲಿ ತಮ್ಮ ಕಾದಂಬರಿಗಳನ್ನು ರಚಿಸಿದ್ದಾರೆ. ಇವು ವೈಚಾರಿಕ ಮತ್ತು ಮಾನವೀಯ ನೆಲೆಯಲ್ಲಿ ಹೆಚ್ಚು ಗಮನ ಸೆಳೆಯುತ್ತವೆ.

ಹೀಗೆ ಪೌರಾಣಿಕ ಪಾತ್ರಗಳ ಮೂಲಕ ಹೆಣ್ಣಿನ ಸಾಮಾಜಿಕ ಚಿತ್ರಣವನ್ನು ಅರಿಯುವ ಪ್ರಯತ್ನದ ಫಲವಾಗಿ ರಾಮಾಯಣ, ಮಹಾಭಾರತದ, ಪಾತ್ರಗಳು ಜನತೆಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿವೆ. ಆದ್ದರಿಂದ ಮಹಾಕಾವ್ಯಗಳೆಂದರೆ ಭಾರತೀಯ ಜೀವನ ಸೂತ್ರಗಳು. ಅವು ರಚಿತವಾದ ಕಾಲದ ಜನ ಜೀವನ, ಸಾಂಸ್ಕೃತಿಕ ಸಂಗತಿಗಳು, ಸಾಮಾಜಿಕ ಸಂದರ್ಭಗಳು, ರಾಜಕೀಯ ವ್ಯವಸ್ಥೆಗಳು ಮತ್ತು ಜನರು ನಂಬಿದ ಜೀವನ ಮೌಲ್ಯಗಳನ್ನು ಅರಿಯುವುದಾಗಿದೆ. ಇಂಥ ಮಹತ್ವವೂ ಅದ್ವಿತೀಯವೂ ಆದ ಆ ಕೃತಿಗಳಲ್ಲಿಯೂ ಸ್ತ್ರೀ, ಸಮಾಜದ ಅಪಮೌಲ್ಯಕ್ಕೊಳಗಾಗಿರುವುದನ್ನು ಕೆಲವು ಮುಖ್ಯ ಪಾತ್ರಗಳನ್ನು ವಿಶ್ಲೇಷಣೆಸುವುದರ ಮೂಲಕ ಚಿಂತಿಸಲಾಗಿದೆ.

೪.೧. ಅಹಲ್ಯಾ

ಪೌರಾಣಿಕ ಸ್ತ್ರೀಪಾತ್ರಗಳನ್ನು ಆರಿಸಿಕೊಂಡು, ಅವುಗಳನ್ನು ಆದಷ್ಟು ಸಮಕಾಲೀನ ಮನಸ್ಸಿನಿಂದ ಗ್ರಹಿಸಿ ಆ ಪಾತ್ರಗಳನ್ನು ಲೇಖಕಿಯು ಪುನರ್‌ರಚಿಸಿದ್ದಾರೆ. ಅವುಗಳನ್ನು ಹೊಸ ದೃಷ್ಟಿಯಿಂದ ನೋಡಿ ವೈಚಾರಿಕ ನೆಲೆಯಲ್ಲಿ ವಾಸ್ತವ ಸ್ವರೂಪವನ್ನು ಒಳಗೊಂಡ ಅಹಲ್ಯೆಯ ಪಾತ್ರವು ತನ್ನ ಸುಖ-ಕಷ್ಟಗಳನ್ನು ಹೇಳುವ ಸಾಮಾನ್ಯ ಮಹಿಳೆಯಾಗಿ ತನಗಾದ ಅನ್ಯಾಯದ ಬಗ್ಗೆ ನ್ಯಾಯ ಕೇಳುತ್ತಾಳೆ. ಅದು ಹೆಣ್ಣಿನ ಹೃದಯವನ್ನು ಅರಿಯುವ ಪ್ರಯತ್ನವಾಗಿದೆ.

ಅಹಲ್ಯೆ ಮುದ್ಗಲ ಮತ್ತು ಧೌಮಳ ಮುದ್ದಿನ ಮಗಳಾಗಿ ಆಶ್ರಮದಲ್ಲಿ ಬೆಳೆಯುತ್ತಾಳೆ. ತನ್ನ ತಂದೆ ಒಂದು ದಿನ ಯಜ್ಞವನ್ನು ಮಾಡುತ್ತಿರುತ್ತಾರೆ.

"ಓಂ ಆಗ್ನೆಯೇ ಸ್ವಾಹಾ
ಭೂಃ ಸ್ವಾಹಾ ಆಗ್ನೇಯೇ ಇದಂ ನಮಮ
ಭುವಃ ಸ್ವಾಹಾ ವಾಯವೇ ಇದಂ ನಮಮ
ಸುವಃ ಸ್ವಾಹಾ ಸೂರ್ಯಾಯ ಇದಂ ನಮಮ
ಭೂರ್ಭುವಸ್ಸುವಃ ಸ್ವಾಹಾ ಪ್ರಜಾಪತಯೇ ಇದಂ ನಮಮ.
ನಾರಾಯಣಯ ವಿಘ್ನಯೇ ವಾಸುದೇವಾಯ ಧೀಮಹಿ
ತನ್ನೋ ವಿಷ್ಣು ಪ್ರಚೋದಯಾತ್ ವಿಷ್ಣುವೇ ಸ್ವಾಹಾ
ವಿಷ್ಣುವೇ ಇದಂ ನಮಮ.
ತತ್ಪುರುಷಾಯ ವಿಘ್ನಯೇ ಮಹಾದೇವಾಯ ಧೀಮಹೀ
ತನ್ನೋ ರುದ್ರ ಪ್ರಚೋದಯಾತ್ ಓಂ ರುದ್ರಾಯ ಸ್ವಾಹಾ
ರುದ್ರಾಯ ಇದಂ ನಮಮ".

ಹೀಗೆ ಮಂತ್ರ ಉಚ್ಚರಣೆಯ ಜೊತೆಗೆ ಅಗ್ನಿಗೆ ಅಜ್ಯವನ್ನು ಹಾಕುತ್ತಿರುವುದನ್ನು ನೋಡುತ್ತ ಕುಳಿತ ಮಗು, ತಾನು ಹಾಕುವಂತೆ ಮುಖಭಾವ ಮೂಡುತ್ತದೆ. ಇದನ್ನು ಕಂಡ ಮುದ್ಗಲರು ನೀನು ಅಜ್ಯ ಹಾಕುವಂತಿಲ್ಲ ಎಂದಾಗ, ಧೌಮ ಅದೇಕೆ ಹಾಕುವಂತಿಲ್ಲವೆಂದು ಪ್ರಶ್ನಿಸುತ್ತಾಳೆ. ಇಂಥಹ ಕಟ್ಟಳೆಗಳನ್ನು ಹಾಕಿ ಸ್ತ್ರೀಯರನ್ನು ದೂರವಿಡುವ ಸಂಸ್ಕೃತಿಯನ್ನು ಪ್ರತಿಭಟಿಸುವ ಧೌಮಾಳ ಪ್ರಶ್ನೆ ಮಹತ್ವದಾಗಿದೆ. ನಮ್ಮಲ್ಲಿ ಮಕ್ಕಳನ್ನು ದೇವರ ಸಮಾನವೆಂದು ಕರೆದರು ಇಲ್ಲಿ ಹೆಣ್ಣು ಮಗುವೆಂಬ ಕಾರಣಕ್ಕೆ ಯಜ್ಞಕ್ಕೆ ಅಜ್ಯ ಹಾಕುವಂತಿಲ್ಲ! ದೀಕ್ಷೆ ವಹಿಸುವಂತಿಲ್ಲ. ಏಕೆಂದರೆ ಆ ಆಜ್ಯವೂ ದೇವೇಂದ್ರನಿಗೆ ಸಲ್ಲುವುದಿಲ್ಲ ಎಂಬ ಕುರುಡು ನಂಬಿಕೆಗಳನ್ನು ಸೃಷ್ಟಿಸಿದ ಮಾನಾವಾದಿಗಳ ವಿಚಾರಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಕಾದಂಬರಿಯಲ್ಲಿ ವ್ಯಕ್ತಪಡಿಸಲಾಗಿದೆ. ಹೀಗೆ ಮುದ್ಗಲ ಮತ್ತು ಧೌಮ ಮಾತನಾಡುತ್ತಿರುವಾಗ ಮಗುವಾಗಿರುವ ಅಹಲ್ಯಾ ತನ್ನ ಕೈಯಿಂದ ತುಪ್ಪವನ್ನು ಬೆಂಕಿಗೆ ಸುರಿಯುತ್ತಾಳೆ. ಇದನ್ನು ನೋಡಿದ ಧೌಮ 'ನೋಡಿ ನಮ್ಮ ಮಗಳು ಹಾಕಿದ ತುಪ್ಪ ದೇವೇಂದ್ರನಿಗೆ ಸಂದಿತು' ಎಂದು ಧೌಮ ಹೆಮ್ಮೆಯಿಂದ ಹೇಳುತ್ತಾಳೆ. ತುಪ್ಪವನ್ನು ಬೆಂಕಿಗೆ ಹಾಕುವುದರ ಮೂಲಕ ಪುರುಷನು ವಿಧಿಸಿದ ಕಟ್ಟಳೆಗಳನ್ನು

ಮುರಿದು ಹಾಕುವ ಮನೋಭಾವ ಇಂದಿನ ಮಹಿಳೆಯರಿಗೆ ಬರಬೇಕಾಗಿದೆ ಎಂಬ ಸಂದೇಶವನ್ನು ಕಾದಂಬರಿ ಹೊಂದಿದೆ. ಯಾಗ ಮಾಡಲು ಸ್ತ್ರೀಯರಿಗೆ ಅವಕಾಶವಿಲ್ಲ ಎಂದು ಹೇಳುವಲ್ಲಿ ಪುರುಷನ ಅಧಿಕಾರವೇ ಮುಖ್ಯವಾಗುತ್ತದೆ. ಹೆಣ್ಣು ಕೇವಲ ಪುರುಷ ಹೇಳಿದಂತೆ ಪೂಜೆಗೆ ಸಕಲ ಸಾಮಾಗ್ರಿಗಳನ್ನು ಒದಗಿಸುವುದಷ್ಟೇ ಅವಳ ಕೆಲಸ. ಮಕ್ಕಳನ್ನು ದೇವರ ಸಮಾನ ಎಂದು ಹೇಳಿದರೂ ಯಜ್ಞ ಮಾಡಲು ಅವಳು ಅನರ್ಹಳು. ಪುರುಷರು ನಿರ್ಮಿಸಿದ ಆ ಚೌಕಟ್ಟಿನ ಬಂಧನದಿಂದ ಹೊರಬರಲು ಅನೇಕ ರೀತಿಯಲ್ಲಿ ಅಹಲ್ಯೆಯ ಪಾತ್ರವೂ ಪ್ರಯತ್ನಿಸುವುದನ್ನು ನೋಡಬಹುದು.

"ಓಂ ತತ್ಸವಿತುವರೇಣ್ಯರ್
ಭರ್ಗೋದೇವಸ್ಯ ಧೀ ಮಹೀ
ಧೀಯೋಯೋನಃ ಪ್ರಚೋದಯತ್
ಆಯಾತು ವರದಾ ದೇವೀ
ಅಕ್ಷರ ಬ್ರಹ್ಮ ಸಮ್ಮಿತಂ
ಗಾಯತ್ರೀಂ ಛಂದಸಾಂ ಮಾತಾ
ಭಮ್ಯಾಂ ಸರ್ವತ ಮಾತಾಕ್
ಗಚ್ಛ ದೇವೀ ಯಥಾ ಸುಖಂ"

ಎಂಬ ಹೆಣ್ಣು ದೇವತೆಗೆ ಸಂಬಂಧಿಸಿದಂತಹ ಗಾಯತ್ರಿ ಮಂತ್ರವೂ ಮಾತಿನ ತಾಯಿ, ಹೆಣ್ಣು ದೇವತೆಯ ಮಂತ್ರವಾಗಿದೆ. ಇದನ್ನು ಕೇವಲ ಪುರುಷ ಮಾತ್ರ ಹೇಳಬೇಕೇ ಹೊರತು ಹೆಂಗಸರಲ್ಲ ಎಂದು ಹೇಳಿದ ಮದ್ಗಲರಿಗೆ, ಅಹಲ್ಯೆಯ ಏಕೆ ಹೇಳಬಾರದು, ಹೇಳಿದರೆ ಏನಾಗುತ್ತದೆ. ಹಾಗೆಂದು ಏನಾದರೂ ನಿಯಮವಿದೆಯೇ ಎಂದು ಧೈರ್ಯದಿಂದ ಪ್ರಶ್ನಿಸುವ ಅಹಲ್ಯೆಯ ಪಾತ್ರವೂ ಆಧುನಿಕ ಕಾಲದಲ್ಲಿ ಮೌನವಾಗಿರುವ ಎಷ್ಟೋ ಸ್ತ್ರೀಯರಿಗೆ ಎಚ್ಚರಿಸುವಂತಹ ಪಾತ್ರವಾಗಿ ಕಾದಂಬರಿಯಲ್ಲಿ ಮೂಡಿಬಂದಿದೆ. ಹೀಗೆ ಹೆಣ್ಣನ್ನು ಉನ್ನತ ಸ್ಥಾನದಲ್ಲಿ ಉತ್ಸವ ಮೂರ್ತಿಯನ್ನಾಗಿ ಪುರುಷ ತನ್ನ ಬಂಧನದಲ್ಲಿ ಇಟ್ಟು ಮೌನವಾಗಿಸಲು ಹೊರಟಿರುವ ಪುರುಷನ ಅಧಿಕಾರದಿಂದ, ಹೊರಬರಲು ತುಡಿಯುತ್ತಿರುವ ಪಾತ್ರವಾಗಿ ಇಲ್ಲಿ ಅಹಲ್ಯೆ ಕಂಡು ಬರುತ್ತಾಳೆ. ತಂದೆಯು ಹೇಳುವಂತಹ ಮಂತ್ರಗಳನ್ನು ಅಹಲ್ಯೆಯು ದಿನನಿತ್ಯ ಉಚ್ಚರಿಸುತ್ತಾಳೆ. ಅಲ್ಲದೆ ಅವುಗಳ ಬಗ್ಗೆ ಅರಿಯುವ ಕುತೂಹಲವನ್ನು ಹೊಂದಿರುತ್ತಾಳೆ. ಮುದ್ಗಲರ ಆಶ್ರಮಕ್ಕೆ ಬಂದ ಋಷಿಗಳು ತಮ್ಮ ಮಗಳಿಗೆ ಮಂತ್ರಗಳ ಬಗ್ಗೆ ಆಸಕ್ತಿಯಿದೆ ಎಂದು ಕಾಣಿಸುತ್ತದೆ. ಮಗಳಿಗೆ ಮಂತ್ರ ಪಾಠ ಮಾಡಿಸಿರುವಿರಾ? ಎಂದಾಗ ಮುದ್ಗಲರು ಛೇ.......... ಛೇ........ಹೆಣ್ಣು ಮಕ್ಕಳಿಗೆಂತಹ ಮಂತ್ರ ಪಾಠ! ನನ್ನ ಮಗನಾದ ದೀವೋದಾಸನಿಗೆ ಮಂತ್ರ ಪಾಠವನ್ನು ಹೇಳಿಕೊಟ್ಟಿರುವೆ ಎನ್ನುವಲ್ಲಿ ಸೂಕ್ಷ್ಮವಾಗಿ ನೋಡಿದಾಗ ಒಂದು ಕಡೆ ಪುರುಷ ಪ್ರಧಾನ್ಯತೆಯ ಹೆಚ್ಚುಗಾರಿಕೆಯು ಸ್ತ್ರೀಯರನ್ನು ದಮನಿಸುತ್ತಾ ಹೋಗುತ್ತದೆ. ಅದಕ್ಕೆ ವಿರುದ್ಧವಾಗಿ ಅಹಲ್ಯೆಯ ಪಾತ್ರವೂ ಪ್ರತಿರೋಧವಾಗಿ ಮಂತ್ರಗಳನ್ನು ಕಲಿತು ತಾನು ಕೂಡ ಪುರುಷರ ಸಮಾನ ನಿಲ್ಲಬಲ್ಲೆ ಎಂಬ ವಾದವನ್ನು ಕಾದಂಬರಿ ವಿವರಿಸುತ್ತದೆ.

ಅಹಲ್ಯೆ ಋಷಿಗಳ ಆಶ್ರಮದಲ್ಲಿ ಕಟ್ಟುನಿಟ್ಟಿನಿಂದ ಬೆಳೆದು ಮದುವೆಯ ವಯಸ್ಸಿಗೆ ಬರುತ್ತಾಳೆ. ಮುದ್ಗಲರ ಆಶ್ರಮಕ್ಕೆ ಭೇಟಿ ನೀಡಿದ ಧೀರ್ಘತಮ ಋಷಿಗಳು ಮತ್ತು ಕಿರಿಯ ಮಗನಾದ ಗೌತಮನನ್ನು ಸತ್ಕರಿಸುತ್ತಾರೆ. ಗೌತಮನು ಅಹಲ್ಯೆಯನ್ನು ನೋಡುವಂತ ಸಂದರ್ಭವೂ ಅಲ್ಲಿ ಸಾಪಲ್ಯವಾಗುತ್ತದೆ. ಮುದ್ಗಲರು ಮದುವೆಯ ದಿನದ ನಿಶ್ಚಿತಾರ್ಥಕ್ಕಾಗಿ ಸಡಗರದಲ್ಲಿ ತೊಡಗಿದಾಗ ಧೌಮಳು ಹುಡುಗನಿಗೆ ಒಪ್ಪಿಗೆಯಿದೆಯೇ ಎಂದು ಕೇಳಿ ತಿಳಿಯುವಂತೆ ಹೇಳುತ್ತಾಳೆ. ತಂದೆ ಹಾಕಿದ ಗೆರೆಯನ್ನು ಮೀರುವುದಿಲ್ಲ, ನಾವು ಈಗ ಅಹಲ್ಯಾಳ ಒಪ್ಪಿಗೆಯನ್ನು ಕೇಳುತ್ತಾ ಕೋರುತ್ತೇವೆಯೆ? ನಾವು ಒಪ್ಪಿದರೆ ಅವಳು ಒಪ್ಪಿದಂತೆ ಎಂದು ಹೇಳುತ್ತಾರೆ. ಆದರೂ ಮದುವೆಯಾಗ ಬೇಕಾದವನು ಗೌತಮ, ಅವನ ಒಪ್ಪಿಗೆಯನ್ನು ಕೇಳುವುದು ಬೇಡವೆ? ಎಂದಾಗ ಮುದ್ಗಲರು "ಇದೇ ಕೊನೆ ಹುಡುಗನ ಒಪ್ಪಿಗೆ ಇದೆಯೆ ಎಂದು ಮತ್ತೆ ಮತ್ತೆ ಕೇಳಬೇಡ, ತಂದೆ ತಾಯಿ ಹೇಳಿದ್ದನ್ನು ಹುಡುಗ ಒಪ್ಪಲೇಬೇಕು. ಈಗ ನಮ್ಮ ಅಹಲ್ಯೆಯನ್ನು ನಾವು ಒಪ್ಪಿಗೆ ಕೇಳಿದೆವೆ?" (ಪ್ರಭಾವತಿ ಎಸ್.ವಿ; ೯೯೯; ಪು. ೨೧) ಎಂದಾಗ ಧೌಮಾ ನಾನು ಕೇಳಿರುವೆ ಎನ್ನುತ್ತಾಳೆ. ಗಂಡಸಿನ ಸಾರ್ವಭೌಮತ್ವವನ್ನು ದರ್ಪದ ಅಧಿಕಾರವನ್ನು ಪ್ರತಿಭಟಿಸುತ್ತಾಳೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗಂಡು ಹೇಳಿದ್ದೇ ಅಂತಿಮ ಅದಕ್ಕೆ ಯಾರು ಎದುರಾಡುವಂತಿಲ್ಲ. ಇಂತಹ ಸಮಾಜವೂ ಹೇರಲ್ಪಟ್ಟ ನಿಯಮಗಳಲ್ಲಿ ಸ್ತ್ರೀಯರನ್ನು ನಿಯಂತ್ರಿಸುತ್ತವೆ ಎಂಬುದನ್ನು ಇಲ್ಲಿ ಕಾಣಬಹುದು.

ಗೌತಮ ಮತ್ತು ಅಹಲ್ಯೆಯ ಮದುವೆಯ ದಿನ ಧೀರ್ಘತಮರು ತಮ್ಮ ಪತ್ನಿ ಪ್ರದ್ವೇಷಣೆ ತೀರಿ ಹೋಗಿರುತ್ತಾರೆ. ಆದ್ದರಿಂದ ಧಾರೆ ಎರಿಸಿಕೊಳ್ಳಲು ಇವರ ತಮ್ಮ ಮತ್ತು ಅವನ ಹೆಂಡತಿಗೆ ಸ್ಥಳ ಬಿಟ್ಟು ಕೊಡಲು ಮುಂದಕ್ಕೆ ಜರುಗಿದಾಗ ಧೀರ್ಘತಮರ ಬಲಗಾಲಿನ ಹೆಬ್ಬೆರಳು ಕುಂಕುಮದ ಬಟ್ಟಲಿಗೆ ತಾಗಿ, ಬಟ್ಟಲಿಲ್ಲದ ಕುಂಕುಮವೆಲ್ಲಾ ಕೆಳಕ್ಕೆ ಚೆಲ್ಲುತ್ತದೆ. ಇದನ್ನು ನೋಡಿದವರು ಅಪಶಕುನ ಎಂದು ಹೇಳುವಾಗ ಧೀರ್ಘತಮರು ಛೆ. ಛೆ. ಅರಿಶಿನ ಕುಂಕುಮ ಚೆಲ್ಲಾಡಿದ್ದು ಶುಭಶಕುನ ಎನ್ನುತ್ತಾರೆ. ತಮ್ಮ ಕಾಲಿನಲ್ಲಿ ರಕ್ತಸೋರಿದ್ದನ್ನು ಯಾರಿಗೂ ಕಾಣದಂತೆ ಹಿಂದೆ ಸರಿಯುತ್ತಾರೆ. 'ಅಪಶಕುನ' ಎಂದು ಹೇಳುವಾಗ ಲೇಖಕಿಯು ಇಂದಿನ ಸಂದರ್ಭದಲ್ಲಿ ಅನೇಕ ಇಂತಹ ಮೂಢನಂಬಿಕೆಗಳಿಗೆ ಆಚರಣೆಗಳಿಗೆ ಒಳಗಾಗಿರುವುದನ್ನು ಹೇಳಿದ್ದಾರೆ. ಅಹಲ್ಯೆ ಒಂದು ದಿನ ಸುಡುವ ಬಿಸಿಲಿನಲ್ಲಿ ಬಿಂದಿಗಿಯಿಂದ ನೀರು ತರಲು ಹೋಗುತ್ತಾಳೆ. ಗೌತಮನು ಅಧ್ಯಯನದಲ್ಲಿ ನಿರತನಾಗಿದ್ದು, ಒಂದು ಕ್ಷಣ ಅವಳನ್ನು ನೋಡುವನು. ಅಹಲ್ಯಾಯು ಬಿಸಿಲಿನಿಂದ ನೊಂದ ಪಾದಗಳನ್ನು ನೋಡುತ್ತಿರುವಾಗ ಅಲ್ಲಿಗೆ ಗೌತಮನು ಹೋಗುತ್ತಾನೆ. ಅವಳ ಪಾದಗಳನ್ನು ಎತ್ತಿಕೊಂಡು ಸವರುತ್ತಾನೆ. ಬಯಕೆ ಕೆರಳಿದಂತಾಗಿ ಎರಡು ತೋಳಿನಿಂದ ಅವನ ಎದೆಗೆ ಒರಗಿದಳು. ಆಗ ಅವಳ ಬಿಸಿಲಿನ ಆಯಾಸ ಮರೆಯಾದಂತಾಗಲು ಗೌತಮನು ಹೀಗೆ ಹೇಳುತ್ತಾನೆ. ಇದು ಹಗಲು, ರಾತ್ರಿಯಲ್ಲ ಎಂದು ಹೇಳಿ ಅವಳನ್ನು ದೂರ ತಳ್ಳುತ್ತಾನೆ. ಅಹಲ್ಯೆಯನ್ನು ಕುರಿತು ಕಾಮವು ಧರ್ಮಕ್ಕೆ ಅಡ್ಡಿಯಾಗಬಾರದು ಧರ್ಮಕ್ಕೆ ಪೂರಕವಾಗಬೇಕೆಂಬ ಮಾತಿನಿಂದ ಅವಳನ್ನು ಕಟ್ಟಿ

ಹಾಕುತ್ತಾನೆ. ಗೌತಮನ ಆ ಮಾತಿಗೆ ಪ್ರತಿಯಾಗಿ "ನಾನೇನು ತಪ್ಪು ಮಾಡಿದೆ ಹಾಗಾದರೆ ನಾನು ಕಾಮುಕಿಯೆ? ಎಂದು ಪ್ರಶ್ನಿಸುತ್ತಾಳೆ. ಇಲ್ಲಿ ಗೌತಮನಿರುತ್ತರನಾದಾಗ ಅವಳ ಪ್ರಶ್ನೆಗೆ ಹೌದೆಂಬ ಅರ್ಥ ಬರುತ್ತದೆ. ಪ್ರಕೃತಿ ಸಹಜವಾದ ಈ ವಿವಾಹ ಸಂಬಂಧಕ್ಕೆ ಗೌತಮನು ಬೆಲೆಯೇ ಕೊಡುವುದಿಲ್ಲ. ಅಲ್ಲದೆ ಗಂಡಿಗೊಂದು ನಿಯಮ, ಹೆಣ್ಣಿಗೊಂದು ನಿಯಮ ಎನ್ನುವಂತೆ ಅಹಲ್ಯೆಯ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ ಸಹಜವಾದ ಅ ಲಿಂಗನಕ್ಕೆ ಕರಗದೇ ಅವಳನ್ನು ದೂರ ತಳ್ಳುತ್ತಾನೆ.

ಗೌತಮನು ಹೆಚ್ಚಾಗಿ ಕಾಲ ಕಳೆಯುವುದು ತಪಸ್ಸಿಗಾಗಿ. ಆದರೆ ಇತ್ತೀಚಿಗೆ ಕೆಲವೊಂದು ಘಟನೆಗಳಿಂದ ಅದಕ್ಕೆ ತಡೆಯಾಗುತ್ತಿತ್ತು. ಪುನಃ ತನ್ನ ತಪಸ್ಸನ್ನು ಮುಂದುವರೆಸಲು ಮುಂದಾಗುತ್ತಾನೆ. ತನ್ನ ಸ್ನೇಹಿತನ ಹೆಂಡತಿಯ ಮಕ್ಕಳನ್ನು ಕರೆತಂದಿರುತ್ತಾನೆ. ಅವುಗಳ ಉಪಚಾರದಲ್ಲಿ ತಪಸ್ಸಿಗೆ ಸಮಯವಿಲ್ಲದಕ್ಕಾಗಿ ತನ್ನ ಅತ್ತೆಯನ್ನು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವಂತೆ ವಿನಂತಿಸಿಕೊಳ್ಳುತ್ತಾನೆ. ಅತ್ತೆಯವರು ಇಲ್ಲಿರುವುದರಿಂದ ಕೆಲವು ದಿನಗಳ ಮಟ್ಟಿಗಾದರೂ ನಾನು ಕಠಿಣ ತಪಸ್ಸನ್ನು ಕೈಗೊಂಡು ಕಲುಷಿತಗೊಂಡಿರುವ ಮನಸ್ಸನ್ನು ಸಮಾಧಾನಗೊಳಿಸಲು ಪ್ರಯತ್ನಿಸುವೆ ಎಂದು ಹೇಳಿ ತನ್ನ ಮಾತಿನ ಸಮರ್ಥನೆಗಾಗಿ ಮುದ್ಗಲರ ಮುಖವನ್ನೇ ನೋಡುತ್ತಾನೆ. ಹೆಂಡತಿಯಿಂದ ವಿಷಯ ತಿಳಿದಿದ್ದ ಅವರೂ,

> "ಆ ಮಕ್ಕಳನ್ನೇಕೆ ಕರೆತಂದಿರಿ?"
> "ಅಂತಹ ಸಂದರ್ಭ ಒದಗಿ ಬಂತು ಅಂದೆನಲ್ಲಾ, ಅತ್ತೆ ಇಲ್ಲಿರುವವರೆಗಾದರೂ
> ಮೂರು ಮಕ್ಕಳನ್ನು ನೋಡಿಕೊಳ್ಳಲಿ, ಅನಂತರ ಬೇರೆ ಏರ್ಪಾಡು ಮಾಡುವೆ".
> "ಒಟ್ಟಿನಲ್ಲಿ ನಿನ್ನ ತಪಸ್ಸು ನಿರ್ವಿಘ್ನವಾಗಿ ನಡೆಯಬೇಕು ಅಷ್ಟೇ"
> "ಹೌದು"
> "ಅಹಲ್ಯಾಳನ್ನು ಕೇಳಿರುವೆಯಾ?"
> "ಅವಳನ್ನೇನು ಕೇಳುವುದು?"

ಎಂಬ ಗೌತಮ ಉತ್ತರ ಇಬ್ಬರ ಮುಖದಲ್ಲಿಯೂ ಅಸಮಾಧಾನವನ್ನು ಮಾಡಿಸಿತು.

"ಹಾಗಲ್ಲ ಮಗೂ, ಅವಳು ನಿನ್ನ ಸಹ ಧರ್ಮಚಾರಿಣಿ, ನಿನ್ನ ಪ್ರತಿಯೊಂದು ಸುಖ - ದುಃಖದಲ್ಲೂ ಸಮಭಾಗಿ. ಕಳೆದ ಎಂಟು ತಿಂಗಳಿಂದ ನಿನ್ನ ತಪಸ್ಸು ಅವಳನ್ನು ಎಷ್ಟು ವಿಹ್ವಲಗೊಳಿಸಿದ ಬಲ್ಲೆಯಾ?"

"ಅಪ್ಪಾ, ನೀವೆಂತಹ ಅಂಧಕಾರದಲ್ಲಿರುವಿರಿ? ಒಬ್ಬ ಅಹಲ್ಯಾಳ ಮನಸ್ಸಿನ ವಿಹ್ವಲತೆಯ ತಪಿಸ್ಸಿಗಿಂತ ಹೆಚ್ಚೆ? ಅಂತಹ ನೂರಾರು ಸಾವಿರಾರು ಮನಸ್ಸುಗಳು ವಿಹ್ವಲಗೊಂಡರು....."

> ನಿನ್ನ ತಪಸ್ಸಿಗೆ ಧಕ್ಕೆಯಾಗಬಾರದು ಅಲ್ಲವೆ
>
> (ಅದೇ; ಪು. ೫೭)

ಇಲ್ಲಿ ಗೌತಮನು ತನ್ನ ತಪಸ್ಸು ಮುಖ್ಯವೆಂದು ಹೇಳುತ್ತಾನೆ. ಮುದ್ಗಲರು ನಿನ್ನ ಸಹಧರ್ಮ ಚಾರಿಣಿಯನ್ನು ಕೇಳಿರುವೆಯಾ ಎಂದಾಗ ಅವನು ತಿರಸ್ಕಾರದಲ್ಲಿ ಕೇವಲವಾಗಿ ಒಂದು ಹೆಣ್ಣು ಅವಳನ್ನು ಕೇಳುವುದೇ ಎಂದು ಅವರ ಮಾತನ್ನು ತಿರಸ್ಕರಿಸುತ್ತಾನೆ.

"ಕಾರ್ಯೇಷುದಾಸೀ ಕರುಣೇಶು ಮಂತ್ರಿ ಭೋಜೇಶುಮತಾ,

ರೂಪೇಷು ಲಕ್ಷ್ಮೀ; ಕ್ಷಮಯಧರಿತ್ರಿ, ಶಯನೇಷು ರಂಭಾ"

ಎಂದು ಗಂಡಿನ ಸುಖ ದುಃಖದಲ್ಲಿ ಹೆಣ್ಣು ಸಮಭಾಗಿಯಾಗಿ ಪಾಲ್ಗೊಂಡರೆ ಅದನ್ನು ನಿರ್ಲಕ್ಷಿಸುವ ಗೌತಮರಂತಹ ಪುರುಷರಿಂದ ವ್ಯವಸ್ಥೆಯಲ್ಲಿ ಹೆಣ್ಣು ಶೋಷಣೆಗೆ ಒಳಗಾಗಿರುವುದನ್ನು ಕಾದಂಬರಿ ಗುರುತಿಸುತ್ತದೆ. ಗೌತಮನು ಮದುವೆಯಾಗಿ ತನ್ನ ಸ್ವಾರ್ಥಕ್ಕಾಗಿ ಅಹಲ್ಯೆಯನ್ನು ಸುಖದಿಂದ ದೂರವಿಟ್ಟು ವೇದಾಧ್ಯಯನದಲ್ಲಿ ನಿರತನಾಗುತ್ತಾನೆ. ಹೆಣ್ಣಿನ ಅಂತರಂಗದ ಭಾವನೆಗಳಿಗೆ ಬೆಲೆ ಕೊಡದ ಗೌತಮ ಸಿಟ್ಟು ರೋಷಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಗೌತಮನ ವಿರಹಕ್ಕೆ ಬಲಿಯಾದ ಅಹಲ್ಯೆ, ಕಾಮದ ಬಲೆಯಲ್ಲಿ ಬೆಂದು ಬೆಂಡಾಗುತ್ತಾಳೆ. ಗೌತಮನ ವೇದಾಧ್ಯಯನವು ಅಹಲ್ಯೆಯ ಬಾಳಿಗೆ ಸಂಕೋಲೆಯಾಗಿ ಸುತ್ತಿಕೊಳ್ಳುತ್ತದೆ. ಇದರಿಂದ ಮೌನ ಮುರಿದು ಮಾತನಾಡುತ್ತಾಳೆ. ತಪಸ್ಸನ್ನು ಮುಗಿಸಿ ಬಂದ ಗೌತಮರನ್ನು ಕುರಿತು. ನಾನು ನಿಮ್ಮೊಂದಿಗೆ ಸ್ವಲ್ಪ ಮಾತಾಡಬೇಕು ಎನ್ನುತ್ತಾಳೆ. "ಗೌತಮ ಉತ್ತರಿಸುವುದಿಲ್ಲ, ಕತ್ತೆತ್ತಿ ಸಹ ಅವಳನ್ನು ನೋಡುವುದಿಲ್ಲ. ಆಗ ಅಹಲ್ಯಾ ನನ್ನ ಮುಖವನ್ನು ನೋಡಬಾರದಂಥದು ನಾನೇನು ಮಾಡಿರುವೆ ನೀವು ಇಷ್ಟು ಕಲ್ಲಾಗಿ ಹೋದಿರಾ? ಎಂದು ಕೇಳುತ್ತಾ ಬಿಕ್ಕಳಿಸುತ್ತಾಳೆ. ನನ್ನ ತಪಸ್ಸಿಗೆ ಬಾಧಕವಾಗಬಹುದಾದೆಲ್ಲವನ್ನೂ ನಾನು ಮಾರು ದೂರದಲ್ಲಿಡುವೆ ಅಹಲ್ಯಾ. ನಿಮ್ಮ ತಪಸ್ಸಿಗೆ ನಾನು ಬಾಧಕವೆ? ಹೇಗೆ? ಅದಕ್ಕೆ ಗೌತಮ ಹೀಗೆ ಪದೇ ಪದೇ ನನ್ನನ್ನು ಮಾತನಾಡಿಸಿ ಮುನಸ್ಸನ್ನು ಚಂಚಲಗೊಳಿಸಬೇಡ. ನಾನು ನಿಮ್ಮ ಧರ್ಮಪತ್ನಿ ನನ್ನೊಂದಿಗೆ ಮಾತನಾಡಿದರೆ ನಿಮ್ಮ ಮನಸ್ಸು ಚಂಚಲವಾಗುವುದೇ ಹಾಗಾದರೆ ವಸಿಷ್ಠ, ಅರುಂಧತಿಯರ ಮನಸ್ಸು ಹಾಗೆಯಿತ್ತೇ" (ಅದೇ; ಪು. ೬೬) ಎಂದು ಅಹಲ್ಯೆಯು ತನ್ನ ವೇದನೆಯನ್ನು ಗೌತಮನ ಮುಂದೆ ಹೇಳುತ್ತಾಳೆ ಮತ್ತು ತನಗೆ ಆದ ಅನ್ಯಾಯವನ್ನು ಪ್ರತಿಭಟಿಸುತ್ತಾಳೆ. ಅಲ್ಲದೆ ಇದನ್ನು ವಿರೋಧಿಸುವ ನೆಲೆಯಲ್ಲಿ ಕಾದಂಬರಿಯು ಆಧುನಿಕ ಕಾಲದವರ ಆಶಯವನ್ನು ವ್ಯಕ್ತಪಡಿಸುತ್ತದೆ. ಅಹಲ್ಯಾ ಯಾಜಮಾನ ಸಂಸ್ಕೃತಿಯ ವಸ್ತುವಾಗಿದ್ದಾಳೆ. ಗೌತಮನು ನನ್ನ ತಪಸ್ಸಿಗೆ ಬಾಧಕವಾಗುವುದನ್ನೆಲ್ಲ ದೂರ ಇಡುತ್ತೇನೆ ಎನ್ನುವಲ್ಲಿ ಹೆಣ್ಣನ್ನು ವಸ್ತುವಿನ ಸಾಲಿಗೆ ಸೇರಿಸಿರುವುದನ್ನು ನೆನಪಿಸುತ್ತದೆ. ಮದುವೆಯಾದ ಹೆಂಡತಿಯನ್ನು ಅರ್ಥಮಾಡಿಕೊಳ್ಳದ ಗೌತಮನು ಸ್ವಾರ್ಥಿಯಾಗುತ್ತಾನೆ. ನಾನು ನಿಮ್ಮ ಧರ್ಮಪತ್ನಿ ನನ್ನೊಂದಿಗೆ ಮಾತನಾಡಿದರೆ ನಿಮ್ಮ ಮನಸ್ಸು ಚಂಚಲವಾಗುತ್ತದೆಯೇ, ಹಾಗಾದರೆ ವಸಿಷ್ಠರೂ ತಮ್ಮ ಹೆಂಡತಿಯ ಸಾಮೀಪ್ಯವಿದ್ದೇ ತಪಸ್ಸನ್ನು ಪಡೆದು ಖ್ಯಾತಿವಂತರಾದರೂ ಎಂದು ಹೇಳುತ್ತಾಳೆ.

ಅಹಲ್ಯೆಯು ಗೌತಮನ ತಪಸ್ಸಿನಿಂದ ನೊಂದವಳಾಗಿದ್ದಳು. ಅವಳ ಮನಸ್ಸನ್ನು ಅರ್ಥಮಾಡಿ ಕೊಳ್ಳದ ಗೌತಮನ ತಪ್ಪಸನ್ನು ವಿಮುಖಗೊಳಿಸಲು ಉದಂಕನು ತನ್ನ ತಾಯಿಯ ಬಳಿ ನಳದಮಯಂತಿಯ

ಓಲೆಗಳನ್ನು ಬೇಡಿ ತರುತ್ತೇನೆ ಎಂದು ಹೇಳುತ್ತಾನೆ. ಅಲ್ಲದೆ ಅವುಗಳನ್ನು ನೀವು ತೊಟ್ಟರೆ ಗೌತಮರು ತಪಸ್ಸಿನಿಂದ ವಿಚಲಿತರಾಗುತ್ತಾರೆ ಎನ್ನುವ ಅವನ ಮಾತನ್ನು ತಡೆದು ಅಹಲ್ಯೆಯು "ಅವರಿಗೆ ಬೇಕಿಲ್ಲದಿರುವ ಈ ಸಂಸಾರದ ಭಾರವನ್ನು ಕೆಟ್ಟ ಮಾರ್ಗದಿಂದ ತುಳಿಯುವುದು ಬೇಡ, ಅವರು ತಮ್ಮ ತಪಸ್ಸು ಪೂರೆಸಿ ಬರಲಿ ಅಲ್ಲಿಯವರೆಗೂ ನಾವೆಲ್ಲಾ ಬದುಕಿದ್ದರೆ ಅನಂತರ ಸುಖವಾಗಿರೋಣ" ಎನ್ನುತ್ತಾಳೆ. ಸಂಸಾರಿಕ ಜೀವನದಲ್ಲಿ ನೊಂದ ಜೀವಕ್ಕೆ ಈಗ ಸುಖಪಡುವ ಸಲುವಾಗಿ ವಾಮಮಾರ್ಗವನ್ನು ಅನುಸರಿಸುವುದು ಬೇಡ. ಯಾವುದೇ ಕೆಲಸವನ್ನು ಮಾಡುವಾಗ ಅದು ಧರ್ಮಕ್ಕೆ ಪ್ರೇರಕವಾಗಿರಬೇಕೇ ಹೊರತು ವಿರುದ್ಧವಾಗಿರ ಬಾರದು. ಇಲ್ಲಿ ಅಹಲ್ಯೆಯು ಸಹನಮಾಯಿಯಾಗಿ, ತಾಳ್ಮೆಯಿಂದ ತನ್ನ ಜೀವನ ಮುಂದೆ ಸರಿಯಾಗ ಬಹುದು ಎಂಬ ನಂಬಿಕೆ ಹೊಂದಿರುವ ಅವಳ ಅಸಹಾಯಕ ಸ್ಥಿತಿಯನ್ನು ನೋಡಬಹುದು.

ದೇವೇಂದ್ರ ಬೆಕ್ಕಿನ ರೂಪದಲ್ಲಿ ಕೋಣೆ ಪ್ರವೇಶಿ, ನಿಜರೂಪದಲ್ಲಿ ಅಹಲ್ಯಾಯೊಡನೆ ದೈಹಿಕ ಸುಖ ಅನುಭವಿಸುತ್ತಾನೆ. ಆದರೆ ಮೂಲದಲ್ಲಿ ಗೌತಮನು ಆಶ್ರಮದಲ್ಲಿ ಇಲ್ಲದಿರುವ ಸಮಯವನ್ನು ನೋಡುತ್ತಾನೆ. ಅಲ್ಲದೇ ಅವನ ವೇಷಧರಿಸಿ ಅಹಲ್ಯೆಗೆ ಇವನು ದೇವೇಂದ್ರ ಎಂದು ಸ್ವಲ್ಪವೂ ಅನುಮಾನ ಬರದ ರೀತಿಯಲ್ಲಿ ಅವಳೊಂದಿಗೆ ದೈಹಿಕ ಸುಖವನ್ನು ಪಡೆಯುತ್ತಾನೆ. ಇದು ಕಥೆಯಲ್ಲಿ ಬದಲಾವಣೆ ಯಾಗಿರುವ ಅಂಶ. ಹಸಿದ ಅಹಲ್ಯೆಗೆ ಇದು ಹಬ್ಬವಾಗುತ್ತದೆ. ಒಮ್ಮೆ ಗೌತಮನ ಕೈ ಸಿಕ್ಕಿ ಬಿದ್ದ ದೇವೇಂದ್ರನಿಗೆ 'ಪುರುಷತ್ವವೇ ನಾಶವಾಗಲಿ' ಎಂಬ ಶಾಪ ಕೊಡುತ್ತಾನೆ. ಇದು ಸಹ ಮೂಲದಲ್ಲಿ ಇಲ್ಲ. ಅವನ ಶಾಪಕ್ಕೆ ಬದಲಾಗಿ ಅಹಲ್ಯೆಗೆ ಕಲ್ಲಾಗು ಎಂದು ಶಪಿಸುತ್ತಾನೆ. ದೇವೇಂದ್ರನಿಗೆ ಶಾಪ ಕೊಡುವುದರ ಮೂಲಕ ತನ್ನ ತಪಃಶಕ್ತಿಯನ್ನೆಲ್ಲ ಕಳೆದುಕೊಳ್ಳುತ್ತಾನೆ. ದೇವೇಂದ್ರನಿಗೆ ಇದರಿಂದ ಸಂತೋಷವಾಗುತ್ತದೆ. ಗೌತಮ ಮತ್ತು ದೇವೇಂದ್ರರ ಈ ಮೇಲಾಟದ ನಡುವೆ ಅಹಲ್ಯೆ ಎಂಬ ಹೆಣ್ಣಿನ ಸೂಕ್ಷ್ಮ ಭಾವನೆಗಳಡೆ ಯಾರೂ ಗಮನಹರಿಸುವುದಿಲ್ಲ. ಇದನ್ನು ಲೇಖಕರೆ ಬಹುಸೂಕ್ಷ್ಮವಾಗಿ ತೋರಿಸಿಕೊಟ್ಟಿದ್ದಾರೆ. ಮುಂದೆ ಗೌತಮನ ಮನೆಯ ಶಾಂತಿ ಪೂರ್ಣ ಕದಡಿ ಹೋಗಿ, ಗೌತಮ ಮತ್ತೆ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ಅಪರಾಧೀ ಭಾವನೆಯಿಂದ ಮುಂದಿನ ಐದು ವರ್ಷಗಳನ್ನು ನವೆಯುತ್ತಾ ಅಹಲ್ಯಾ ಜೀವನವನ್ನು ಕಳೆಯುತ್ತಾಳೆ.

ಗೌತಮನ ತಪಸ್ಸು ಅವಳ ಬಯಕೆಗಳಿಗೆ ಅಡ್ಡಿ ಮಾಡಿವೆ. ದೇವೇಂದ್ರನ ಮೋಹ ಹಾಗೂ ಅಹಲ್ಯೆಯ ಕಾಮದ ಹಸಿವಿನ ಸಂದರ್ಭಗಳು ಅಹಲ್ಯೆಯ ಬದುಕಿನ ಮೇಲೆ ಕಾರ್ಮೋಡಗಳನ್ನು ಕಟ್ಟಿದವು. ಇಂತಹ ಸಮಯದ ಒತ್ತಡಕ್ಕೆ ಸಿಕ್ಕ ಅಹಲ್ಯೆಯು ದೇವೇಂದ್ರನ ಸಹವಾಸವನ್ನು ಬಯಸುತ್ತಾಳೆ. ಇದನ್ನು ನೋಡಿದ ಗೌತಮ ಇವಳಿಂದ ದೂರವಿರುತ್ತಾನೆ. ಇದು ಕಾದಂಬರಿಯಲ್ಲಿನ ಬದಲಾವಣೆ, ಮೂಲಕತೆಯಲ್ಲಿ ಕಲ್ಲಾಗು ಎಂದು ಹೇಳುತ್ತಾನೆ. ಮುಂದೆ ರಾಮನ ಪಾದ ಸ್ಪರ್ಶದಿಂದ ಶಾಪ ವಿವೇಚನೆಯಾಗುತ್ತದೆ. ಮತ್ತೆ ನಿನ್ನನ್ನು ಸೇರುತ್ತೇನೆಂದು ಹೇಳುತ್ತಾನೆ. ಆದರೆ ಇಲ್ಲಿ ಅಹಲ್ಯೆಯ ಜಡವಾದ ಬದುಕನ್ನು ಉದ್ಧಾರ ಮಾಡಲು ರಾಮನ ಆಗಮನದಿಂದ ಮಾನವೀಯ ಸಂಬಂಧಗಳನ್ನು

ಒಟ್ಟುಗೂಡಿಸುತ್ತದೆ. ರಾಮನು ಗೌತಮನನ್ನು ಕುರಿತು "ಗೌತಮರೇ ಸ್ವಲ್ಪ ಕಣ್ಣು ತೆರೆದು ನೋಡಿ ನಿಮ್ಮ ಸುತ್ತಮುತ್ತಲಿನ ಎಷ್ಟೊಂದು ಕ್ಷತ್ರಿಯರು ಅನೇಕ ಪತ್ನಿಯರನ್ನು ಹೊಂದಿದ್ದಾರೆ. ರಾಜನೋ ಬಹುವಲ್ಲಭ! ಎಂಬ ಸೂತ್ರವನ್ನು ತಮ್ಮ ಅನುಕೂಲಕ್ಕಾಗಿಯೇ ಮಾಡಿಕೊಂಡು ಹಲವು ಹೆಂಡಿರನ್ನು ಕಟ್ಟಿಕೊಂಡು ಸುಖಿಸುತ್ತಿದ್ದಾರೆ. ಒಬ್ಬ ಗಂಡಸು ಯಾವುದೇ ಕಾರಣದಿಂದ ಹೀಗೆ ಒಬ್ಬಳಿಗಿಂತ ಹೆಚ್ಚು ಜನ ಸ್ತ್ರೀಯರಲ್ಲಿ ರಮಿಸಬಲ್ಲನಾದರೆ, ಒಬ್ಬ ಹೆಂಗಸು ಒಬ್ಬ ಗಂಡನಲ್ಲಿ ಯಾವುದೇ ಕಾರಣದಿಂದ ತೃಪ್ತಿ ಕಾಣದೆ ಇನ್ನೊಂದು ಗಂಡನ್ನು ಬಯಸುವುದರಲ್ಲಿ ತಪ್ಪೇನಿದೆ? ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿಯೇ?" ಇದಕ್ಕೆ ಪ್ರತಿಯೂತ್ತರವಾಗಿ ಗೌತಮ ಹೀಗೆ ಹೇಳುತ್ತಾನೆ. ತುಂಬಾ ಹಿಂದೆ ಒಬ್ಬ ಲಂಪಟ ನನ್ನನ್ನು ಇದೇ ಪ್ರಶ್ನೆ ಕೇಳಿದ್ದ. ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿಯೇ? ಎಂದು ಅವನಿಗ ಪೌರುಷವನ್ನು ಕಳೆದುಕೊಂಡು ಹೇಗೆ ನರಳುತ್ತಿರುವನೋ ಬಲ್ಲೆಯಾ?" ಇಲ್ಲ ಮಹರ್ಷಿಗಳೇ ನೀವು ತಪ್ಪು ತಿಳಿದಿರುವಿರಿ. ಅಮೂಲ್ಯ ಗಿಡಮೂಲಿಕೆಗಳನ್ನು ಬಲ್ಲ ದೇವತೆಗಳು ಅವನನ್ನು ಆ ಕ್ಷಣವೇ ಗುಣಪಡಿಸಿದರು. ಅವನಲ್ಲ ನರಳುತ್ತಿರುವುದು. ನಿಮ್ಮ ಪತ್ನಿ ನರಳುತ್ತಿದ್ದಾಳೆ (ಅದೇ; ಪು. ೮೮).

ಪುರುಷನಾದವನು ತನ್ನ ಅನುಕೂಲಕ್ಕಾಗಿ ಮಾಡಿಕೊಂಡ ನಿಯಮಗಳು ಹೆಣ್ಣಿಗೆ ಅವು ನಿರ್ಬಂಧ ವಾಗುತ್ತದೆ. ಇವನು ಎಷ್ಟಾದರೂ ಹೆಣ್ಣುಗಳನ್ನು ಹೊಂದಬಹುದು. ಇಂತಹ ವರ್ತನೆ ಹೆಣ್ಣಿಗೆ ಸಲ್ಲುದ ಎಂದಾಗ, ಕದ್ದು ಮುಚ್ಚಿ ಮಾಡುವಂತಹ ಸಂದರ್ಭಕ್ಕೆ ಸಿದ್ಧಳಾದರೆ ಅದಕ್ಕೆ ಅವನೇ ಕಾರಣನಾಗುತ್ತಾನೆ. ಅಹಲ್ಯೆ ಇಲ್ಲಿ ಸಂದರ್ಭಕ್ಕೆ ಸಿಕ್ಕ ಬಲಿಪಶು ಆಗಿದ್ದಾಳೆ. ಇಂತಹ ಒಳನೋಟಗಳಲ್ಲಿ ಕಾದಂಬರಿಯು ವೈಚಾರಿಕ ನೆಲೆಯಲ್ಲಿ ಗಂಭೀರ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ವೈವಾಹಿಕ ಜೀವನ ಸುಸೂತ್ರವಾಗಿ ನಡೆಯಬೇಕಾದರೆ ಗಂಡು ಹೆಣ್ಣು ಪರಸ್ಪರ ಅರ್ಥಮಾಡಿಕೊಳ್ಳಬೇಕು. ಪುರುಷ ತನ್ನ ಅಧಿಕಾರವಾಣಿಯಿಂದ ದರ್ಪದಿಂದ ನಡೆದುಕೊಳ್ಳದೇ ಆಕೆಯ ಮನಸ್ಸನ್ನು ಅರಿಯುವಂತನಾಗಿರಬೇಕು. ಆಗ ಮಾತ್ರ ಸಂಸಾರ ಬಹಳ ಸುಖಮಯವಾಗಿರುತ್ತದೆ.

ರಾಮನು ಅಹಲ್ಯಾಳ ಪಾದಗಳಿಗೆ ನಮಸ್ಕರಿಸಿದಾಗ, ಅಹಲ್ಯಾ ಈ ಪಾಪಿಯ ಕಾಲಿಗೇಕಪ್ಪಾ ನಮಸ್ಕಾರ ಮಾಡುವೆ? ಎಂದು ಅವಳು ಬಿಕ್ಕಿದ್ದಳು. ರಾಮ ಅವಳ ಮುಖವನ್ನೇ ನೋಡುತ್ತಾ, ಎರಡನೇ ತಾಯಿಯದ ನಿಮ್ಮನ್ನು ಇಂದು ಕಂಡೆ. ನೀವು ಪಾಪಿಯಲ್ಲ. ಪರಮ ಪವಿತ್ರರು. ನಿಮ್ಮನ್ನು ಈ ಸ್ಥಿತಿಗೆ ತಂದವರು ಯಾರೇ ಇರಲಿ, ಅವರೇ ನಿಜವಾದ ಪಾಪಿಗಳಾಗಿದ್ದಾರೆ ಎನ್ನುವಲ್ಲಿ ಶ್ರೀರಾಮ ಸ್ತ್ರೀವಾದದ ಪಂಡಿತನಾಗಿ ಚಿತ್ರಿತನಾಗಿದ್ದಾನೆ. ಹಿಂದೆ ಅಂದರೆ ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಎಷ್ಟು ಸ್ವಾತಂತ್ರ್ಯವಿತ್ತು ಗೊತ್ತೇ, ಮದುವೆಯಾಗಿ ಮಕ್ಕಳಾಗಿರುವ ಹೆಂಗಸು ಕೂಡ ಇನ್ನೊಬ್ಬ ಸುಂದರ ಪುರುಷನನ್ನು ಕಂಡರೆ ಅವನೊಂದಿಗೆ ಹೋಗಬಹುದಾದ ಸ್ವಾತಂತ್ರ್ಯ ಅವಳಿಗಿತ್ತು. ಆದರೆ ಇದನ್ನು ನೋಡಿದ ಆ ಶ್ವೇತಕೇತು ಮುನಿಗೆ ತುಂಬಾ ಕೆಡುಕೆನ್ನಿಸಿತು. ಅಂದಿನಿಂದ ಅವನು ಸ್ತ್ರೀಯರಿಗೆ ಅನೇಕ ಕಟ್ಟುಪಾಡುಗಳನ್ನು ಹಾಕಿದ.

"ನಿಸರ್ಗವು ಹೇಳುವ ನಿಯಮವೇ ಬೇರೆ,
ಹೆಣ್ಣಾಗಾಗಲೀ ಗಂಡಿಗಾಗಲೀ
ಶಾಸ್ತ್ರಗಳು ಧರ್ಮಗಳು ಹೇಳುವ ನಿಯಮವೇ ಬೇರೆ
ಅದು ಗಂಡಿಗೊಂದು ರೀತಿ, ಹೆಣ್ಣಿಗೊಂದು ರೀತಿಯೇ"

(ಅದೇ; ಪು. ೯೧)

ಎಂಬ ರಾಮನ ಮಾತುಗಳು ಈ ಕಾದಂಬರಿಯ ಹೂರಣವಾಗಿದೆ. ಮನುಷ್ಯನು ತನಗೆ ಇಷ್ಟ ಬಂದ ರೀತಿಯಲ್ಲಿ ಇಂದಿನ ಆಧುನಿಕ ಕಾಲದಲ್ಲಿ ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ನಡೆಯುತ್ತಾನೆ. ಮನುಷ್ಯನೇ ತೊಂದರೆಗೆ ಒಳಗಾಗುವುದನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಈ ಕಾದಂಬರಿಯು ಚಿತ್ರಿಸಿದೆ. ತಾನೊಂದು ಬಗೆದರೆ ದೈವ ಮತ್ತೊಂದು ಬಗೆಯುವುದು ಎನ್ನುವಂತಹದು ಸತ್ಯವಾದ ಮಾತಾಗಿದೆ.

ರಾಮನ ಮಾತಿನಂತೆ ಅಹಲ್ಯೆಯನ್ನು ಗೌತಮ ಮತ್ತೆ ಸ್ವೀಕರಿಸುತ್ತಾನೆ. ಅಹಲ್ಯೆ ಗೌತಮನ ಬೆಲೆಯನ್ನು ತನ್ನದೇ ರೀತಿಯಲ್ಲಿ ಅರ್ಥೈಸಿಕೊಂಡು ಸಂತುಷ್ಟಳಾಗುತ್ತಾಳೆ. ವಿಶ್ವಾಮಿತ್ರರಿಗೆ ತಾವು ಮೇನಕೆಯನ್ನು ತಿರಸ್ಕರಿಸಿ, ಶಕುಂತಲೆಗಾದ ಅನ್ಯಾಯದ ಪಾಪಕ್ಕೆ ಈ ದಂಪತಿಗಳ ಸಮಾಗಮದಿಂದ ಪ್ರಾಯಶ್ಚಿತ್ತವಾದಂತೆನ್ನಿಸುತ್ತದೆ. ಮುಂದೆ ಅಹಲ್ಯೆ ಮತ್ತೊಬ್ಬ ಮಗನನನು ಪಡೆಯುತ್ತಾಳೆ. ತನ್ನೊಬ್ಬನ ಆತ್ಮೋದ್ಧಾರಕ್ಕೆ ಒಂಟಿಯಾಗಿ ತಾನು ಹೊರಟಿದ್ದರ ತಪ್ಪನ್ನು ಅರಿತು ಗೌತಮ ಸಂಸಾರದಲ್ಲಿ ಆಸಕ್ತಿ ತೋರಿಸಲಾರಂಭಿಸುತ್ತಾನೆ.

ಈ ಕಾದಂಬರಿಯ ಪ್ರತಿಘುಟ್ಟದಲ್ಲೂ ಅಹಲ್ಯೆಯ ಮನಸ್ಸಿನ ಸೂಕ್ಷ್ಮಗಳನ್ನು ಬಿಡಿಸಿಟ್ಟಿರುವ ರೀತಿ ಅನನ್ಯವಾದದ್ದು. ಕೊನೆಯಲ್ಲಿ, ಮಗಳ ಬಗ್ಗೆ ಯೋಚಿಸುವ ಅಹಲ್ಯೆ. "ಆದರೂ.... ನನ್ನ ಪ್ರಶ್ನೆಗಳು ಹಾಗೆ ಉಳಿಯುತ್ತವೆ. ಬಹುಶಃ ಅವು ನನ್ನ ಮಗಳ ಪ್ರಶ್ನೆಗಳು ಆಗಿದ್ದರೆ ಅವು ಹಾಗೇ ಉಳಿಯುತ್ತವೆ. ಈ ಸಮಾಜದಲ್ಲಿ ಸ್ತ್ರೀಯರ ಹೃದಯದಲ್ಲೇಳುವ ಪ್ರಶ್ನೆಗಳಿಗೆ ಇಷ್ಟೇ ಗತಿ" (ಅದೇ; ಪು. ೧೦೪). ಇದಕ್ಕೆ ಎಂದು ಕೊನೆ, ಎಂದು ತನ್ನ ಅಸಾಹಯಕತೆಯನ್ನು ನೊಂದ ಮನಸ್ಸಿನಿಂದ ನುಡಿಯುತ್ತಾಳೆ.

ಹೀಗೆ ಅಹಲ್ಯೆಯು ಮುದ್ಗಲರ ಹಾಗೂ ಧೌಮರ ಮಗಳಾಗಿ ಅಪಾರ ಸೌಂದರ್ಯವನ್ನು ಪಡೆದವಳು. ತಂದೆಯ ಕಟ್ಟುನಿಟ್ಟಿನಲ್ಲಿ ಬೆಳೆದವಳು. ಚಿಕ್ಕ ವಯಸ್ಸಿನಲ್ಲಿ ಮಂತ್ರಗಳನ್ನು ಏಕೆ ಹೇಳಬಾರದು ಎಂದು ಪ್ರಶ್ನಿಸಿದವಳು. ಕಾದಂಬರಿಯಲ್ಲಿ ದೌರ್ಜನ್ಯಕ್ಕೆ ಒಳಗಾಗಿ ಶೋಷಣೆಯ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ತಂದೆ ಮದುವೆ ಮಾಡಿಕೊಟ್ಟ ಗೌತಮ ಋಷಿಗಳ ಕೈ ಹಿಡಿಯುತ್ತಾಳೆ. ಚಿಕ್ಕಂದಿನಲ್ಲಿ ದೇವೇಂದ್ರನ ಬಗ್ಗೆ ಕುತೂಹಲವಿದ್ದವಳಾಗಿ ಅಹಲ್ಯೆಯು ಮನಸ್ಸಿನೊಳಗೆ ಸಂಭ್ರಮಿಸುತ್ತಾಳೆ. ಗೌತಮನು ಅಹಲ್ಯೆಯನ್ನು ದೇಹ ಸುಖದಿಂದ ದೂರವಿಟ್ಟು ತಾನು ತಪಸ್ಸು ಅಧ್ಯಯನಕ್ಕೆ ತೊಡಗುತ್ತಾನೆ. ಅವನ ಸ್ವಾಭಾವವನ್ನು ಅರಿತವಳಾದರೂ ತನಗೆ ಸುಖ ಕೂಡದ ಗೌತಮನನ್ನು ಪ್ರತಿಭಟಿಸಬಲ್ಲಳು. ಪುರುಷ ಪ್ರಧಾನ ವ್ಯವಸ್ಥೆ ಸ್ತ್ರೀಯರನ್ನು ಖಾಸಗಿ ಆಸ್ತಿಯಾಗಿ ನೋಡುವ ಗೌತಮನ ವ್ಯಕ್ತಿತ್ವವನ್ನು ಇಲ್ಲಿ ತೋರಿಸಲಾಗಿದೆ.

ಅಹಲ್ಯೆಯು ಸಂದರ್ಭಕ್ಕೆ ಸನ್ನಿವೇಶಕ್ಕೆ ಸಿಲುಕಿ ತನ್ನ ಬಯಕೆಯನ್ನು ಹಾಗೂ ದೇವೇಂದ್ರನ ರೂಪಕ್ಕೆ ಮಾರು ಹೋಗಿ ಅವನಲ್ಲಿ ಅನುರಕ್ತಳಾಗುವಳು. ಗೌತಮ ಹಾಗೂ ಅಹಲ್ಯೆಯರ ಮಧ್ಯೆ ಮೌನವೇ ಕಲ್ಲಾಗಿ ನಿಲ್ಲುತ್ತದೆ. ರಾಮನ ಹಾಗೂ ವಿಶ್ವಾಮಿತ್ರ ಪ್ರಸಂಗದಿಂದ ಅಹಲ್ಯೆಗೆ ಹೊಸ ಬದುಕು ಪ್ರಾಪ್ತವಾಗುವುದನ್ನು ಪ್ರಭಾವತಿಯವರು ವೈಚಾರಿಕ ನೆಲೆಯಲ್ಲಿ ಮಾನವೀಯತೆಯಿಂದ ವಿಶ್ಲೇಷಣೆಗೆ ಒಳಪಡಿಸಿರುವರು. ಗೌತಮನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಹೀಗೆ ಗೌತಮ ಮತ್ತು ಅಹಲ್ಯೆಯರನ್ನು ಮತ್ತೆ ಒಂದುಗೂಡಿಸುವಲ್ಲಿ ರಾಮನ ಪಾತ್ರ ಮಹತ್ವದಾಗುತ್ತದೆ. ಗೌತಮನ ತಪ್ಪಿನ ಅರಿವಾಗಿ ಮತ್ತೆ ಇಬ್ಬರಲ್ಲಿ ಅನೋನ್ಯತೆ ತರುವಲ್ಲಿ ಅಹಲ್ಯೆಯ ಪಾತ್ರವು ತುಂಬಾ ಮಹತ್ವದ ಪಾತ್ರವಾಗಿ ರೂಪುಗೊಂಡಿದೆ.

ಪುರುಷನ ಭೋಗಲಾಲಸೆ, ಕಾಮಾಸಕ್ತಿ, ಲೋಭತೆಗಳು ತಮಗೆ ಬೇಕಾದ ರೀತಿಯಲ್ಲಿ ಧಾರ್ಮಿಕ ಸೂತ್ರಗಳನ್ನು, ನಿಯಮಗಳನ್ನು ಹೆಣ್ಣಿಗೆಂದೇ ರೂಪಿಸಲಾಗಿದೆ. ಅಲ್ಲದೆ ಸುತ್ತಲೂ ಕಟ್ಟುಪಾಡುಗಳನ್ನು ನಿರ್ಮಿಸಲಾಗಿದೆ. ಅನೇಕ ಹೆಂಡತಿಯರನ್ನು ಪಡೆದು ಭೋಗಿಸಿ ಸುಖಪಟ್ಟು, ಅವರುಗಳನ್ನು ಅಲ್ಲಲ್ಲಿಯೇ ಬಿಟ್ಟುಹೋಗುತ್ತಾರೆ. ಪ್ರಸ್ತುತ ನಮ್ಮ ಕಣ್ಣೆದುರಿಗೆ ಮಹಿಳೆಯರ ಮೇಲೆ ನಡೆಯುತ್ತಿರುವ ಎಲ್ಲ ಬಗೆಯ ಶೋಷಣೆಗಳು ರಾಮಾಯಣ-ಮಹಾಭಾರತಗಳಲ್ಲಿ ನಡೆದಿರುವುದು ಸ್ಪಷ್ಟವಿದೆ. ಸಾವಿರಾರು ವರ್ಷಗಳಿಂದಲೂ ಹೆಣ್ಣಿಗೆ ಮಾನಾಪಹರಣ, ಹೆಣ್ಣಿನ ಅಪಹರಣ, ಬಹುಪತ್ನಿತ್ವ, ವನವಾಸ, ಬಾಲ್ಯ ವಿವಾಹ, ಗಾಂಧರ್ವವಿವಾಹ, ಸತಿಪದ್ಧತಿ, ಅಗ್ನಿಪ್ರವೇಶ, ದಾಸಿಪದ್ಧತಿ, ಹೆಣ್ಣನ್ನು ಮಾರುವುದು, ಒತ್ತೆ ಇಡುವುದು, ಹೀಗೆ ಒಂದಲ್ಲ ಒಂದು ಕಾರಣಕ್ಕೆ ಹೆಣ್ಣು ನರಳುತ್ತಿರುವುದನ್ನು ಕಾಣಬಹುದು

೪.೨. ಸೀತಾ

ವಾಲ್ಮೀಕಿ ರಾಮಾಯಣದ ಪ್ರಧಾನ ಸ್ತ್ರೀಪಾತ್ರವಾದ, ಸೀತೆಯನ್ನು ಕುರಿತು ಪ್ರಭಾವತಿಯವರು ಸ್ತ್ರೀವಾದಿ ದೃಷ್ಟಿಕೋನದಿಂದ 'ಸೀತಾ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಮೂಲಕತೆಯಲ್ಲಿ ರಾಮನ ಹೆಂಡತಿಯಾಗಿ ರಾವಣನಿಂದ ಅಪಹರಣಕ್ಕೊಳಗಾದ ಸೀತೆಯು ಪುರುಷ ಶೋಷಣೆಯನ್ನು ಪ್ರಶ್ನಿಸದೇ ಆದರ್ಶನಾರಿಯಾದಳು. ಭಾರತೀಯ ಸಂಸ್ಕೃತಿಯ ಪೂಜ್ಯ ಮಾತೆಯಾದಳು. ಆದರೆ ಅಲ್ಲಿ ಮೌನವಾಗಿದ್ದ ಸೀತೆಯು ಇಲ್ಲಿ ತನ್ನ ಅಸ್ತಿತ್ವಕ್ಕಾಗಿ ಯಜಮಾನ ಸಂಸ್ಕೃತಿಯ ಪ್ರತಿನಿಧಿಗಳಾದ ರಾಮ ರಾವಣರ ಶೋಷಣೆಯನ್ನು ಖಂಡಿಸುತ್ತಾಳೆ. ಆಧುನಿಕ ಮಹಿಳೆಯಾಗಿ ನಿಲ್ಲುವ ಈಕೆ ಪುರುಷನ ದೌರ್ಜನ್ಯಕ್ಕೆ ಒಳಗಾದ ಸ್ತ್ರೀಯರ ಧ್ವನಿಯಾಗುವುದನ್ನು ಕಾದಂಬರಿ ಗುರುತಿಸುತ್ತದೆ. ಜನಕರಾಜನ ಹೊಲದಲ್ಲಿ ದೊರೆತ ಸೀತೆ ಅರಮನೆಯಲ್ಲಿ ಬೆಳೆಯುತ್ತಾಳೆ. ಮೂಲದಲ್ಲಿ ಜನಕರಾಜನು ಯಜ್ಞ ಮಾಡುವ ಸಲುವಾಗಿ ಯಾಗಭೂಮಿಯನ್ನು ನೇಗಿಲಿನಿಂದ ಉಳುತ್ತ ಭೂಮಿಯನ್ನು ಶೋಧಿಸುವಾಗ ಭೂಮಿಯಲ್ಲಿ ಕನ್ಯೆಯೊಬ್ಬಳು ದೊರೆತಳು. ಅವಳಿಗೆ ಸೀತೆ ಎಂದು ಹೆಸರಿಟ್ಟು ಮಗಳಂತೆ ಜನಕ ಬೆಳೆಸಿದನು. ಸೀತೆಯು ಅಯೋನಿಜೆ, ಈಕೆಯನ್ನು ವರಿಸಲು ಬಂದವರಿಗೆ ಶಿವಧನಸ್ಸು ಮುರಿಯುವ ಪಣವಿಟ್ಟಿರುತ್ತಾರೆ. ರಾಮನು ಧನಸ್ಸನ್ನು ಮುರಿದು ಸೀತೆಯನ್ನು ವರಿಸುತ್ತಾನೆ. ಅಂದಿನಿಂದ ಸೀತೆ ರಾಮನಿಗೆ ಅನುರೂಪ ಸತಿಯಾಗಿ ಇರುತ್ತಾಳೆ. ವನವಾಸ ಪ್ರಾಪ್ತಿಯಾದಾಗ ರಾಮನ ನೆರಳಿನಂತೆ ಸೀತೆ ರಾಮನನ್ನು ಅನುಸರಿಸುತ್ತಾಳೆ. ವನವಾಸ ಸಮಯದಲ್ಲಿ

ರಾಮನೊಂದಿಗೆ ಕಾಡುಮೇಡು ಅಲೆದು ರಾಮನ ಸೇವೆಯಲ್ಲಿ ಸಂತೃಪ್ತಯಾಗಿರುತ್ತಾಳೆ. ಋಷಿ ಪತ್ನಿಯರಿಂದ ಪಾತಿವ್ರತ್ಯದ ಬಗ್ಗೆ ತಿಳಿದು ಎಳಸುತನ ಅಳಸಿ ಪ್ರಬುದ್ಧತೆ ಮೈತೋರುತ್ತದೆ. ರಾವಣನಿಂದ ಅಪಹರಿಸಲ್ಪಟ್ಟರೂ ತನ್ನ ಪಾತಿವ್ರತ್ಯದ ಬಲದಿಂದ ಪರಿಶುದ್ಧಳಾಗಿ ಪೂಜೆ, ಧ್ಯಾನ, ತಪಸ್ಸಿನಲ್ಲಿ ತೊಡಗಿ ತನ್ನ ಮಹಿಮೆಯಿಂದ ಪರಿಚಾರಕರಲ್ಲಿ ಸಾತ್ವಿಕತೆ ಬಳಸಿ ವ್ರತನಿಷ್ಠೆಯಿಂದ ರಾಮನನ್ನು ಹೃದಯದಲ್ಲಿ ಅಲಂಕಾರಿಸಿಕೊಂಡು ತಪಸ್ಸಿನಲ್ಲಿ ನಿರತಳಾಗಿ ರಾಮನನ್ನು ಪಡೆಯುತ್ತಾಳೆ. ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರು ಇವಳ ತಂಗಿಯರು. ಅರಮನೆಯಲ್ಲಿ ಹಾಲುತುಪ್ಪದಲ್ಲಿ ಕೈತೊಳೆದರು, ಹೆಣ್ಣು ಮಕ್ಕಳಿಗೆ ಅಭಿವ್ಯಕ್ತಿ ಸ್ವಾತಂತ್ರ ವಿರುವುದಿಲ್ಲ. ಜನಕರಾಜನ ಹೆಂಡತಿಯರು ಹಿಂದಿನ ಪರಂಪರೆಗಳನ್ನು ಮಕ್ಕಳಿಗೆ ಅರೆದು ಕುಡಿಸಿರುತ್ತಾರೆ. ಗಂಡನನ್ನು ಪ್ರಶ್ನಿಸಬಾರದು. ಪ್ರಶ್ನಿಸಿದರೆ ಬರಬಹುದಾದ ಅನಾಹುತಗಳನ್ನು ನೀತಿ ಕಥೆಗಳಿಂದ ನಿರೂಪಿಸುತ್ತಾ ಅವರನ್ನು ಬಂಧಿಸಿರುತ್ತಾರೆ. ಲೇಖಕಿ ಸೀತೆಯನ್ನು ಆದರ್ಶನಾರಿ ಎಂಬುದನ್ನು ಹೇಳುತ್ತಾ ಮೂಲಕತೆಯ ಪ್ರಭಾವವನ್ನೇ ಮುಂದುವರೆಸಿದರೂ ಕಾದಂಬರಿ ಬೆಳವಣಿಗೆಯಲ್ಲಿ ಸ್ತ್ರೀವಾದ ವಿಚಾರಗಳ ಸುಳಿಯುತ್ತ ಬಂದು ನಿಲ್ಲುತ್ತದೆ.

ಸೀತೆಗೆ ಮದುವೆ ಮಾಡಬೇಕೆಂದು ಯೋಚಿಸಿದ ಜನಕ ಮಹಾರಾಜನು ಸ್ವಯಂವರದ ಸ್ಪರ್ಧೆಯನ್ನು ಏರ್ಪಡಿಸುತ್ತಾನೆ. ಆ ಸ್ಪರ್ಧೆಯಲ್ಲಿ ಗೆದ್ದ ರಾಮನಿಗೆ ಧಾರೆಯೆರೆಯವುದಲ್ಲದೆ, ಉಳಿದ ಹೆಣ್ಣು ಮಕ್ಕಳನ್ನು ದಶರಥನ ಮಕ್ಕಳಿಗೆ ಕೊಟ್ಟು ಧಾರೆಯೆರೆಯುವೆ ಎನ್ನುತ್ತಾನೆ. ಆಗ ಸೀತೆಯು "ತಂಗಿ, ನೀನು ಇನ್ನೊಂದು ವಿಷಯ ಗಮನಿಸಿದೆಯಾ? ನಾನೇನೋ ಸ್ಪರ್ಧೆಯ ಪಣ. ಸ್ಪರ್ಧೆಯಲ್ಲಿ ಗೆದ್ದವನ ಆಸ್ತಿ. ಆದರೆ ನಿಮ್ಮ ಮೂವರಲ್ಲಿ ಯಾರನ್ನಾದರೂ ಈ ಮದುವೆ ನಿಮಗೆ ಒಪ್ಪಿಗೆಯ ಎಂದು ತಂದೆ ಕೇಳಲೇ ಇಲ್ಲ ನೋಡು" ಎನ್ನುತ್ತಾಳೆ. ಯಾಜಮಾನ ಸಂಸ್ಕೃತಿಯು ಹೆಣ್ಣಿಗೆ ಅಭಿವ್ಯಕ್ತಿ ಸ್ವತಂತ್ರ್ಯವನ್ನು ನೀಡದೆ, ತನ್ನ ಮುಷ್ಠಿ ಯಲ್ಲಿಟ್ಟುಕೊಂಡಿರುವ ವ್ಯವಸ್ಥೆಯ ಅಸಡ್ಡೆತನವನ್ನು ಪ್ರತಿರೋಧಿಸುವ ಪಾತ್ರವಾಗಿ ಕಾದಂಬರಿಯಲ್ಲಿನ ಸೀತೆ ಪಾತ್ರ ಮಹತ್ವವನ್ನು ಪಡೆದುಕೊಳ್ಳುತ್ತದೆ. ರಾಮ ಸೀತೆಯನ್ನು ಸ್ವಯಂವರದಲ್ಲಿ ಗೆಲ್ಲುತ್ತಾನೆ. ಜನಕನು ನನ್ನ ಮಗಳನ್ನು ನಿನಗೆ ಕೊಟ್ಟು ಧಾರೆಯುತ್ತೇನೆ ಎಂದಾಗ ರಾಮನು 'ನಮ್ಮ ತಂದೆಯನ್ನು ಕೇಳಬೇಕು' ಎನ್ನುತ್ತಾನೆ. ಇಲ್ಲಿ ಕೆಲವು ಪ್ರಶ್ನೆಗಳು ನಮಗೆ ಕಾಡಿಸುತ್ತವೆ. ಸ್ವಯಂವರಕ್ಕೆ ಬರುವಾಗ ರಾಜನ ಮಗನಾದ ರಾಮ ಸ್ವಯಂವರದ ಪದ್ಧತಿಗಳ ಬಗ್ಗೆ ವಿಧಿ-ವಿಧಾನಗಳ ಬಗ್ಗೆ ತಿಳಿಯದೇ ಬರುತ್ತಾನೆಯೆ? ಮೂಲ ಕತೆಯಲ್ಲಿ ತಂದೆಯನ್ನು ಕೇಳಬೇಕೆಂದು ಕಂಡು ಬರುವುದಿಲ್ಲ. ರಾಮನು ತಂದೆಯ ಮಾತನ್ನು ಕೇಳುವಲ್ಲಿ ಪಿತೃಪ್ರಧಾನ ವ್ಯವಸ್ಥೆಯ ಕೌಟುಂಬಿಕ ನಿಯಮ ಹೀಗಿದ್ದವು ಎಂಬುದು ಕಂಡು ಬರುತ್ತದೆ. ಇಲ್ಲಿ ತಾಯಿ ಸ್ಥಾನ ಗೌಣವಾಗುತ್ತದೆ. ಮಕ್ಕಳ ಕಲ್ಯಾಣಕ್ಕೆ ತಂದೆ - ತಾಯಿಗಳಿಬ್ಬರು ಸಮಾನ ಹಕ್ಕುಳ್ಳವರೆಂಬುದನ್ನು ಕಾದಂಬರಿ ಸೂಕ್ಷ್ಮವಾಗಿ ವಿವರಿಸುತ್ತದೆ.

ಜನಕ ಮಹಾರಾಜನು ಸೀತೆಯನ್ನು ರಾಮನಿಗೂ, ಉಳಿದ ಮೂವರು ಹೆಣ್ಣು ಮಕ್ಕಳನ್ನು ದಶರಥನ ಇತರ ಮಕ್ಕಳಿಗೂ ವಿವಾಹ ಮಾಡಿಕೊಡುತ್ತಾನೆ. ಇವರೆಲ್ಲರೂ ರಾಮನ ಜೊತೆಯಲ್ಲಿಯೇ ಅಯೋಧ್ಯೆಗೆ ಹೋಗುತ್ತಾರೆ. ಅರಮನೆಯ ಅವಾಂತರಗಳ ಹಿನ್ನೆಲೆಯಲ್ಲಿ ರಾಮ ಹದಿನಾಲ್ಕು ವರ್ಷ

ವನವಾಸಕ್ಕೆ ಹೋಗುವನು. ಕೈಕೆಗೆ ತಂದೆಯು ಕೊಟ್ಟ ಮಾತನ್ನು ರಾಮನು ನೆರವೇರಿಸುವುದಕ್ಕೆ ಮುಂದಾಗುತ್ತಾನೆ. ಸೀತೆಗೆ ರಾಮನು ವನವಾಸ ವಿಷಯ ಹೇಳಲಾಗಿ ಅವಳು ತನ್ನ ಗಂಡನಿಗೆ ರಾಜ್ಯ ದೊರಕದಿದ್ದಕ್ಕೆ ಬೇಸರವಿಲ್ಲ. ಆದರೆ ತಾನು ರಾಮನ ಹಿಂದೆ ವನವಾಸಕ್ಕೆ ಬರುವುದಾಗಿ ಹೇಳುತ್ತಾಳೆ. ರಾಮನು ನೀನು ಬರುವುದು ಬೇಡ ಅರಮನೆಯಲ್ಲಿ ಅತ್ತೆ, ಮಾವನವರ ಸೇವೆ ಮಾಡು. ಅರಮನೆಯ ಸುಖವು ವನವಾಸದಲ್ಲಿ ಇರಲಾರದು. ಅಲ್ಲಿ ಕಲ್ಲು ಮುಳ್ಳುಗಳಿವೆ, ಕಾಡು ಮೃಗಗಳಿವೆ, ತಿನ್ನಲು ಗೆಡ್ಡೆ-ಗೆಣಸುಗಳು ಎಂದು ಹೇಳಿದಾಗ ಸೀತೆಯು ಪ್ರತಿಯಾಗಿ,

> "ನೀ ನಿಲ್ಲದ ಅರಮನೆಯಲ್ಲಿ ನನಗೆ ಸುಖವೆ"?
> "ನೀನು ನನ್ನೊಂದಿಗಿರುವಾಗ ಕಲ್ಲು ಮುಳ್ಳುಗಳಿಗೆ ಹೆದರುವನೆ"?
> "ಸೀತೇ ನಿನರಿಯೆ, ಅಲ್ಲಿ ದುಷ್ಟ ಮೃಗಗಳಿರುತ್ತವೆ".
> "ನೀನಿಲ್ಲದ ಅರಮನೆಗಿಂತಲೂ ದುಷ್ಟ ಮೃಗಗಳಿಂದ ಕೂಡಿದ ಕಾಡೇ ನನಗೆ ಸುಖಕರ.
> ಸೀತೇ ಸುಮ್ಮನಿರು, ನಿನಗೆ ತಿಳಿಯದು ವನವಾಸವೆಂದರೆ
> ಬ್ರಹ್ಮಚರ್ಯ ಈಗಿರುವುದಿನ್ನೇನು?" (ಅದೇ; ಪು. ೫೨)

ಎನ್ನುವ ಸೀತೆಯ ಮಾತಿನಲ್ಲಿ ವ್ಯವಸ್ಥೆಯ ಹಿತಗಳು ಹೇಗೆ ಉಳಿದುಕೊಂಡಿವೆ ಎಂಬುದನ್ನು ಕಾದಂಬರಿಯು ಸ್ಪಷ್ಟಪಡಿಸುತ್ತದೆ. ರಾಮನು ವನವಾಸಕ್ಕೆ ಅಸಮ್ಮತಿಸಿದಾಗ ಸೀತೆ ಈ ರೀತಿ ಹೇಳುತ್ತಾಳೆ. 'ನನ್ನ ತಂದೆಗೆ ನೀನು ಗಂಡು ವೇಷ ಹಾಕಿರುವ, ಹೆಣ್ಣು ಎಂದು ತಿಳಿಯದೇ ನಿನಗೆ ನನ್ನನ್ನು ಕೊಟ್ಟು, ತಾನು ಮೋಸ ಹೋದ ನನಗೂ ಮೋಸ ಮಾಡಿದ' ಎನ್ನುವಲ್ಲಿ ಎಚ್ಚೆತ್ತ ಸ್ತ್ರೀಯ ಪ್ರತಿರೋಧವಿದೆ. ಹೆಣ್ಣನ್ನು ಶೋಷಿಸುವ ಗಂಡನ ಮನೋಧರ್ಮಕ್ಕೆ, ಲೇಖಕಿ ಪ್ರತಿಭಟನೆ ಒಡ್ಡುತ್ತಾಳೆ. ಮೂಲಕತೆಯಲ್ಲಿ ರಾಮನು ವನವಾಸಕ್ಕೆ ಬರುವುದನ್ನು ಅಸಮ್ಮತಿಸಿದಾಗ ಸೀತೆ ಹೇಗೆ ಹೇಳುತ್ತಾಳೆ; 'ನಮ್ಮ ತಂದೆ ನನ್ನನ್ನು ನಿನಗೆ ವೀರನೆಂದು ಭಾವಿಸಿ ವಿವಾಹ ಮಾಡಿಕೊಟ್ಟರು'. ಆದರೆ ಈಗ ಆ ಭಾವನೆಯು ಕೇವಲ ನನ್ನ ಕಲ್ಪನೆಯೆಂದು ಕಾಣುತ್ತದೆ. ಹೀಗೆ ಮೂಲ ಕಥೆಯಲ್ಲಿನ ಸೀತೆಯ ಪಾತ್ರಕ್ಕೂ ಕಾದಂಬರಿಯಲ್ಲಿನ ಸೀತೆಯ ಪಾತ್ರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕಾದಂಬರಿಯಲ್ಲಿನ ಸೀತೆಯ ಪಾತ್ರದಲ್ಲಿ ಪುರುಷ ಶೋಷಣೆಯ ವಿರುದ್ಧ ಧ್ವನಿಯತ್ತ ಬೇಕೆನ್ನುವ ಲೇಖಕಿಯ ವಿಚಾರವೂ ತುಂಬಿಕೊಂಡಂತೆಯಿವೆ. ಸೀತೆಯು ರಾಮ, ಲಕ್ಷ್ಮಣರೊಂದಿಗೆ ವನವಾಸಕ್ಕೆ ಹೋದ ಮೇಲೆ ಒಂದು ದಿನ ಭರತ ಶತ್ರುಘ್ನರು ಇವರನ್ನು ನೋಡಲು ಹೋಗುತ್ತಾರೆ. ಸೀತೆಯನ್ನು ಕುರಿತು ಭರತ "ಅತ್ತಿಗೇ ಚಿಂತಿಸದಿರಿ. ನಿಮಗೆ ಏನು ಒದಗಿದೆಯೋ ನಿಮ್ಮ ತಂಗಿಯರಿಗೂ, ಅದೇ ಪರಿಸ್ಥಿತಿ ಒದಗಿದೆ". ಎಂದ ಭರತ ಮಾತಿನ ಹಿನ್ನೆಲೆಯಲ್ಲಿ ಸೀತೆ, "ನನ್ನಿಂದಾಗಿ ನನ್ನ ತಂಗಿಯರಿಗೂ ದುರ್ಗತಿ ಒದಗಿತೆ? ಛೇ,, ನನ್ನ ತಂದೆಗೆ ನಾನು ನೇಗಿಲ ಕುಳದಲ್ಲಿ ದೊರೆಯದೇ ಇದ್ದರೆ ಚೆನ್ನಾಗಿತ್ತು. ಆಗ ರಾಜಕುಮಾರಿಯರು, ಯೋಗ್ಯರಾದವರನ್ನು ವರಿಸಿ ರಾಜ ವೈಭವಗಳಲ್ಲಿ ಮೆರೆಯಬಹುದಿತ್ತು" (ಅದೇ.; ಪು. ೭೨). ಹೀಗೆ ಲೇಖಕಿ ವನವಾಸದಲ್ಲಿದ್ದ ಸೀತೆಯ ಮನಸ್ಸನ್ನು ವಿವರಿಸುತ್ತಾಳೆ.

ಒಂದು ಹೆಣ್ಣು ತಾನು ಅನುಭವಿಸಿದ ನೋವುಗಳು ಇನ್ನೊಂದು ಹೆಣ್ಣಿನ ಮನಸ್ಸುಗಳ ನೋವಿಗೆ ಕಾರಣವಾದವಲ್ಲ. ಹೆಣ್ಣಿನ ಅಸಹಾಯಕತೆಯನ್ನು ಸೀತೆಯ ಪಾತ್ರದ ಮೂಲಕ ಕಾಣಬಹುದು. ಸೀತೆಗೆ

ಮೂಲ ಕಥೆಯಲ್ಲಿ ಈ ಆಲೋಚನೆಗಳು ಕಂಡು ಬರುವುದಿಲ್ಲ. ಹೀಗೆ ಮೂಲ ಕಥೆಗಿಂತ ಭಿನ್ನವಾಗಿ ಕಾದಂಬರಿಯಲ್ಲಿ ಸೀತೆ ನಿರೂಪಿತಳಾಗಿದ್ದಾಳೆ.

ಸೀತೆ ರಾಮನೊಂದಿಗೆ ವನವಾಸಕ್ಕೆ ಹೋದಾಗ ಅವರ ಜೊತೆಗೆ ಲಕ್ಷ್ಮಣನು ಇರುತ್ತಾನೆ. ಅವನನ್ನು ಕುರಿತು ಸೀತೆಯು ಹೀಗೆ ಕೇಳುತ್ತಾಳೆ. ಲಕ್ಷ್ಮಣ ನೀನು ಕಾಡಿಗೆ ಬರುವಾಗ 'ಊರ್ಮಿಳೆಗೆ ಏನು ಹೇಳಿ ಬಂದೆ' ಎನ್ನುವಲ್ಲಿ ತನ್ನ ಪತಿಯನ್ನು ಬಿಟ್ಟಿರಲಾರದೇ ಆತನ ಜೊತೆಗೆ ಕಾಡಿಗೆ ಬಂದ ಸೀತೆಯೂ ಲಕ್ಷ್ಮಣನನು ಜೊತೆಗಿಲ್ಲದ ಊರ್ಮಿಳೆಯ ಸ್ಥಿತಿಯ ಬಗೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸುವ ಭಾವವಿದೆ. ತನ್ನ ಹಾಗೆಯೇ ಊರ್ಮಿಳೆಯು ಒಬ್ಬ ಹೆಣ್ಣಾಗಿರುವುದರಿಂದ ಆಕೆಯ ಮನಸ್ಥಿತಿಯನ್ನು ಅರ್ಥಮಾಡಿಕೊಂಡ ಸೀತೆಯು ಹೀಗೆ ಹೇಳುತ್ತಾಳೆ. ವಿರಹವು ಅರಮನೆಯ ಸುಖವನ್ನು ಶೂನ್ಯವಾಗಿಸುತ್ತದೆ ಎಂಬ ಹಠದಿಂದ ಸೀತೆಯು ರಾಮನ ಹಿಂದೆ ಬರುವಲ್ಲಿ ಪ್ರಬಲವಾದ ಪ್ರತಿಭಟನೆಯ ಧೋರಣೆಯಿದೆ. ಕಾಮವು ಮನುಷ್ಯನಿಗೆ ಅತ್ಯಗತ್ಯವಾಗಿದೆ. ಸೀತೆ ಇಂತಹ ಸನ್ನಿವೇಶದಲ್ಲಿ ರಾಮನಿಂದ ದೂರವಿರುವುದನ್ನು ಕಾದಂಬರಿ ದೃಷ್ಟಾಂತದ ಮೂಲಕ ವಿವರಿಸುತ್ತದೆ. ಸೀತೆ ಲಕ್ಷ್ಮಣನಿಗೆ ಹೀಗೆ ಹೇಳುತ್ತಾಳೆ. "ನೋಡು ಲಕ್ಷ್ಮಣ ನಡೆದುದೇನೆಂದರೆ ನಿನ್ನೆ ನೀನು ಸೌದೆ ತರಲು ಹೋಗಿದ್ದೆ ನಿಮ್ಮಣ್ಣ ಏಕಾಂತ ಸಿಕ್ಕಿದೆಯೆಂದು ನನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿದ. ಒಂದು ಕಾಗೆ ಸರ್ರನೇ ಬಂದು ನನ್ನೆದೆಯನ್ನು ಕುಕ್ಕಿ ಕುಕ್ಕಿ ನೋಯಿಸುತ್ತಿತ್ತು. ನಾನು ವೇದನೆಯಿಂದ ನರಳಿದರೆ ಅವನು ನನ್ನನ್ನು ಅಪಹಾಸ್ಯ ಮಾಡುತ್ತಾ ನಗುತ್ತಿದ್ದ. "ಸುಕುಮಾರಿ, ರಾಜಕುಮಾರಿ, ಇಷ್ಟು ನೋವನ್ನೂ ತಡೆಯಲಾರೆಯಾ ಎಂದು ಕೊನೆಗೆ ನೀನು ಬರುವ ಹೆಜ್ಜೆ ಸದ್ದು ಕೇಳಿ ತಟಕ್ಕನೆದ್ದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೆಂಬಂತೆ ಆ ಕಾಗೆಯನ್ನು ಬಾಣ ಬಿಟ್ಟು ಕೊಂದ" (ಅದೇ.; ಪು. ೭೩). ಕಾದಂಬರಿಯಲ್ಲಿನ ಈ ದೃಷ್ಟಾಂತವನ್ನು ವಿಶ್ಲೇಷಿಸಿದಾಗ ಏಕಾಂತದಲ್ಲಿ ಸೀತೆ ಇರುವಾಗ ರಾಮನು ಅವಳ ತೊಡೆಯ ಮೇಲೆ ಮಲಗಲು ಸೀತೆಯ ಎದೆಯನ್ನು ಕಾಗೆ ಕುಕ್ಕುವುದು ಕಾಮವಾಗಿದೆ. ಅದರ ವೇದನೆಯನ್ನು ತಾಳಿಕೊಳ್ಳಲಾರದ ಸೀತೆ ನರಳುತ್ತಾಳೆ. ಇದನ್ನು ಕಂಡು ರಾಮನು ಅಪಹಾಸ್ಯದಿಂದ ನಗುತ್ತಾನೆಯೇ ಹೊರತು ಸೀತೆಯ ಮನಸ್ಸನ್ನು ಗ್ರಹಿಸುವುದಿಲ್ಲ.

ಕಾಡಿನಲ್ಲಿದ್ದ ಸೀತೆಯನ್ನು ರಾವಣನನು ಅಪಹರಿಸುತ್ತಾನೆ. ಅವಳನ್ನು ಅಶೋಕ ವನದಲ್ಲಿ ಇಡುತ್ತಾನೆ. ಹೆಣ್ಣನ್ನು ಅಪಹರಿಸುವುದು, ಶೋಷಿಸುವುದು, ಹಿಂಸಿಸುವುದನ್ನು, ಸ್ತ್ರೀವಾದವು ವಿರೋಧಿಸುತ್ತದೆ. ಶೋಷಣೆಯನ್ನು ಖಂಡಿಸುವುದರ ಮೂಲಕ ಹೆಣ್ಣಿಗೆ ಸ್ವತಂತ್ರ ವ್ಯಕ್ತಿತ್ವವನ್ನು ಕಂಡುಕೊಳ್ಳುವುದು ಅವರ ಧೋರಣೆಯಾಗಿದೆ. ಸೀತೆಯನ್ನು ಅಪಹರಿಸಿದ ರಾವಣನನ್ನು ಕುರಿತು ವಿಭೀಷಣನಾಡುವ ಮಾತುಗಳಲ್ಲಿಯೂ ಸ್ತ್ರೀವಾದದ ಛಾಯೆಯನ್ನು ಗುರುತಿಸಬಹುದಾಗಿದೆ. "ನಮ್ಮ ಅಣ್ಣನಿಗೆ ಮೊದಲಿನಿಂದಲೂ ನಾನೆಂದರೆ ಅಷ್ಟಕ್ಕಷ್ಟೇ ಆದರೂ ನನ್ನ ಕರ್ತವ್ಯ ಎಂದು ಹೇಳುತ್ತಿರುವೆ. ಪರಸ್ತ್ರೀ ಗಮನ ಘನಘೋರ ಪಾಪ. ಅದರಲ್ಲೂ ಗಂಡನಿಂದ ಅಗಲಿಸಿ ತಂದ ಹೆಣ್ಣಿನ ಪಾಪ ಮಹಾನರಕವನ್ನೇ ತರುತ್ತದೆ (ಅದೇ; ಪು. ೮೧). ಪ್ರಸ್ತುತವಾದ ಘಟನೆಗಳಿಗೆ ಪೂರಕವಾಗಿ ಈ ಸಮಾಜದಲ್ಲಿರುವ ಹೆಣ್ಣನ್ನು ಅಪಹರಿಸಿ

ಬಲತ್ಕರಿಸಿ ಕತ್ತುಕೊಯ್ಯುವ ಪಾಪಿಗಳು ಇರುವುದನ್ನು ಸೀತಾ ಪಾತ್ರದ ಮೂಲಕ ಕಾದಂಬರಿ ಸ್ಪಷ್ಟಪಡಿಸುತ್ತದೆ. ಮೂಲ ಕಥೆಯಲ್ಲಿ ರಾಮ ಲಕ್ಷ್ಮಣರು ಜಿಂಕೆಯನ್ನು ಬೇಟೆಯಾಡಲು ಹೋದಾಗ ಈ ರಾವಣ ಸೀತೆಯನ್ನು ಅಪಹರಿಸುತ್ತಾನೆ. ಇಂತಹ ಅಮಾನವೀಯ ಕೃತ್ಯವನ್ನು ಎಸಗಿದ ರಾವಣನನ್ನು ಸೀತೆ ಶಪಿಸುತ್ತಾಳೆ. ಅಷ್ಟೇ ಅಲ್ಲದೆ ಅವಳನ್ನು ದಿನಾಲು ವಿವಿಧ ವೇಷಗಳಲ್ಲಿ ಬಂದು ಕಾಮಾತುರನಾಗಿ ನೋಡುತ್ತಾನೆ. "ಎಲ್ಲವೋ ಪಾಪಿ ಪರಮಪಾತಕಿ ಗಂಡನಿಲ್ಲದ ವೇಳೆ ನನ್ನನ್ನು ಕದ್ದೊಯ್ದು ತಂದು ಕಾಮಿಸುತ್ತಿರುವ ನೀಚನೆ, ಶ್ರೀ ರಾಮಚಂದ್ರನೆಂದರೆ ಯಾರೆಂದು ತಿಳಿದೆ? ಅಂದು ವಿಶ್ವಮಿತ್ರರೊಂದಿಗೆ ಹೋಗಿ ನಿನ್ನ ತಂಗಿಯಾದ ತಾಟಕೆಯನ್ನು ಅವಳ ಮಗನಾದ ಸುಬಾಹುವನ್ನು ಸಂಹರಿಸಿದವನು. ಅವನು ತನ್ನ ಹೆಂಡತಿಯನ್ನೇ ಕದ್ದೊಯ್ದ ನಿನ್ನಂತಹ ನೀಚನನ್ನು ಕೊಲ್ಲದಿರುವನೇ, ಇನ್ನೂ ಕೆಲವೇ ದಿನಗಳಲ್ಲಿ ನೀನು ನಾಶವಾಗುವೆ" (ಅದೇ; ಪು. ೯೧) ಎನ್ನುತ್ತಾಳೆ. ಸೀತೆ ಹೀಗೆ ಹೇಳುವಾಗ ರಾವಣನನ್ನು ಕತ್ತೆತ್ತಿಯೂ ನೋಡದೇ ಹುಲ್ಲುಗರಿಯನ್ನಿಟ್ಟು ಅದರೊಂದಿಗೆ ಮಾತನಾಡುತ್ತಾಳೆ. ಇದರಿಂದ ಕೋಪಗೊಂಡ ರಾವಣ. ಇನ್ನೂ ಕೆಲವೇ ದಿನಗಳಲ್ಲಿ ನೀನು ನನಗೆ ಒಲಿಯದಿದ್ದರೆ, ಮಾರನೇ ದಿನವೇ ನಿನ್ನ ಸುಂದರವಾದ ಅಂಗಾಂಗಗಳು ನನ್ನ ಬೆಳಗಿನ ಫಲಹಾರಕ್ಕೆ ಒದಗುತ್ತವೆ. ಗೋತ್ತಾಯಿತ್ತೇ ಎಂದು ಹೇಳಿ ಹೊರಟು ಬಿಡುತ್ತಾನೆ. ಹೆಣ್ಣನನ್ನು ಇಂದಿಗೂ ಸಹ ಆ ರೀತಿಯಲ್ಲಿ ನಡೆಸಿಕೊಳ್ಳುವ ವ್ಯವಸ್ಥೆಯ ಬಗ್ಗೆ ತಿರಸ್ಕಾರದ ಮನೋಭಾವನೆಯಿದೆ. ಇಂದು ಸ್ತ್ರೀಯರಿಗೆಂದು ಕಾನೂನುಗಳು, ಮಹಿಳಾ ಚಳುವಳಿಗಳು, ಮಹಿಳಾ ಸಂಘಟನೆಗಳು ಇದ್ದರೂ ಸಹ ರಾವಣನಂತೆ ಅಟ್ಟಹಾಸದಿಂದ ಮರೆಯುವ ವ್ಯಕ್ತಿಗಳು ಇರುವುದನ್ನು ಕಾಣಬಹುದಾಗಿದೆ.

ಕಾದಂಬರಿಯ ಸೀತೆಯು ಯುದ್ಧದಿಂದ ಸಂಭವಿಸಬಹುದಾದ ವಿವಿಧ ಸಮಸ್ಯೆಯನ್ನು ಆಧುನಿಕವಾಗಿ ಚಿಂತಿಸುತ್ತಾಳೆ. ಇಂತಹ ಆಲೋಚನೆ ಮೂಲ ಕಥೆಯಲ್ಲಿ ಕಂಡು ಬರುವುದಿಲ್ಲ. ಈ ರೀತಿಯ ಒಳನೋಟಗಳಲ್ಲಿ ಕಾದಂಬರಿ ವಾಸ್ತವಿಕ ಸಮಸ್ಯೆಗಳಿಗೆ ಮುಖಾಮುಖಿಯಾಗಿ ನಿಂತು ಸಮಕಾಲೀನ ಸ್ತ್ರೀಯರ ಸಮಸ್ಯೆಯನ್ನೆತ್ತಿಕೊಂಡು ಚರ್ಚಿಸುತ್ತದೆ. ಸೀತೆ ರಾವಣನ ವಶದಲ್ಲಿದ್ದು ರಾಮನು ಯುದ್ಧ ಮಾಡುವ ಸೂಚನೆಗಳನ್ನು ತಿಳಿಸುತ್ತಾನೆ. ರಾಮನು ಯುದ್ಧ ಮಾಡಿದರೆ ರಾವಣ ಸಾಯುತ್ತಾನೆ. ಇದರಿಂದ ಮಂಡೋದರಿ ವಿಧವೆಯಾಗುತ್ತಾಳೆ. ಇಲ್ಲವೇ ರಾಮ ಸತ್ತರೆ ನಾನು ವಿಧವೆಯಾಗುತ್ತೇನೆ. ಇದರಿಂದ ಸ್ತ್ರೀಯರಿಗೆ ಬಾಧಕವಾಗುತ್ತದೆ. ಆದ್ದರಿಂದ ಯಾರು ಸಾಯಬಾರದು, ರಾಮನು ರಾವಣನನ್ನು ಸೆರೆ ಹಿಡಿಯಬೇಕು. ನಾನೇ, ಅವನನ್ನು ಮಂಡೋದರಿಗೆ ಒಪ್ಪಿಸುತ್ತೇನೆ ಎನ್ನುವಲ್ಲಿ ಲೇಖಕಿ ಮೂಲ ಕಥೆಯನ್ನು ಆಧುನಿಕವಾಗಿ ಚಿತ್ರಿಸುವುದರಿಂದ, ಸೀತೆಯ ಪಾತ್ರವನ್ನು ಮಾನವೀಯ ನೆಲೆಯಲ್ಲಿ ಕಂಡುಕೊಳ್ಳುತ್ತಾರೆ. ಹೆಣ್ಣನ್ನು ಅಪಹರಿಸಿದವನು ನಾಶವಾಗುವುದನ್ನು ಇಲ್ಲಿ ರಾವಣ ಸಾವಿನೊಂದಿಗೆ, ಸಮೀಕರಿಸಿ ಇಂದಿನ ಪುರುಷ ಸತ್ತೆಯನ್ನು ಕುರಿತು ಕಾದಂಬರಿ ವಿವರಿಸುತ್ತದೆ.

ರಾಮಾಯಣದ ಆದರ್ಶ ಪುರುಷನಾದ ಏಕಪತ್ನಿ ವ್ರತಸ್ಥನೆಂದು ಪ್ರಸಿದ್ಧಿಯಾದ ರಾಮನು ಅಯೋಧ್ಯೆಯಲ್ಲಿ ಯಾಗ ಮಾಡುತ್ತಾನೆ. ತನ್ನ ಪತ್ನಿಯಾದವಳ ಚಾರಿತ್ರ್ಯವನ್ನು ಅಪನಂಬಿಕೆಯಿಂದ

ನೋಡಿ, ಜನ ಅಪವಾದಕ್ಕೆ ಅಂಜಿ ಸೀತೆಯನ್ನು ಕಾಡಿಗೆ ಕಳುಹಿಸುತ್ತಾನೆ. ಇಂಥಹ ಅಯೋಧ್ಯೆಯ ರಾಮನು ತನ್ನ ಪತ್ನಿಯನ್ನು ಅಪನಂಬಿಕೆಯಿಂದ ಕಾಡಿಗೆ ನೂಕಿದರೆ, ಇನ್ನೂ ಸಾಮಾನ್ಯ ಜನರು ಬಿಟ್ಟಾರೆಯೇ? ಇವುಗಳನ್ನು ಹುಟ್ಟುಹಾಕಿದ ಪುರುಷ ಪ್ರಧಾನ ವ್ಯವಸ್ಥೆಯು ಇಂದು ದೊಡ್ಡ ಭೂತವಾಗಿ ಬೆಳೆದು ನಿಂತಿದೆ. ಇವುಗಳ ವಿರುದ್ಧ ಮಹಿಳೆಯರು ಜಾಗ್ರತರಾಗಬೇಕು ಎನ್ನುವುದು ಕಾದಂಬರಿಯ ಆಶಯವಾಗಿದೆ. ರಾಮನು ತನ್ನ ಅರಮನೆಯಿಂದ ಸೀತೆಯನ್ನು ಕಾಡಿಗೆ ಕಳುಹಿಸಿ ಅಶ್ವಮೇಧಯಾಗವನ್ನು ಮಾಡುತ್ತಾನೆ. ತನ್ನ ಹೆಂಡತಿಯ ಬದಲಿಗೆ ಚಿನ್ನದ ಬೊಂಬೆಯನ್ನು ಮಾಡಿಸುತ್ತಾನೆ. ಜೀವಂತವಿರುವ ವ್ಯಕ್ತಿಗೆ ಬೆಲೆ ಕೊಡದೇ ನಿರ್ಜೀವಯಿರುವ ವಸ್ತುವಿಗೆ ಬೆಲೆ ಸಿಗುವುದನ್ನು ಕಾಣಬಹುದು. ಯಾಗ ಮಾಡಲು ತನ್ನ ಹೆಂಡತಿಯನ್ನು ಹುಡುಕುವುದು ರಾಮನಿಗೆ ಕಷ್ಟವಾಗುತ್ತಿತ್ತೆ. ಹೆಂಡತಿಯು ಹೇಗಿದ್ದಾಳೆ ಅವಳು ಗರ್ಭಿಣಿಯಾಗಿದ್ದಳು. ಹೆರಿಗೆಯಾಯಿತೆ, ಮಗು ಎಂಥದು, ಸತ್ತಿದೆಯೋ ಬದುಕಿದೆಯೋ ಎಂಬುದನ್ನು ತಿಳಿಯಲಾರದ ನಿರ್ಲಕ್ಷತನದವ. ಅವನು ಹೋಗಲಿ ಲಕ್ಷ್ಮಣನಾದರೂ ಹುಡುಕಿಕೊಂಡು ಬರಬಹುದಿತ್ತಲ್ಲ. ರಾಮನಿಗೆ ತನ್ನ ವಂಶದ ಕುಡಿಯನ್ನಾದರೂ ನೋಡುವ ಆಸೆಯಿಲ್ಲವೇ, ಅವನೆಂತಹ ಗಂಡ ಷಂಡ! ಎಂದು ನಿಂದಿಸುತ್ತಾಳೆ. ಮೂಲ ಕಥೆಯಲ್ಲಿ ಈ ರೀತಿ ಇರದ ರಾಮನ ವ್ಯಕ್ತಿತ್ವವನ್ನು ಇಲ್ಲಿ ಸೀತೆ ಪ್ರಜ್ಞಾಪೂರ್ವಕವಾಗಿ ಖಂಡಿಸುತ್ತಾಳೆ. ಪುರಾಣ ಸ್ತ್ರೀಯು ಅಂದು ಎಲ್ಲವನ್ನು ಸಹಿಸಿಕೊಂಡ ಆದರ್ಶನಾರಿಯಾದರೆ ಇಂದು ಪ್ರಶ್ನಿಸುವ ಮಹಿಳೆಯಾಗಿ ಕಾದಂಬರಿಯಲ್ಲಿ ಚಿತ್ರಿತಗೊಂಡಿದ್ದಾಳೆ. ಸ್ನೇಹ ಶೀಲೆಯೂ ಕೋಮಲೆಯೂ ಪ್ರೇಮಮಯಿಯೂ ಆದ ಸೀತೆ ಗಂಡ, ಮಾಡಿದ್ದೆಲ್ಲವನ್ನೂ ಕಣ್ಮುಚ್ಚಿ ಒಪ್ಪುವ ಮುಗ್ಧೆಯಲ್ಲ. ಅವನ ನಡೆಯನ್ನು ನುಡಿಯನ್ನು ಉಜ್ಜಿ ಪರೀಕ್ಷಿಸುವ ಸಾತ್ವಿಕ ಧೈರ್ಯವೂ ನೈತಿಕ ನಿಲುವೂ ಅವಳಿಂದ ಇಲ್ಲಿ ವ್ಯಕ್ತಗೊಂಡಿದೆ.

ಸೀತೆಯು ರಾಮನ ಸ್ವಾರ್ಥಕ್ಕಾಗಿ ಅಪಹರಣಕ್ಕೊಳಗಾಗಿ ರಾಮನಿಂದ ತನ್ನ ಪರಿಶುದ್ಧತೆಯ ಪರೀಕ್ಷೆಗೆ ಒಳಗಾಗುತ್ತಾಳೆ. ಅಗಸನ ಮಾತನ್ನು ಕೇಳಿದ ರಾಮನು ತನ್ನ ಹೆಂಡತಿಯನ್ನು ಕಾಡಿಗೆ ಕಳುಹಿಸುತ್ತಾನೆ. ಗರ್ಭಿಣಿಯಾದ ಸೀತೆ ಲವ-ಕುಶರೆಂಬ ಮಕ್ಕಳಿಗೆ ವಾಲ್ಮೀಕಿ ಆಶ್ರಮದಲ್ಲಿ ಜನ್ಮ ನೀಡುತ್ತಾಳೆ. ಮಕ್ಕಳು ದೊಡ್ಡವರಾಗಿ ರಾಮನ ವಿರುದ್ಧ ಯುದ್ಧ ಮಾಡಿ ಜಯಗಳಿಸುತ್ತಾರೆ. ವಾಲ್ಮೀಕಿಯರ ಪ್ರಯತ್ನದಿಂದ ಅರಮನೆಗೆ ಹೋಗುವಲ್ಲಿ ಸೀತೆ ಅವನ ಸ್ವಾಭಾವದ ಬಗ್ಗೆ ಪೂರ್ವನಿರ್ಧಾರ ತಾಳುತ್ತಾಳೆ. "ರಾಮನು ಮತ್ತೆ ನನ್ನನ್ನು ಪರೀಕ್ಷೆಗೆ ಒಳಪಡಿಸಿದರೆ ಬೆಂಕಿಗೆ ಬೀಳಲು ನಾನು ಹಿಂದು ಮುಂದು ನೋಡುವುದಿಲ್ಲ. ಆದರೆ ಹೀಗೆ ಮತ್ತೆ ಮತ್ತೆ ನನ್ನ ಪರಿಶುದ್ಧತೆಯನ್ನು ನಾನು ಸ್ಥಿರೀಕರಿಸಬೇಕಾದ ಈ ಅನಿವಾರ್ಯ ಪರಿಸ್ಥಿಯನ್ನು ನಾನು ಪ್ರಶ್ನೆಸುತ್ತೇನೆ ಮತ್ತು ತನ್ನ ಪರಿಶುದ್ಧತೆಯನ್ನು ಅವನು ನನ್ನ ಗಂಡ, ಸ್ಥಾಪಿಸಬೇಕಾಗಿಲ್ಲದಿರುವ ಸಾಮಾಜಿಕ ಸಂದರ್ಭವನ್ನು ನಾನು ಪ್ರಶ್ನೆಸುತ್ತೇನೆ" (ಅದೇ; ಪು. ೧೩೪). ಮೂಲದಲ್ಲಿ ಇಲ್ಲದ ಪ್ರಸಂಗವನ್ನು ಕಾದಂಬರಿ ಎತ್ತಿಕೊಳ್ಳುತ್ತದೆ. ಸಮಾಜದಲ್ಲಿ ನಡೆಯುವ ಇಂತಹ ಘಟನೆಗಳು ಹೆಣ್ಣಿನ ಆತ್ಮಹತ್ಯೆಗೆ ದಾರಿ ಮಾಡಿಕೊಟ್ಟಿದೆ. ಈ ರೀತಿಯ ಪುರುಷನ ತಾರತಮ್ಯ ಭಾವನೆಯನ್ನು ಕಾದಂಬರಿಯು ಇಂದಿನ ಕಾಲಘಟ್ಟದ ವಸ್ತುಸ್ಥಿತಿಯೊಂದಿಗೆ ಸಮೀಕರಿಸಿಕೊಡುತ್ತದೆ. ಕೊನೆಯಲ್ಲಿ "ನನ್ನ

ಆತ್ಮ ಈ ಅರಮನೆಯ ಕಬ್ಬಿಣದ ಪಂಜರದಲ್ಲಿರ ಬಯಸುವುದಿಲ್ಲ. ನನಗಾಗಿ ನನ್ನ ತಾಯಿ ಕಾದಿದ್ದಾಳೆ" ಎಂದವಳೇ ಹಿಂದಿರುಗಿ ನೋಡದೇ ಸರಸರನೆ ನಡೆದು ರಾಜಸಭೆಯ ಹೊರಗೆ ಅಡಿಯಿಟ್ಟಳು. ಇಲ್ಲಿ ಬಹಳ ಸ್ಪಷ್ಟವಾಗಿ ಆಕೆಯ ವ್ಯಕ್ತಿತ್ವದಲ್ಲಿರುವ ಪ್ರತಿಭಟನೆಯ ಅಂಶಗಳನ್ನು ಗುರುತಿಸಬಹುದು.

ಸೀತೆಯ ಪಾತ್ರದಿಂದಾಗಿ ರಾಮಾಯಣದ ಹಿರಿಮೆ ಹೆಚ್ಚಿದೆ. ಆದಿಕವಿ ಅವಳನ್ನು ಪರಮ ಪತಿವ್ರತೆಯಾಗಿ ಚಿತ್ರಿಸುತ್ತಲೇ ಆಕೆಗೊಂದು ಸ್ವತಂತ್ರ ವ್ಯಕ್ತಿತ್ವವನ್ನು ನಿರ್ಮಿಸಿದ್ದಾನೆ. ರಾಮನನ್ನು ನೆರಳಿನಂತೆ ಅನುಸರಿಸುತ್ತಿದ್ದರೂ ಹಲವಾರು ಪ್ರಸಂಗಗಳಲ್ಲಿ ತನ್ನ ಬಿಚ್ಚು ಮನಸ್ಸಿನ ಮಾತುಗಳಿಂದ ಆತನನ್ನು ಪ್ರಶ್ನಿಸುತ್ತಾ, ಎಚ್ಚರಿಸುತ್ತಾ ಇದ್ದ ಪ್ರಜ್ಞಾವಂತ ಪತ್ನಿಯಾಗಿದ್ದಾಳೆ. ಈ ರೀತಿಯ ಪ್ರಭಾವವೇ ಪ್ರಭಾವತಿಯವರ ಸೀತಾ ಕಾದಂಬರಿಯಲ್ಲೂ ಕಂಡು ಬರುತ್ತದೆ.

ಭಾರತೀಯ ನಾರಿಯರ ಸರ್ವಕಾಲದ ಆದರ್ಶ, ಭಾರತೀಯ ಸಂಸ್ಕೃತಿಯ ಅನನ್ಯ ಪ್ರತೀಕ ಸೀತಾದೇವಿ. ಮಹರ್ಷಿ ವಾಲ್ಮೀಕಿ ತನ್ನ ಅಮರ ಕೃತಿಯಲ್ಲಿ ಆಕೆಯನ್ನು ಸ್ತ್ರೀಲೋಕದ ಅನರ್ಘ್ಯ ಅನುಪಮ ಪ್ರತಿಮೆಯಾಗಿ ಮಾಡಿದ್ದಾನೆ. ಭಾರತೀಯ ಸ್ತ್ರೀಯರ ಜೀವನದ ಜೀವಂತ ಚಿರನೂತನ ಸಹಚಾರಿಯಾಗಿದ್ದಾಳೆ. ಆದ್ದರಿಂದ ಮೂಲದಲ್ಲಿಯೇ ಪರಮ ಸುಂದರವೂ ಪರಿಪೂರ್ಣ ವಿಕಸಿತ ಸತ್ವ ಸಂಪನ್ನವೂ ಆಗಿರುವ ಈ ಪಾತ್ರಕ್ಕೆ ಪ್ರಭಾವತಿಯವರು, ತಮ್ಮ ಕಾದಂಬರಿಯ ಮೂಲಕ ನೂತನ ಆಯಾಮವನ್ನು ತಂದು ಕೊಟ್ಟಿದ್ದಾರೆ.

ಪ್ರಭಾವತಿಯರ 'ಅಹಲ್ಯಾ' ಮತ್ತು 'ಸೀತಾ' ಕಾದಂಬರಿಗಳ ಕಥನಾಯಕಿ ಪಾತ್ರಗಳು ಅವರ ಸ್ತ್ರೀವಾದಿ ಚಿಂತನಧಾರೆಯ ಮೂಸೆಯಿಂದ ಹೊರತೆಗೆದ ಪಾತ್ರಗಳಾಗಿ ಗಮನ ಸೆಳೆಯುತ್ತವೆ. ರಾಮಾಯಣಕ್ಕೆ ಅನೇಕ ಲಿಖಿತ - ಮೌಖಿಕ ಪರಂಪರೆಗಳಿರುವುದು. ಜನಜನಿತವಾದ ಅಂಶವಾಗಿದೆ. ಲೇಖಕಿಯೂ ರಾಮಾಯಣದಲ್ಲಿ ಬರುವ ಬಹು ಮುಖ್ಯವಾದ 'ಸೀತಾ' ಪಾತ್ರವನ್ನು ಸ್ತ್ರೀವಾದಿ ನೆಲೆಯಲ್ಲಿ ಚಿತ್ರಿಸಿದ್ದಾರೆ. ಸಮಕಾಲೀನ ದಿಟ್ಟ ಸ್ವತಂತ್ರ ಹೆಣ್ಣಿನ ಕಲ್ಪನೆ ಭರಿಸುವಂತೆ ಮಾಡಿದ್ದಾರೆ. ಆದೇ ರೀತಿ ಸೀತೆ ಉದ್ದಕ್ಕೂ ಶೋಷಣೆಗೊಳಗಾದ ಸಂಬಂಧದಲ್ಲಿ ಅವಳ ಮಾನಸಿಕ ತುಮುಲ, ಹೊಯ್ದಾಟ, ಅಂತರಂಗ ಮಥನಗಳನ್ನು ಚಿತ್ರಿಸಲಾಗಿದೆ. ವೇದ ಮತ್ತು ಸ್ಮ ತಿಗಳ ಯುಗಗಳಲ್ಲಿನ ಸ್ತ್ರೀಯರ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುವ ಕೆಲವು ಉದ್ಧೃತಿಗಳನ್ನು ಲೇಖಕಿ ನೀಡಿದ್ದಾರೆ. ಶ್ವೇತಕೇತು, ಯಜ್ಞವಲ್ಕರು ಬರೆದ ಸ್ಮೃತಿಗಳಿಗಿಂತ ಭಿನ್ನವಾಗಿ ಮಹಿಳೆಯರಿಗೆ ಸಾಕಷ್ಟು ಸ್ವಾತಂತ್ರ್ಯ, ಸವಲತ್ತುಗಳನ್ನು ಕಲ್ಪಿಸುವಂತಹ ಶ್ಲೋಕಗಳು ಸ್ಮೃತಿಗಳೊಳಗೆ ಸೇರ್ಪಡೆಯಾಗುತ್ತವೆ. ಶಾಸ್ತ್ರಗಳು, ಸ್ಮೃತಿಗಳು, ಕಥಾ ಪರಂಪರೆಗಳು ಕಾಲದಿಂದ ಕಾಲಕ್ಕೆ ಬದಲಾಗಬೇಕಾದ ಅಗತ್ಯದ ಕಡೆಗೆ ಸೂಚನೆ ನೀಡಿದ್ದಾರೆ. 'ಸೀತಾ' ಕಾದಂಬರಿಯ ಮೂಲಕ ಪುರಾಣದಲ್ಲಿ 'ಮೌನ'ವಾಗಿ ಹುದುಗಿ ಹೋಗಿದ್ದ. ಸೀತೆಯ ವ್ಯಕ್ತಿತ್ವದ ಒಳಗನ್ನು ಹೊರಗೆಳೆಯುವುದು ಹಾಗೂ ಪುರಾಣದಲ್ಲಿ ನಿಜವಾಗಿಯೂ ಚಿತ್ರತವಾಗಿರುವ 'ಸೀತೆ'ಯ ಪಾತ್ರವನ್ನು ಮರುಸೃಷ್ಟಿಸಿರುವುದನ್ನು ಕಾಣಬಹುದು.

ಅಹಲ್ಯಾ ಕಾದಂಬರಿಯ ಮುನ್ನುಡಿಯಲ್ಲಿ ಮಲ್ಲಿಕಾಘಂಟಿಯವರು ಹೇಳಿರುವ ಮಾತು. ಇಲ್ಲಿ ಪ್ರಸ್ತುತವೆನ್ನುಸುತ್ತದೆ. "ಈಗ ಕಲ್ಲಾಗಿದ್ದ ಅಹಲ್ಯೆ ಪಾದರಸದವಳಾಗಿ ನಮ್ಮೆದುರಿಗಿದ್ದಾಳೆ. ಬಂಡೆಯಂಥ ಅಹಲ್ಯೆ ಮಾತನಾಡುತ್ತಾಳೆ; ನಮ್ಮೊಡನೆ, ನಮ್ಮಂಥವರೊಡನೆ, ಹೆಣ್ಣಿನ ಹೃದಯವಿರುವವರಲ್ಲೆಲ್ಲ ಸಂವಾದಕ್ಕೆ ಇಳಿಯುತ್ತಾಳೆ" (ಅದೇ; ಪು. III).

ಪ್ರಭಾವತಿಯವರು ಅಹಲ್ಯಾ ಪಾತ್ರದ ಮೂಲಕ ಆಧುನಿಕ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ವಿವರಿಸುತ್ತಾ, ಅವುಗಳನ್ನು ಹೇಗೆ ಮೆಟ್ಟಿ ನಿಲ್ಲಬೇಕು ಎಂಬ ವಿಚಾರವನ್ನು ಪ್ರತಿಪಾದಿಸುತ್ತಾರೆ. ಅಹಲ್ಯೆ ಚಿಕ್ಕನಿಂದಲೇ ಇಂತಹ ಸಮಸ್ಯೆಗಳನ್ನೆಲ್ಲಾ ದಿಟ್ಟತನದಿಂದ ಎದುರಿಸುತ್ತಾ, ಬದುಕನ್ನು ಕಳೆದವಳಾಗಿದ್ದಾಳೆ. ಬದುಕಿನ ಕೊನೆಯಗಳಿಗೆವರೆಗೂ ಕಣ್ಣೀರಿನಲ್ಲೇ ಕೈತೊಳೆದ ಈಕೆಯ ಮನಸ್ಸನ್ನು ಅರಿಯದ ಗೌತಮನು ಮೂಲ ಕೃತಿಯಲ್ಲಿ ಆಕೆಗೆ ಕಲ್ಲಾಗುವಂತೆ ಶಾಪ ಕೊಡುತ್ತಾನೆ. ಆದರೆ ಕಾದಂಬರಿಯಲ್ಲಿ ಆಕೆಯ ಸ್ಥಿತಿಗೆ ತಾನೇ ಕಾರಣ ಎಂಬ ಭಾವನೆ ಮೂಡಿ ಬರುವಂತೆ ಚಿತ್ರಿಸಲಾಗಿದೆ.

• • •

ಅಧ್ಯಾಯ ಐದು

ಎಸ್.ವಿ. ಪ್ರಭಾವತಿಯವರ ಕಾದಂಬರಿಗಳಲ್ಲಿ ಮಹಾಭಾರತದ ಸ್ತ್ರೀಪಾತ್ರಗಳು

೫.೧. ದ್ರೌಪದಿ

೫.೨. ಕುಂತಿ

೫.೩. ಶಾಕುಂತಲಾ

ಅಧ್ಯಾಯ ಐದು

ಎಸ್.ವಿ. ಪ್ರಭಾವತಿಯವರ ಕಾದಂಬರಿಗಳಲ್ಲಿ ಮಹಾಭಾರತದ ಸ್ತ್ರೀಪಾತ್ರಗಳು

ಭಾರತೀಯ ಸಂಸ್ಕೃತಿಯ ಭದ್ರಬುನಾದಿಯಾದ 'ರಾಮಾಯಣ' ಮತ್ತು 'ಮಹಾಭಾರತ'ಗಳು ಅತ್ಯುಚ್ಚ ಗ್ರಂಥಗಳೆಂದು ಪರಿಗಣಿತವಾಗಿದೆ. ಮಹಾಭಾರತವು ದ್ವಾಪರಾ ಯುಗದಲ್ಲಿ ಸಾಗಿ ಬಂದ ಕೃತಿ. ಇದರಲ್ಲಿ ಬರುವ ದಾಯದಿ ಮತ್ಸರ, ಸಂಚು, ಚತುರೋಪಾಯಗಳು, ಭೂಮಿಯ ಹಕ್ಕಿಗಾಗಿ ನಡೆಯುವ ಹೋರಾಟ, ದುಃಖ ದುಮ್ಮಾನಗಳು ನಮ್ಮ ಹತ್ತಿರದ ಸ್ವಭಾವದವುಗಳಾದುದರಿಂದ ಇದು ಹೆಚ್ಚು ಆತ್ಮೀಯತೆಯಿಂದ ನಮ್ಮನ್ನು ಸೆಳೆಯುತ್ತದೆ. 'ರಾಮಾಯಣ' ಆದರ್ಶವಾದರೆ, 'ಮಹಾಭಾರತವು' ಜೀವನವಾಗಿ ಕಂಡು ಬರುತ್ತದೆ.

ರಾಮಾಯಣ ಮತ್ತು ಮಹಾಭಾರತಗಳು ಬಗೆ ಬಗೆಯ ಪಡಿ ಪದಾರ್ಥಗಳಿಂದ ಕೂಡಿದ ಉಗ್ರಾಣಗಳಿದ್ದಂತೆ. ಸಮರ್ಥರಾದವರು ತಮಗೆ ಬೇಕಾದ ಪಡಿ ಪದಾರ್ಥಗಳನ್ನು ತೆಗೆದುಕೊಂಡು ಅದರಿಂದ ಮಾಡಬಹುದಾದ ಅಡಿಗೆಯನ್ನು ತಮತಮಗೆ ತಿಳಿದ ರೀತಿಯಲ್ಲಿ ಮಾಡಿ ಉಂಡು ತಾವು ತೃಪ್ತಿಪಡಬಹುದು, ಇತರರಿಗೂ ಕೊಡಬಹುದು" (ಸುಧಾಕರ; ಕುವೆಂಪು ನಾಟಕ ಸಮೀಕ್ಷೆ) ಎನ್ನುತ್ತಾರೆ ಸುಧಾಕರ ಅವರು. ಅಂದರೆ ಒಂದು ಕಾಲದಲ್ಲಿ ರಚಿತವಾದ ಕೃತಿಯು ಮತ್ತೊಂದು ಕಾಲದಲ್ಲಿ ರಚಿತವಾದ ಕೃತಿಯಲ್ಲಿ ಕಾಣುವ ಬದಲಾವಣೆಗಳು ಹೇಗೆ ಭಿನ್ನ ಎಂಬುದು ಮುಖ್ಯವಾಗುತ್ತದೆ. ಅವುಗಳಲ್ಲಿ ನಡೆದಿರುವ ಮಾರ್ಪಾಟುಗಳನ್ನು ಅಧ್ಯಯನದ ದೃಷ್ಟಿಯಿಂದ ಹೆಚ್ಚು ಅವಕಾಶವನ್ನಿಯುತ್ತವೆ. ಅಂತೆಯೇ ಮಹಾಭಾರತವು ಕನ್ನಡದ ಅನೇಕ ಕವಿಗಳಿಂದ ಹೊಸತಾಗಿ ನಿರ್ಮಾಣಗೊಂಡಿರುವುದುಂಟು. ಅವುಗಳಲ್ಲಿನ ಭಿನ್ನತೆಗಳು ಮಾರ್ಪಾಟುಗಳು ಬೇರೆಯಾದರೂ ಸಹ ಅವೆಲ್ಲವೂ ಮೂಲ ಕೃತಿಯನ್ನು ಆಶ್ರಯಿಸಿ ರಚಿತವಾದವುಗಳು ಎಂಬುದರಲ್ಲಿ ಎರಡು ಮಾತಿಲ್ಲ. ಇಂಥ ಅನೇಕ ಕೃತಿಗಳಲ್ಲಾದ ಬದಲಾವಣೆಗಳು ಸನ್ನಿವೇಶ ಪಾತ್ರ ಚಿತ್ರಣ ದೃಷ್ಟಿಕೋನಗಳಲ್ಲಿನ ಅಂಶಗಳು ಭಿನ್ನತೆಗೆ ಕಾರಣವಾಗುತ್ತವೆ. ಹೀಗೆ ಮಹಾಭಾರತವು ಪಂಪ, ರನ್ನ, ಲಕ್ಷ್ಮೀಶ, ಕುಮಾರವ್ಯಾಸ ಮುಂತಾದ ಹತ್ತಾರು ಮಹಾಕವಿ ಮತ್ತು ಸಾವಿರಾರು ಕಿರಿಯ ಕವಿಗಳ ಮನೋಭೂಮಿಕೆಯಲ್ಲಿ ವಿಹರಿಸಿ ಹೊರಬಂದು, ಅವುಗಳೊಳಗಿನ ಪಾತ್ರಗಳು ಭಾರತೀಯ ಸಂಸ್ಕೃತಿಯ ಒಂದೊಂದು ಮಹಾಗುಣದ ಸಂಕೇತವಾಗಿವೆ. ಈ ಪಾತ್ರಗಳಲ್ಲಿ ತಮ್ಮ ಕಾಲಾನುಗುಣವಾದ ಹೊಸ ಸಂವೇದನೆಗಳನ್ನು ದೃಷ್ಟಿಕೋನಗಳನ್ನು ಮೂಲ ಸ್ವರೂಪಕ್ಕೆ ಭಂಗ ಬಾರದಂತೆ ತುಂಬಿದ್ದಾರೆ. ಯುಗ

ಮನೋಧರ್ಮ, ಸ್ವರೂಪದ ದೃಷ್ಟಿಯಿಂದ ಆಯಾಯ ಕಾಲಘಟ್ಟದಲ್ಲಿ ಪುರಾಣ ಪಾತ್ರಗಳು ಬೇರೆಯಾಗುವ ಗುಣವನ್ನು ಹೊಂದಿರುವುದುಂಟು. ಅಭಿಮನ್ಯುವಿನಿಂದ ತೊಡಗಿ ವೃದ್ಧತಾಮಹಾ ಭೀಷ್ಮರವರೆಗಿನ ವಿವಿಧ ವಯೋಮಾನದವರು, ಯುಧಿಷ್ಠಿರನಂತಹ ಧರ್ಮದೃಷ್ಟಿಯವರು, ಅರ್ಜುನನಂತಹ ಕದನಕಲಿಗಳು, ಕರ್ಣನಂತಹ ದಾನಶೀಲರೂ ಅಲ್ಲಿ ತುಂಬಿ ಹೋಗಿದ್ದಾರೆ. ಇಂತಹ ಗುಣಮೌಲ್ಯವನ್ನು ಹೊಂದಿರುವ ಸ್ತ್ರೀಪಾತ್ರಗಳು 'ಮಹಾಭಾರತ'ದಲ್ಲಿ ಮಹತ್ವ ಪಡೆದಿರುವುದನ್ನು ಕಾಣುತ್ತೇವೆ. ಇವರುಗಳೇ ಈ ಅಧ್ಯಯನದ ಕೇಂದ್ರ ಶಕ್ತಿಗಳು. ಪತಿಯು ಕುರುಡನೆಂಬುದರಿಂದ ತನ್ನ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಕಾಲಕಳೆಯುವ ಗಾಂಧಾರಿಯಿಂದ ಮೊದಲ್ಗೊಂಡು, ಮಹಾಭಾರತದ ದುಃಖದಾವಿಗೆಯಲ್ಲಿ ಬೆಂದ ದ್ರೌಪದಿಯವರೆಗೆ ಅನೇಕ ಸ್ತ್ರೀಪಾತ್ರಗಳು ನೈಜವಾಗಿ ಹಾದು ಬರುತ್ತವೆ. ಇಂತಹ ಸ್ತ್ರೀ ಪಾತ್ರಗಳು ರಾಮಾಯಣ ಮಹಾಭಾರತ ಗಳಲ್ಲಿ ನಿಲ್ಲುವ ನೆಲೆಯನ್ನು ನೋಡಬಹುದು.

ಪ್ರಸ್ತುತ ಎಸ್.ವಿ. ಪ್ರಭಾವತಿಯವರು ಮಹಾಭಾರತದಲ್ಲಿ ಬರುವ ದ್ರೌಪದಿ, ಕುಂತಿ, ಶಾಕುಂತಲಾ ಪಾತ್ರಗಳನ್ನು ಕೇಂದ್ರವಾಗಿರಿಸಿಕೊಂಡು ಮೂರು ಕಾದಂಬರಿಗಳನ್ನು ರಚಿಸಿದ್ದಾರೆ. ಅದೇ ರೀತಿ ರಾಮಾಯಣ ದಲ್ಲಿ ಬರುವ ಅಹಲ್ಯಾ ಮತ್ತು ಸೀತೆ ಪಾತ್ರಗಳನ್ನು ಕೇಂದ್ರವಾಗಿರಿಸಿಕೊಂಡು ಎರಡು ಕಾದಂಬರಿಗಳನ್ನು ರಚಿಸಿದ್ದಾರೆ. ಈ ಐದು ಪಾತ್ರಗಳೂ ವೈವಿಧ್ಯಪೂರ್ಣವಾದವುಗಳಾಗಿದ್ದು, ಅವುಗಳು ಎರಡೂ ಕಾವ್ಯಗಳಲ್ಲಿ ಒಂದೇ ಪ್ರತಿಬಿಂಬದಂತೆ ಕಂಡು ಬಂದರೂ ಅಲ್ಲಲ್ಲಿ ತಾಳುವ ಧೋರಣೆಗಳು, ಸ್ವಭಾವಗಳನ್ನು ಹೋಲಿಕೆ ಮಾಡಿ ಗಮನಿಸಿದಾಗ ಉಂಟಾಗುವ ಈ ಪಾತ್ರಗಳ ಹಿಂದು - ಮುಂದನ್ನು ಸೃಜನಶೀಲ ಲೇಖಕರು ತಮ್ಮ ಪ್ರತಿಭೆಯಿಂದ ನೇಯ್ದಿರುವುದು ಎದ್ದು ಕಾಣುತ್ತವೆ. ಮಹಾಭಾರತಕ್ಕೆ ಸೂತ್ರಧಾರಿಣಿಯಾಗಿ ಕಂಡು ಬರುವ ಅಗ್ನಿ ಕನ್ಯೆ ದ್ರೌಪದಿಯು ಇಲ್ಲಿ ಕೆಲವೊಮ್ಮೆ ವೀರ-ರಸ ಚಿಮ್ಮಿಸಿ, ಕೆಲವೊಮ್ಮೆ ಕಣ್ಣೀರ ಕೋಡಿಹರಿಸಿ, ಮಗದೊಮ್ಮೆ ವಾತ್ಸಲ್ಯ ಪ್ರೀತಿಗಳ ಹೊನಲನ್ನು ಹಾರಿಸುತ್ತಾ ಗೋಚರವಾಗುತ್ತಾಳೆ. ಪಾಂಡವರ ತಾಯಿಯಾದ ಕುಂತಿಯು ಕೊನೆವರೆಗೂ ಸಂಕಷ್ಟದಿಂದ ಬದುಕುತ್ತಾಳೆ. ಶಕುಂತಲೆಯಿಂದ ದುಷ್ಯಂತ ನೀಡಿದ ಉಂಗುರ ಜಾರಿತು. ಶಕುಂತಲೆ ತಿರಸ್ಕೃತಳಾಗುತ್ತಾಳೆ. ವಿಚಿತ್ರ ಪವಾಡದಂತೆ ಕೈ ಜಾರಿದ ಉಂಗುರದ ಬಗ್ಗೆ ಅಶರೀರವಾಣಿಯು ಅವಳು ನಿನ್ನ ಪತ್ನಿ ಎಂದಾಗ ಅವಳನ್ನು ಸ್ವೀಕರಿಸುತ್ತಾನೆ. ಹೀಗೆ ಒಂದೊಂದು ಪಾತ್ರಗಳು ವಾಸ್ತವದ ಬದುಕಿಗೆ ಹತ್ತಿರವಾಗುವಂತೆ ಪ್ರಭಾವತಿಯವರು ಕಾದಂಬರಿಗಳನ್ನು ರಚಿಸಿದ್ದಾರೆ.

೫.೧. ದ್ರೌಪದಿ

ದ್ರೌಪದಿ ಮಹಾಭಾರತದಲ್ಲಿ ಬರುವ ಅತ್ಯಂತ ಮುಖ್ಯ ಪಾತ್ರ. ನಮ್ಮ ಮಹಾಕಾವ್ಯಗಳಲ್ಲಿ ಪುರಾಣಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಯರಿಗಿಂತ ಭಿನ್ನವಾದ ಪಾತ್ರ ಇವಳದು. ಸ್ತ್ರೀವಾದದ ಹಿನ್ನೆಲೆಯಲ್ಲಿ ದ್ರೌಪದಿಯನ್ನು ಪುನರ್‌ಸೃಷ್ಟಿಸುವುದರಿಂದ ಆಧುನಿಕ ಕಾಲದ ಮಹಿಳೆಯಾಗಿ ನಿಲ್ಲಬಲ್ಲಳು. ದ್ರೋಣರಿಂದ ಅಪಮಾನಿತನಾದ ದ್ರುಪದನು ದ್ರೋಣನನ್ನು ಕೊಲ್ಲುವ ಮಗನನ್ನು ಬಯಸಿ ಯಾಜೋಪಯಾಜರಿಂದ

ಒಂದು ಯಾಗವನ್ನು ಮಾಡಿಸಿದ. ಯಜ್ಞದ ಬೆಂಕಿಯಿಂದ ಧೃಷ್ಟದ್ಯುಮ್ನ ಮತ್ತು ದ್ರೌಪದಿಯನ್ನು ಪಡೆಯುತ್ತಾನೆ. ದ್ರೌಪದಿಯ ಜನನವಾದ ಕೂಡಲೇ ಆಕಾಶವಾಣಿಯಾಗುತ್ತದೆ. ಈ ಕೃಷ್ಣೆಯು ಕ್ಷತ್ರಿಯ ನಾಶವನ್ನುಂಟು ಮಾಡುತ್ತಾಳೆ. ಅಂದರೆ ಅವಳ ಜನನದೊಂದಿಗೆ ಮುಂದೆ ಸಂಭವಿಸಬಹುದಾದ ಘಟನೆಗಳಿಗೆ ವೇದಿಕೆಯನ್ನು ನಿರ್ವಹಿಸುವುದು, ಸಾಮಾನ್ಯವಾಗಿ ಕಂಡು ಬರುತ್ತದೆ. ದ್ರುಪದನು ಅರ್ಜುನನ ಸಂಬಂಧ ಕ್ಕಾಗಿಯೇ ಅಗ್ನಿಯಿಂದ ಪಡೆದ ಸ್ತ್ರೀ ಈಕೆ. ದ್ರುಪದ ರಾಜನ ಮಗಳಾಗಿದ್ದರಿಂದ 'ದ್ರೌಪದಿ', ಪಂಚಾಲ ದೇಶದ ರಾಜನ ಮಗಳಾಗಿದ್ದರಿಂದ 'ಪಾಂಚಾಲಿ', ಯಜ್ಞಸೇನನ ಮಗಳಾದ್ದರಿಂದ 'ಯಾಜ್ಞಸೇನಿ', ಯಜ್ಞರಿಂದ ಹುಟ್ಟಿದವಳಾದ್ದರಿಂದ 'ಯಜ್ಞೋದ್ಭವೆ', ಕಪ್ಪಗೆ ಇರುವವಳಾಗಿದ್ದರಿಂದ 'ಕೃಷ್ಣೆ', ಪಾಂಡವರ ಪತ್ನಿಯಾದ್ದರಿಂದ 'ಪಂಚವಲ್ಲಭೆ'. ಹೀಗೆ ದ್ರೌಪದಿಗೆ ಅನೇಕ ಹೆಸರುಗಳಿವೆ. ಪುಷ್ಯ ಮಾಸದ ಶುಕ್ಲ ಪಕ್ಷದಲ್ಲಿ ರೋಹಿಣಿ ನಕ್ಷತ್ರದೊಡಗೂಡಿದ ಶುಭ ದಿನದಲ್ಲಿ ದ್ರೌಪದಿಗೆ ಸ್ವಯಂವರವಾಯಿತು. ಸ್ವಯಂವರ ಮಂಟಪದಲ್ಲಿ ಅರ್ಜುನನು ಮತ್ಸ್ಯ ಯಂತ್ರವನ್ನು ಭೇದಿಸಿ ಈಕೆಯನ್ನು ವಿವಾಹವಾದರೂ, ಕುಂತಿಯ ಮತ್ತು ವ್ಯಾಸರ ಅಪ್ಪಣೆಯಂತೆ ಇವಳು ಐವರು ಪಾಂಡವರ ಪತ್ನಿಯಾದಳು. ಇಡೀ ಮಹಾಭಾರತಕ್ಕೆ ಕಾರಣಗಳಾಗುವ ಕೌರವರ ನಾಶಕ್ಕೆ ಮೂಲ ಬೀಜವಾಗುವ ಈಕೆಯ ಜನನವೇ ಅಗ್ನಿ ಸ್ವರೂಪದ್ದು. ಅದು ದಹಿಸಲುಬಲ್ಲುದ್ದೇ ಹೊರತು, ರಕ್ಷಿಸಲೇನು ಬಲ್ಲದು ಎನ್ನುವಂತೆ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಲೇ, ನ್ಯಾಯ-ಅನ್ಯಾಯಗಳನ್ನು ಪ್ರಶ್ನಿಸುತ್ತಲೇ ಆಧುನಿಕ ಮಹಿಳೆಯರಿಗೆ ಸ್ಫೂರ್ತಿ ತುಂಬುವ ಪಾತ್ರವಾಗಿ ಕಾದಂಬರಿಯಲ್ಲಿ ಚಿತ್ರಿತಗೊಂಡಿದ್ದಾಳೆ.

ಅರ್ಜುನನಿಗೆ ರಾಣಿಯಾಗುವ ಮಗಳು ಬೇಕೆಂದು ಪ್ರಾರ್ಥಿಸಿ ದ್ರೌಪದಿಯನ್ನು ಪಡೆಯುತ್ತಾನೆ. ಆದರೆ ಪಾಂಡವರು ಅರಗಿನ ಮನೆಯಲ್ಲಿ ಸುಟ್ಟು ಹೋದರು ಎಂದು ದೂತರು ರಾಜನಿಗೆ ತಿಳಿಸಿದಾಗ ಅವನಿಗೆ ಬಹಳ ಆಘಾತವಾಗುತ್ತದೆ. ಪುರೋಹಿತನಿಗೆ ತನ್ನ ಮಗಳ ಜಾತಕವನ್ನು ತೋರಿಸುತ್ತಾನೆ. "ರಾಜ ನಿನ್ನ ಮಗಳ ಜಾತಕ ತುಂಬಾ ಅಪೂರ್ವವಾಗಿದೆ. ಇವಳು ಯುಗ ಪ್ರವರ್ತಕಿ. ಒಂದು ಯುಗವನ್ನು ಮುಳುಗಿಸಿ ಇನ್ನೊಂದು ಯುಗವನ್ನು ಹುಟ್ಟಿಸುವವಳು". ಇದನ್ನು ಕೇಳಿದ ದ್ರುಪದ ಅರ್ಜುನನಿಲ್ಲದಿದ್ದ ರೇನಂತೆ ಇವಳು ಸಾಮಾನ್ಯನನ್ನುವರಿಸುವವಳಲ್ಲ ಎಂಬ ಭಾವನೆ ರಾಜನಿಗೆ ಬರುತ್ತದೆ. ಆದರೂ ತನ್ನ ಮನಸ್ಸಿನ ದುಗುಡವನ್ನು ಆಪ್ತಗೆಳೆಯನ ಮುಂದೆ ಹೇಳುತ್ತಾನೆ. ಅದಕ್ಕೆ ಅವರು ಸತ್ತು ಹೋದವನಿಗಾಗಿ ಅತ್ತೇನು ಪ್ರಯೋಜನ. ಅತ್ತರೆ ಸತ್ತವರು ಬರುತ್ತಾರೆಯೇ? ಅವನು ಸತ್ತನೆಂದು ನಿನ್ನ ಮಗಳು ವಿಧವೆಯಾಗ ಬೇಕೇ ಅಥವಾ ವಿವಾಹವಿಲ್ಲದೇ ಹೀಗೇ ಇರಬೇಕೆ? ತಂದೆ "ಶಾಂತಂ ಪಾಪಂ" ಎಂದು ಕಿವಿ ಮುಚ್ಚಿಕೊಂಡ. ಹಾಗಿದ್ದರೆ ನನ್ನ ಮಾತು ಕೇಳು ಎಂದರು. ಅವರಿಂದ ಬಂದುದು 'ಮತ್ಸ್ಯಯಂತ್ರ ಭೇದನ'ದ ಸ್ಪರ್ಧೆಯಿಡುವ ವಿಚಾರ.

> "ಆಗಸದಲ್ಲಿ ತೂಗುತ್ತಿರುವ ಯಂತ್ರದ ಮೀನಿನ ಕಣ್ಣಿಗೆ ಬಾಣ
> ಪ್ರಯೋಗಿಸಬೇಕು. ಕೆಳಗಿನ ಬಟ್ಟಲಲ್ಲಿರುವ ಎಣ್ಣೆಯಲ್ಲಿ ಅದರ

ಪ್ರತಿಬಿಂಬವನ್ನು ನೋಡುತ್ತಾ, ಮಧ್ಯೆ ತಿರುಗುತ್ತಿರುವ ಅರೆಗಾಲಿನ ಮೂಲಕ ಬಾಣ ಪ್ರಯೋಗಿಸುವ ಸ್ಪರ್ಧೆ".

ಇಂತಹ ಪಂದ್ಯವಾದರೆ ಸಮರ್ಥನಾದ ವೀರನೇ ಬೇಕು. ಅರ್ಜುನನಿಲ್ಲದಿದ್ದರೇನಂತೆ ಎಂಬ ಸಮಾಧಾನವೂ ಉಂಟಾಯಿತು. ಅಂದಿನಿಂದಲೇ ಪ್ರಾರಂಭವಾಗಿತ್ತು ಸ್ವಯಂವರದ ತಯಾರಿ. ದ್ರೌಪದಿಯು ದ್ರುಪದನ ಮಗಳಾಗಿ ತಂದೆಯ ಇಷ್ಟದಂತೆ ಸ್ವಯಂವರದಲ್ಲಿ ಸ್ಪರ್ಧೆಯ ವಸ್ತುವಾಗುತ್ತಾಳೆ. ಕ್ಷತ್ರಿಯರಾದ ವೀರಾನು-ವೀರರ ಕೈಯಲ್ಲೂ ಮತ್ಸ್ಯಯಂತ್ರ ಭೇದನ ಮಾಡಲು ಆಗದಿದ್ದಾಗ, ಅನಾಮಧೆಯ ಬ್ರಾಹ್ಮಣನು ಮತ್ಸ್ಯಯಂತ್ರ ಭೇದನ ಮಾಡುತ್ತಾನೆ. ಬ್ರಾಹ್ಮಣ ವೇಷದಲ್ಲಿದ್ದ ಪಾಂಡವರೆಂದು ಭಾವಿಸದೇ ಗೆದ್ದವರೊಂದಿಗೆ ದ್ರೌಪದಿ ಹೋಗುತ್ತಾಳೆ. ಪಾಂಡವರು ತಾಯಿಯ ಮಾತಿನಂತೆ ಮದುವೆಯಾಗಲು ಒಪ್ಪುತ್ತಾರೆ. ದ್ರೌಪದಿಯು ಪ್ರತಿಭಟಿಸುವುದಿಲ್ಲ. ಆದರೆ ದ್ರುಪದನ ಪ್ರತಿಭಟನೆಯಿದೆ. ಕಾದಂಬರಿಯಲ್ಲಿ ಪಂಚಪತಿತ್ವವನ್ನು ಸ್ವೀಕರಿಸುವಲ್ಲಿ ದ್ರೌಪದಿ ಪ್ರತಿಭಟಿಸುವುದಿಲ್ಲ. ಆದರೆ ಇಂತಹ ಮದುವೆಯ ಬಗ್ಗೆ ಕಾಣದ ಎಂದೂ ಕೇಳದ ಅವಳಿಗೆ ಒಪ್ಪಿಗೆಯಾಗಿದ್ದರು. ಅವಳ ಅಂತರಾಳದಲ್ಲಿ ಪ್ರತಿಭಟನೆ ಅತಿ ಜಾಗೃತವಾಗಿತ್ತು ಎಂಬುದಕ್ಕೆ "ದ್ರೌಪದೀ ನಿನಗೆ ಇಂತಹ ಮದುವೆ ಸಮ್ಮತವೇ? ಐದು ಜನರನ್ನುವರಿಸಲು ನೀನು ಸಿದ್ಧಳಿರುವೆಯಾ? ಎಂದು ಎಲ್ಲರೆದುರು ಚರ್ಚೆಯಾಗುವಾಗ ಒಂದು ಮಾತು ಒಂದೇ ಮಾತು ಕೇಳಿದ್ದರೂ ಸಾಕಿತ್ತು. ನನಗೆ ಧನ್ಯತೆಯ ಭಾವ ಮೂಡುತ್ತಿತ್ತು". ನಾನು ಹೇಗೂ ಒಪ್ಪಿರುವೆ ಎಂಬುದನ್ನು ನನ್ನ ಮುಖಭಾವದಿಂದ ತಂದೆ ಕಂಡುಕೊಂಡಿದ್ದರೂ ತಾನು ಕಂಡ ಕನಸಿಗೂ ಈಗ ಕಾಣುತ್ತಿರುವ ವಾಸ್ತವಕ್ಕೂ ತಳುಕು ಹಾಕಲಾರದೆ ಒದ್ದಾಡುತ್ತಿದ್ದಾನೆ. ಮೂಲ ಪುರಾಣ ಕಥೆಯನ್ನು ನೋಡಿದಲ್ಲಿ ಅಲ್ಲಿನ ದ್ರೌಪದಿಗೆ ಪಂಚಪತಿತ್ವದ ಬಗ್ಗೆ ಸಮ್ಮತವಿದ್ದಂತೆಯಿದೆ. ಪ್ರಭಾವತಿಯವರ ಕಾದಂಬರಿಯ ದ್ರೌಪದಿಯು ಮೂಲದ ಪಾತ್ರಕ್ಕಿಂತ ಭಿನ್ನಳಾಗಿ ಕಂಡು ಬರುತ್ತಾಳೆ. ಕಾದಂಬರಿಯಲ್ಲಿನ ಆಕೆಯ ಮಾತುಗಳೇ ಅದನ್ನು ಸ್ಪಷ್ಟಪಡಿಸುತ್ತವೆ. "ಕುಂತಿ ಮತ್ತು ಧರ್ಮರಾಯರಿಗೆ ನನ್ನ ಮನಸ್ಸು ಹೇಗೆ ಎಂದು ನಿನ್ನೆ ರಾತ್ರಿಯೇ ಚೆನ್ನಾಗಿ ತಿಳಿದು ಹೋಗಿದೆ. ಆದರೂ ಒಂದು ಮಾತು ಕೇಳಿದ್ದರೆ ನನ್ನ ಮನಸ್ಸಿಗೂ ಸಮಾಧಾನವಿರುತ್ತಿತ್ತು. ಆಗ ಪಂಚಪತಿತ್ವವೂ ದ್ರೌಪದಿಯ ಮೇಲೆ ಹೇರಲ್ಪಡಲಿಲ್ಲ. ಅದನ್ನು ಅವಳು ತಾನಾಗಿ ಬಯಸಿ ಸ್ವೀಕರಿದಳು ಎಂದು ಎಲ್ಲರಿಗೂ ತಿಳಿಯುತ್ತಿತ್ತು. ಆಗ ಎಲ್ಲರೂ 'ಅಯ್ಯೋ ದ್ರೌಪದಿ' ಎಂದು ಮರುಗುವ ಬದಲು 'ಭೇಷ್ ದ್ರೌಪದಿ' ಅನ್ನುತ್ತಿದ್ದರು. ಬೇರೆ ಎಲ್ಲಾ ಹೆಂಗಸರಿಗಿಂತ ನಾನು ಬೇರೆಯೇ ಎಂದು ಭಾವಿಸಿದ್ದ ನನಗೆ ಈ ಮುಕ್ತ ಅಭಿಪ್ರಾಯದ ಅಗತ್ಯವಿತ್ತು" (ಪ್ರಭಾವತಿ ಎಸ್.ವಿ; ೧೯೯೬; ಪು. ೩೧-೩೨). ದ್ರೌಪದಿಯು ಮದುವೆಗೆ ಸಾಮಾಜಿಕ ಮನ್ನಣೆಯನ್ನು ಬಯಸಿದ್ದಳು ಎಂದು ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. ದ್ರೌಪದಿ ತನ್ನ ಮದುವೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಲ್ಲಿ ಅವಳನ್ನು ಕೇಳದ ವ್ಯವಸ್ಥೆಯನ್ನು ಪ್ರತಿಭಟಿಸುತ್ತಾಳೆ. ವೇದವ್ಯಾಸರು ಬಂದು ತೀರ್ಮಾನ ಮಾಡಬೇಕೆಂದಾಗ ಅವಳು ಮದುವೆಗೆ ಒಪ್ಪಿಗೆ ಕೇಳಬೇಕಾದದ್ದು ಗಂಡನ್ನು ಮತ್ತು ಹೆಣ್ಣನ್ನು ಅದು ಬಿಟ್ಟು ಕೆಂಪು ಗಡ್ಡದ ಈ ಜೋಗಿಯ ಒಪ್ಪಿಗೆ ಪಡೆಯುವುದನ್ನು ಖಂಡಿಸುತ್ತಾಳೆ. ಇಲ್ಲಿ ವಾಸ್ತವ ಬದುಕಿನ ಸಮಸ್ಯೆಗಳನ್ನು ಎತ್ತಿಕೊಂಡೇ ಪಾತ್ರದ ಮೂಲಕ ಸಮಾಜವನ್ನು ಪ್ರಶ್ನಿಸುವುದನ್ನು

ಕಾಣಬಹುದು. ತಂದೆ ಹಾಕಿದ ಚೌಕಟ್ಟಿನಲ್ಲಿ ನಡೆದು ಕೊಟ್ಟ ಮನೆಗೆ ಕೀರ್ತಿ ತರಬೇಕು. ಗಂಡನ ಮನೆಯಲ್ಲಿ ಕೊಟ್ಟ ಕಷ್ಟಗಳನ್ನು ಸಹಿಸಿಕೊಂಡು ಮೌನವಾಗಿ ಬಾಳ ಬೇಕು. ಎನ್ನುವ ಸಂಪ್ರಾದಾಯಿಕ ಹೆಣ್ಣಾಗಲೂ ಬಯಸದೇ ಅಂತಹ ಸಂಕೋಲೆಗಳಿಂದ ಹೊರಬಂದು ಸ್ವಾಭಿಮಾನದಿಂದ ತಲೆ ಎತ್ತಿ ನಿಲ್ಲಬೇಕು. ಎನ್ನುವ ಹಂಬಲ ಕಾದಂಬರಿಯ ದ್ರೌಪದಿಗೆಯಿದೆ, ದ್ರೌಪದಿಯ ಸ್ವಯಂ ವರದಲ್ಲಿ ಮತ್ಸ್ಯಯಂತ್ರವನ್ನು ಭೇದಿಸಿ ಜಯಶಾಲಿಯಾದವನು ಅರ್ಜುನ, ಅವನ ಕೊರಳಿಗೆ ದ್ರೌಪದಿ ಹೂ ಮಾಲೆ ಹಾಕುತ್ತಾಳೆ. ಅವಳನ್ನು ಮನೆಗೆ ಕರೆದುಕೊಂಡು ಹೋದಾಗ ಕುಂತಿ ಹಣ್ಣೆಂದು ತಿಳಿದು ಹಂಚಿಕೊಳ್ಳಿ ಎನ್ನುತ್ತಾಳೆ. ಅದಕ್ಕೆ ಐದು ಜನರು ಆಕೆಯನ್ನು ಮದುವೆಯಾಗುತ್ತಾರೆ ದ್ರೌಪದಿ ಐದು ಜನರ ಸ್ವತ್ತಾದಳು. ಹೀಗಿರುವಾಗ ಆಕೆಯನ್ನು ಪಣವಾಗಿಟ್ಟು ಜೂಜಾಡುವ ಯಾವ ಯೋಗ್ಯತೆಯೂ ಧರ್ಮರಾಯನಿಗಿಲ್ಲ. ಏಕೆಂದರೆ ದ್ರೌಪದಿ ಧರ್ಮರಾಯನ ಹೆಂಡತಿ ಮಾತ್ರವಲ್ಲ, ಉಳಿದ ನಾಲ್ವರ ಹೆಂಡತಿಯು ಹೌದು. ಧರ್ಮರಾಯನು ಆಕೆಯ ಗಂಡನಾಗಿದ್ದರೂ ಅವಳ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದಿತ್ತು. ದ್ರೌಪದಿ ಮುಂದುವರೆದು ಪ್ರಶ್ನಿಸುತ್ತಾಳೆ. ಯುಧಿಷ್ಠರ ತಾನೇ ಸ್ವತಃ ಸೋತು ಹೋಗಿದ್ದ ದ್ಯೂತ್ಯದಲ್ಲಿ ಅಂದ ಮೇಲೆ, ಆತನೇ ಪರಾಧೀನನಾಗಿದ್ದಾನೆ. ಅವನೇ ದಾಸ್ಯದಲ್ಲಿರುವಾಗ, ನನ್ನನ್ನು ಪಣಕ್ಕೊಡ್ಡಿ ಜೂಜಾಡುವ ಅಧಿಕಾರ ಸೋತವನಿಗೆ ಇರುವುದಿಲ್ಲ. ದ್ರೌಪದಿಯು ತನಗೆ ಬಂದೊದಗಿದ ಕಷ್ಟ ಕಾರ್ಪಾಣ್ಯಗಳನ್ನೆಲ್ಲ ಪಾಲಿಗೆ ಬಂದಿದ್ದು ಪಂಚಾಮೃತ ಎನ್ನುವಂತೆ ಅವುಗಳನ್ನು ಸುಮ್ಮನೆ ಸವಿಯುತ್ತ ಬದುಕಿದವಳಲ್ಲ. ತನ್ನ ಮಾತಿನಿಂದಲೆ ಧೈರ್ಯದಿಂದ ತನ್ನನ್ನು ಹೀನಾಯವಾಗಿ ಹಿಂಸಿಸಿದವರ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ.

ಧರ್ಮರಾಯನು ಪಗಡೆಯಾಟದಲ್ಲಿ ಸೋಲುತ್ತಾನೆ. ದುರ್ಯೋಧನನು ದ್ರೌಪದಿಯನ್ನು ಸಭೆಗೆ ಕರೆತರಲು ಪ್ರತಿಕಾಮನನ್ನು ಕಳಿಸುತ್ತಾನೆ.

> "ಅಮ್ಮಾ ದ್ರೌಪದೀ, ನೀನು ರಾಜಸಭೆಗೆ ಬರಬೇಕಂತೆ".
> "ದುಯೋಧನ ಮಹಾರಾಜರ ಅಪ್ಪಣೆಯಾಗಿದೆ".
> 'ದುರ್ಯೋಧನ ಯಾರು ನನಗೆ ಅಪ್ಪಣೆ ಮಾಡುವುದಕ್ಕೆ'?
> "ನಿಮ್ಮನ್ನು ಪಗಡೆಯಾಟದಲ್ಲಿ ಗೆದ್ದ ಒಡೆಯರು, ಏನೆಂದೆ?
> ಪಗಡೆಯಾಟದಲ್ಲಿ ನನ್ನನ್ನು ಗೆದ್ದನೆ? ನಾನೇನು ಭೂಮಿಯೆ
> ಕಾಣಿಯೆ ಗೆಲ್ಲಲು". (ಅದೇ; ಪು. ೬೪)

ಎಂದು ದ್ರೌಪದಿಯು ಕೇಳುವಲ್ಲಿ ಅವಳ ವ್ಯಕ್ತಿತ್ವ, ಅವಳ ರೋಷ, ದರ್ಪ ವಿಮರ್ಶೆಗೆ ಒಳಪಡುತ್ತದೆ. ಪ್ರಸ್ತುತ ಸಮಾಜದಲ್ಲಿ ಹೆಣ್ಣು ಪುರುಷನ ಶೋಷಣೆಯನ್ನು ಪ್ರತಿಭಟಿಸುವುದು, ನೊಂದ ಸ್ತ್ರೀ ಸಮುದಾಯದ ಪರವಾಗಿ ಸಿಡಿದಳುವ ಮನೋಭಾವವನ್ನು ಕಾದಂಬರಿ ಮಹತ್ವ ಪೂರ್ಣವಾಗಿ ನಿರೂಪಿಸಿದೆ. ದುಶ್ಯಾಸನನು ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಎಳೆದು ತಂದು ವಸ್ತ್ರಾಪಹರಣ ಮಾಡುತ್ತಾನೆ. ಆಕೆಯ ವಸ್ತ್ರಾಪಹರಣ ವಾಗುವುದನ್ನು ಪಾಂಡವರೈವರು ಮಾತ್ರವಲ್ಲ, ಕೌರವರೆಲ್ಲರೂ, ಭೀಷ್ಮಾದಿ ಹಿರಿಯರು ಈ ಸ್ಥಿತಿಯ

ದುಷ್ಟ ಕಾರ್ಯವನ್ನು ಕಂಡು ಸಹಿಸಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಕೊನೆಗೆ ಕೃಷ್ಣನನ್ನು ಪ್ರಾರ್ಥಿಸಿ ತನ್ನ ಮಾನ ಕಾಪಾಡಿಕೊಳ್ಳುತ್ತಾಳೆ. ಹೆಣ್ಣು ಪತಿವ್ರತೆಯಾಗಿರಬೇಕು. ಸಹನೆ, ತಾಳ್ಮೆಯನ್ನು ಹೊಂದಿರಬೇಕು, ಪರಿಸ್ಥಿತಿಯನ್ನು ಅರಿತು ನಡೆಯಬೇಕು. ದಯಾಮಯಿಯಾಗಿರಬೇಕು ಎಂದೆಲ್ಲಾ ಹೇಳುವ ಪುರುಷರು ತಾವೇ ಆ ರೀತಿ ಇರುವುದಿಲ್ಲ ಎನ್ನುವುದನ್ನು ಈ ಪ್ರಸಂಗ ಸಾಬೀತು ಮಾಡುತ್ತದೆ. ವಂಶಕ್ಕೆ ಹಿರಿಯರಾಗಿ ಧರ್ಮದ ಅಪರಾವತಾರವಾಗಿರುವ ನೀವು ಹೇಳಿ. ಇದು ಧರ್ಮವೇ? ಈ ಧರ್ಮರಾಯನಿಗೆ ನನ್ನನ್ನು ಸೋಲಲು ಹಕ್ಕಿದೆಯೆ ಹೇಳಿ ಎಂದು ಗಟ್ಟಿಸಿ ಕೇಳುವಲ್ಲಿ ಇಡೀ ಸ್ತ್ರೀ ಸಮುದಾಯದ ಶೋಷಣೆಯ ಕೂಗು ಅವಳ ಮಾತಿನಲ್ಲಿ ಅಡಗಿದೆ. ಅಷ್ಟೇ ಅಲ್ಲದೆ ಅಂಬೆಯು ಸಹ ಭೀಷ್ಮನಿಂದ ಶೋಷಿತಳಾದ ಹೆಣ್ಣು. ಅವಳ ನೆನಪು ಬರುತ್ತಿದೆಯಲ್ಲವೆ? ಅವಳಂತೆ ನಾನು ಆ ಸ್ಥಾನದಲ್ಲಿ ಇದ್ದಿದ್ದರೆ, ನಾನು ಹೇಡಿಯಂತೆ ಸಾಯುತ್ತಿರಲಿಲ್ಲ, ಬದಲಾಗಿ ನಿಮ್ಮನ್ನೇ ಅಗ್ನಿಗೆ ನೂಕುತ್ತಿದ್ದೆ ಎಂದು ಭೀಷ್ಮರಿಗೆ ಹೇಳುವಲ್ಲಿ ದ್ರೌಪದಿಯ ನೋವು, ದುಃಖ ಅಪಮಾನಗಳ ಆಕ್ರಂದನ ವ್ಯಕ್ತವಾಗಿದೆ.

ಭಾರತೀಯ ಪರಂಪರೆಯಲ್ಲಿ ಹೆಣ್ಣನ್ನು ಶಕ್ತಿಯೆಂದು ನಂಬಿ ಪೂಜಿಸುವ ಭಾವನೆಯಿದೆ. ತಾಯಿಯನ್ನು ದೇವತೆಯೆಂದೇ ಗುರುತಿಸಲಾಗಿದೆ. ಪುರುಷನ ಗೆಲುವಿನ ಹಿಂದೆ ಒಬ್ಬ ಹೆಣ್ಣು ಇದ್ದೇ ಇರುತ್ತಾಳೆ ಎಂದಾಗ ಪ್ರತಿಯೊಂದು ಹಂತದಲ್ಲೂ ಹೆಣ್ಣು ಮಗಳಾಗಿ, ಸತಿಯಾಗಿ, ತಾಯಿಯಾಗಿ ಕಾಣಿಸಿಕೊಂಡು ವ್ಯಕ್ತಿಯನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಾಳೆ. ಆದ್ದರಿಂದ ಹೆಣ್ಣಿಗೆ ಉನ್ನತ ಸ್ಥಾನವನ್ನು ನೀಡಿ ಗೌರವಿಸಲಾಗಿದೆ. ಆದರೆ ಇಲ್ಲಿ ದುಶ್ಯಾಸನನು ಅತ್ತಿಗೆ ಎಂಬ ಗೌರವವಿಲ್ಲದೇ 'ನಡೆ ದ್ರೌಪದೀ ನಿನ್ನನ್ನು ಧರ್ಮದಿಂದ ಗೆದ್ದಿದ್ದೇವೆ, ದುರ್ಯೋಧನನ ಅಂತಃಪುರದಲ್ಲಿ ದಾಸಿಯಂತೆ ಕಸ ಗುಡಿಸು ನಡೆ" ಎಂದು ಏಕವಚನದಲ್ಲಿ ಹೆಸರು ಹಿಡಿದು ಕರೆಯುತ್ತಾನೆ. ಧರ್ಮರಾಯನ ತಮ್ಮನಾದ ನೀನು ನನ್ನ ಮೈದುನನಲ್ಲವೆ, ತಮ್ಮ ನಾನು ಪುಷ್ಪವತಿ, ರಾಜಸಭಾ ಪ್ರವೇಶ ನನಗೆ ಅನುಚಿತ' ಎಂದು ಹೇಳುತ್ತಿರುವಾಗಲೇ ದುಶ್ಯಾಸನು ಮುಂದೆ ನುಗ್ಗಿ ಕೂದಲನ್ನು ಹಿಡಿದು 'ಇಲ್ಲಿ ಪುಷ್ಪವತಿಯಾಗು ಅಲ್ಲಿ ಫಲವತಿಯಾಗುವೇ ಅಂತೆ" ಎಂದು ಅಮಾನವೀಯ ಹೊಲಸು ಮಾತನಾಡುತ್ತಾ ಸಭಾಭವನಕ್ಕೆ ದ್ರೌಪದಿಯನ್ನು ಎಳೆದ್ಯೊಯುತ್ತಾನೆ. ಇಷ್ಟೆಲ್ಲಾ ಅವಮಾನವಾಗುವುದನ್ನು ನೋಡುತ್ತಾ ಕುಳಿತವರಿಗೆ ನೀವೂ ವೀರರೆ? ಶೂರರೆ? ಧೀರರೆ? ಅಥವಾ ನೀವು ಗಂಡರೋ ಭಂಡರೋ ಎಂದು ತನ್ನ ಉಗ್ರತೆಯನ್ನು ತೋರಿಸುತ್ತಾಳೆ. ದ್ರೌಪದಿಯ ಸ್ವಭಾವ ಚಿತ್ರಣವೇ ಬೇರೆ. 'ಸೇರಿಗೆ ಸವ್ವಾ ಸೇರು' ಎನ್ನುವಂತೆ ತನಗೆ ಅವಮಾನ ಮಾಡಿದವನ ರಕ್ತದಲ್ಲಿ ತನ್ನ ಕೂದಲನ್ನು ನೆನೆಸಿ ಅವನ ಎಲುಬುಗಳನ್ನೇ ಬಾಚಣಿಕೆ ಮಾಡಿಕೊಂಡು ಕೂದಲು ಬಾಚಿ ನನ್ನ ಮುಡಿಕಟ್ಟುವೆ ಎಂದು ಶಪಥ ಮಾಡುತ್ತಾಳೆ. ಅಲ್ಲಿಯವರೆಗೆ ದುರ್ಯೋಧನನ ಸಭೆಯಲ್ಲಿ ಕಳಚಿರುವ ಮುಡಿಯನ್ನು ಮತ್ತೆ ಕಟ್ಟುವುದಿಲ್ಲ ಎಂದು ನಿರ್ಧರಿಸುತ್ತಾಳೆ.[೧]

೧. ಈ ಭಾಗದಲ್ಲಿ ಪಂಪ ಮತ್ತು ಕುಮಾರವ್ಯಾಸರ ದಟ್ಟ ಪ್ರಭಾವವನ್ನು ನಾವು ಗುರುತಿಸಬಹುದಾಗಿದೆ.

ಮುಡಿಯಂ ಪಿಡಿದೆಳೆದವನಂ
ಮುಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ

ಮುಡಿಯಿಸು ವಿನೆಗಂ ಮುಡಿಯಂ
ಮುಡಿಯೆಂಗಳ ಕೇಳಿಮೊಗಳನಾ ನುಡಿದೆಂ.

(ವಿಕ್ರಮಾರ್ಜುನ ವಿಜಯ; ಆಶ್ವಾಸ-೭; ಪದ್ಯ ೧೦)

"ಮುಂದಲೆಯ ಹಿಡಿದಿಳೆದು ಸಭೆಯಲಿ
ತಂದು ತನ್ನನ್ನು ಭಂಗ ಬಡಿಸಿದ
ಕಂದು ಹೃದಯುವ ಕರುಳ ದಂಡಯನ್ನೆದೆ ಸಿರಿಮುಡಿಗೆ
ಚಂದದಿಂದುರೆ ಮುಡಿದು ಚರ್ಮದ
ಅಂದ ದುಡುಗೆಯನುಟ್ಟು ಬಳಿಕಿ
ನ್ನೆಂದ ಕಬರಿಯ ಕಟ್ಟುವೆನು". (ಕರ್ಣಾಟಕ ಭಾರತ ಕಥಾಮುಂಜರಿ; ಕುಮಾರವ್ಯಾಸ)

ಪಗಡೆಯಾಟದಲ್ಲಿ ಹೆಣ್ಣನ್ನು ಜೂಜಿಗೆ ಪಣವಾಗಿಡುವುದು ಈ ದೇಶದ ಹೆಣ್ಣಿನ ಸ್ಥಾನಮಾನವನ್ನು ವಿವರಿಸುತ್ತದೆ. ಸ್ವಯಂವರದಲ್ಲಿ ಗೆದ್ದವನ ಹೆಂಡತಿಯಾಗಿ ಕುಂತಿಯ ಬಾಯಿ ತಪ್ಪಿನಿಂದಾಗಿ ಐವರನ್ನು ವರಿಸುವುದು ಇಷ್ಟವಾದಾರೂ, ಸಾಮೂಹಿಕ ಒಪ್ಪಿಗೆಗಾಗಿ ಹಂಬಲಿಸುತ್ತಾಳೆ. ತನ್ನ ಒಪ್ಪಿಗೆಯನ್ನು ಕೇಳದಿದ್ದಕ್ಕಾಗಿ ಪ್ರತಿಭಟಿಸುತ್ತಾಳೆ. ಐವರನ್ನು ವರಿಸಿದ ದ್ರೌಪದಿ ಕುಂತಿಯ ಮಾತಿನಂತೆ ಯಾರಲ್ಲೂ ಭೇದ ಮಾಡುವುದಿಲ್ಲ. ಪಾಂಡವರು ಕೃತಕ ಭವನವನ್ನು ನಿರ್ಮಿಸುತ್ತಾರೆ. ಅಲ್ಲಿ ಯಾಗಕ್ಕಾಗಿ ಬಂದ ದುರ್ಯೋಧನ ಭವನದ ಚಮತ್ಕಾರವನ್ನು ತಿಳಿಯದೇ ಕೊಳದಲ್ಲಿ ಜಾರಿ ಬೀಳುತ್ತಾನೆ. ಅದನ್ನು ಕಂಡು ದ್ರೌಪದಿ ನಗುತ್ತಾಳೆ. ಕುಂತಿ ಆಕೆಯನ್ನು ಕುರಿತು ಸೀತೆಯಂತೆ ಆದರ್ಶನಾರಿಯಾಗಬೇಕು. ಇಷ್ಟೊಂದು ನಗುವಂಥದ್ದೇನಾಯಿತು? ಎಂದು ಹೇಳುತ್ತಾಳೆ. ಒಂದು ಹೆಣ್ಣು ನಗುವುದು ತಪ್ಪು. ಅದೇ ಹೆಣ್ಣು ಬಿದ್ದರೆ ಗಂಡು ನಗುವುದು ತಪ್ಪಿಲ್ಲ, ಎಂದು ಪುರುಷಪ್ರಧಾನ ವ್ಯವಸ್ಥೆಯ ತಾರತಮ್ಯ ಭಾವನೆಯು ಸ್ತ್ರೀಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡ ಈ ಸಮಾಜದ ಕಠೋರತನವನ್ನು ಸ್ಪಷ್ಟಪಡಿಸುತ್ತದೆ. ಅಷ್ಟಕ್ಕೂ ಕೃತಕ ಭವನ ಪ್ರಸಂಗದಲ್ಲಿ ದ್ರೌಪದಿ ನಕ್ಕಿದ್ದು ತನ್ನ ಅಭಿವ್ಯಕ್ತಿ ಸ್ವಾತಂತ್ರದಿಂದ. ಆದರೆ ಇದನ್ನೇ ತಪ್ಪು ಎಂದು ಹೇಳುವವರ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ. ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟ ನಗರದಲ್ಲಿ ಗುಪ್ತ ನಾಮದಿಂದ ಉಳಿದಿರುತ್ತಾರೆ. ಅಲ್ಲಿ ಕೀಚಕನು ದ್ರೌಪದಿಯನ್ನು ಹೇಗಾದರೂ ಮಾಡಿ ಪಡೆಯಬೇಕೆಂದು ಆಕೆಯನ್ನು "ನಾಳೆ ರಾತ್ರಿ ನನ್ನ ಇಷ್ಟದಂತೆ ನೀನು ಅಂತಃಪುರಕ್ಕೆ ಬರಬೇಕೆಂದು ಹೇಳುತ್ತಾನೆ". ಕೀಚಕನ ಬಲಾತ್ಕಾರವನ್ನು ತಿರಸ್ಕರಿಸುವಲ್ಲಿ, ದ್ರೌಪದಿ ತನ್ನ ಅಸಹಾಯಕ ಸ್ಥಿತಿಯನ್ನು ಧರ್ಮರಾಯನಿಗೆ ಹೇಳುತ್ತಾಳೆ. ಅವನು ಧರ್ಮದ ಜಾಡಿನಲ್ಲಿ ನಡೆಯುವವನು ಹಿರಿತನದಲ್ಲಿ ನಿಂತು ಅವನಾಡುವ ಮಾತುಗಳಿಗೆ ಪ್ರತಿರೋಧವಾಗಿ ದ್ರೌಪದಿಯ ಮಾತುಗಳು ಬೇರೊಂದು ಸ್ವರೂಪವನ್ನು ಪಡೆಯುತ್ತದೆ. "ಗಂಡಸರೇ ಇವರು ನಪುಂಸಕರು ಹೆಂಡತಿಯನ್ನು ಕೌಮುಕನೊಬ್ಬ ಕೆಣಕುತ್ತಿದ್ದರೂ, ಅವನಿಗೆ ಒಪ್ಪಿಸಿ ಷಂಡರಂತೆ ಕುಳಿತಿರುವರು". ಧರ್ಮದ ಹೆಸರಿನಲ್ಲಿ ಶೋಷಿಸುವ ಪರಂಪರೆಯನ್ನು ದ್ರೌಪದಿಯು ಇಲ್ಲಿ ಪ್ರಜ್ಞಾಪೂರಕವಾಗಿ ಪ್ರಶ್ನೆಸುತ್ತಾಳೆ.

ದ್ರೌಪದಿಯ ಪಾತ್ರ ಸೇಡಿನ ಮನೋಭಾವದಿಂದ ಕೂಡಿದೆ. ತನ್ನ ಮಕ್ಕಳನ್ನು ಅಶ್ವತ್ಥಾಮನು ಪಾಂಡವರೆಂದು ಭಾವಿಸಿ, ಕೊಲೆಗೈದ ಗುರ್ತಿಗಾಗಿ ಕತ್ತಿ ನೆಟ್ಟು ಹೋಗಿರುತ್ತಾನೆ. ಆಗ ದ್ರೌಪದಿಯು

"ಭೀಮ ನನ್ನ ಮಕ್ಕಳನ್ನು, ಅಣ್ಣನನ್ನು ಕೊಂದ ಆ ಪಾಪಿ ಅಶ್ವಾತ್ಥಾಮನನ್ನು ಕೊಂದು ಅವನ ಹೆಣವನ್ನು ತಾ! ಒಟ್ಟಿಗೇ ಸಂಸ್ಕಾರ ಮಾಡೋಣ" (ಅದೇ; ಪು. ೧೧೪) ಎಂದು ಅವಳಾಡುವ ಆ ಮಾತುಗಳು ಬೆಂಕಿಯ ಕಿಡಿಗಳಂತೆ ಹೊರಹೊಮ್ಮಿರುವುದಲ್ಲದೆ ಪುರುಷರಿಗೆ ಶಕ್ತಿ ತುಂಬುತ್ತವೆ. ಪುರಾಣ ಮಹಿಳೆಯಾದ ದ್ರೌಪದಿ ಅಂದು ಐದು ಜನ ಗಂಡಂದಿರಿಗೆ ಐದು ಮಕ್ಕಳನ್ನು ಹೆತ್ತಿದ್ದು ಧರ್ಮವಾಗಿತ್ತು. ಆದರೆ ಅದೇ ಪಾತ್ರವನ್ನು ಆಧುನಿಕ ಮಹಿಳೆಯಾಗಿ ನೋಡುವುದರಲ್ಲಿ ಸಾಮಾಜಿಕ ವೈರುಧ್ಯಗಳು ಕಂಡು ಬರುತ್ತದೆ. ಅಲ್ಲದೆ ಇಂತಹ ಚಿಂತನೆಗಳನ್ನು ಕಾದಂಬರಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಐದು ಮಂದಿಗೆ ನಾನು ಮಕ್ಕಳನ್ನು ಹೆತ್ತಿರುವುದು ಅಧರ್ಮವೇ, ಅಶ್ಲೀಲವೇ ಎಂದು ನನ್ನನ್ನು ನಾನೇ ಅನೇಕ ಬಾರಿ ಕೇಳಿಕೊಳ್ಳುತ್ತಿದ್ದೆ. ನನಗೆ ಈ ರೀತಿಯ ಸಂದೇಹ ಹುಟ್ಟಬೇಕಾದ ಅವಶ್ಯಕತೆಯೇ ಇರಲಿಲ್ಲ. ಏಕೆಂದರೆ ಈ ಅರಮನೆ, ಈ ಪರಿವಾರ ಇದನ್ನು ಅಧರ್ಮವೆನ್ನಲಿಲ್ಲ, ಅಶ್ಲೀಲವೆನ್ನಲಿಲ್ಲ. ಆದ್ದರಿಂದ ಮನಸ್ಸಿಗೆ ನೆಮ್ಮದಿ" (ಅದೇ; ಪು. ೪೭). ಇಂತಹ ಆಲೋಚನೆ ಮುಂದಕ್ಕೆ ಮೂಡಿ ಬಂದಿಲ್ಲ. ದ್ರೌಪದಿಯು ಐದು ಜನರನ್ನು ಮೆಚ್ಚಿದ್ದು ತಪ್ಪಿಲ್ಲ, ಅವರಿಂದ ಮಕ್ಕಳನ್ನು ಹೇರುವುದು ತಪ್ಪಲ್ಲ. ಆದರೆ ಇಂದಿನ ವಾಸ್ತವ ಸಂದರ್ಭದಲ್ಲಿ ನಿಂತು ಕಾದಂಬರಿಯನ್ನು ಅನ್ವೇಷಣೆ ಮಾಡಿದಾಗ ತಪ್ಪು ಆಲೋಚನೆಗಳನ್ನು ಹುಟ್ಟಿಸುತ್ತವೆ. ಅಂದು ಪಂಚಪತಿತ್ವ ಸಮ್ಮತವಾಗಿತ್ತು ಇಂದು ಅಸಮ್ಮತವಾಗುತ್ತದೆ. ಬಹುಪತಿತ್ವಕ್ಕೆ ಸಮಾಜ ಕಟ್ಟುವ ಬೆಲೆಯೇ ಬೇರೆ. ದ್ರೌಪದಿ ಕಾದಂಬರಿ ಇಂತಹ ಗೊಂದಲಗಳಿಗೆ ಸಿಲುಕದೇ ಮುನ್ನಡೆಯುತ್ತದೆ. ಪಂಚವಲಭೆಯಾಗಿ ಪಡಬಾರದ ಕಷ್ಟ-ನಿಷ್ಠುರ ಅವಮಾನಗಳನ್ನು ಅನುಭವಿಸಿ, ಕೊನೆಗೆ ಎಲ್ಲವೂ ಕೈಗೂಡಿತು ಎನ್ನುವ ಸಂದರ್ಭದಲ್ಲಿ ಅಶ್ವಾತ್ಥಾಮನ ದುಡುಕು ಪ್ರದರ್ಶನೆಯಿಂದಾಗಿ, ತನ್ನ ಐವರು ಮಕ್ಕಳನ್ನು ಕಳೆದುಕೊಂಡು ಕಂಬನಿ ಹರಿಸುವ ತಾಯಿಯಾಗಿ ದ್ರೌಪದಿ ಮಹಾಭಾರತದುದ್ದಕ್ಕೂ ತುಂಬಿಕೊಂಡಿದ್ದಾಳೆ. ಪಂಚಪತಿತ್ವದ ಕಳಂಕ ಹೊತ್ತು ಆದಿಯಿಂದ ಅಂತ್ಯದವರೆಗೂ ಅವಮಾನವನ್ನೇ ಉಡುಗೊರೆಯಾಗಿ ಪಡೆದ ದ್ರೌಪದಿಯು ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಲೇ ಜೀವನವನ್ನು ಸಾಗಿಸುತ್ತಾಳೆ. ಹೀಗೆ ಪುರಾಣ ಪಾತ್ರವನ್ನು ಆಧುನಿಕ ನೆಲೆಯಿಂದ ನೋಡುವಲ್ಲಿ ಮೂಲ ಕತೆಯಲ್ಲಿ ಮೌನವಾಗಿದ್ದ ಪಾತ್ರವು ಇಲ್ಲಿ ಮಾತನಾಡುತ್ತದೆ. ಸ್ತ್ರೀವಾದದ ನೆಲೆಯಲ್ಲಿ ತನ್ನನ್ನು ಶೋಷಿಸುವ ಪುರುಷ ಪ್ರಭುತ್ವವನ್ನು ಖಂಡಿಸುವುದರ ಮೂಲಕ ಬಿಡುಗಡೆ ಹೊಂದಲು ಹಂಬಲಿಸುತ್ತದೆ. ಸಮಾಜದಲ್ಲಿ ಶೋಷಣೆಗೆ ಒಳಗಾಗುವ ಹೆಣ್ಣನ್ನು ಜಾಗೃತವಾಗುವಂತೆ, ಶೋಷಣೆಯಿಂದ ನರಳದೇ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾ ಕಾದಂಬರಿ ಬೆಳೆಯುತ್ತದೆ.

ಹುಟ್ಟಿನೊಂದಿಗೆ ದಹಿಸುತ್ತಾ ಬಂದ ದ್ರೌಪದಿ ಸದಾ ಕಷ್ಟದ ಬೇಗೆಯಲ್ಲಿ ಬೆಂದು ಹದ ಗೊಂಡಂತಹವಳು. ಆಕೆಯು ನಿಷ್ಕಾರಣವಾಗಿ ಯಾವುದಕ್ಕೂ ಒಳಪಟ್ಟಾಗಲೂ ಸಕಾರಣವಾಗಿಯೇ ವರ್ತಿಸಬಲ್ಲ ಗುಣಸಂಪನ್ನ ಶೀಲೆ. ಆಕೆ ಗಂಡಂದಿರೊಂದಿಗೆ ಸಹಕರಿಸಲೂಬಲ್ಲಳು. ಅತಿಯಾದಾಗ ಪ್ರಶ್ನಿಸಬಲ್ಲವಳೂ ಹೌದು. ಅವಳು ಸಭಾ ಭವನದಲ್ಲಿ ಯಾತನೆಯನ್ನು ತೋಡಿಕೊಳ್ಳುವಲ್ಲಿನ ಹೃದಯ ವಿದ್ರಾವಕತೆಯ ಯಾತನಾಮಯ ಜೀವಿಯಂತೆಯೇ, ದುರ್ಯೋಧನನ್ನು ಒದ್ದು ಬರಬಲ್ಲ ಧೃತಿಮತಿಯ

ಗಟ್ಟಿಗಿತ್ತಿಯೂ ಆಗಿದ್ದಾಳೆ. ಪಾಂಡವರೊಂದಿಗೆ ವನವಾಸದ ಕಷ್ಟದಲ್ಲೂ ಅಜ್ಞಾತವಾಸದ ಅಪಮಾನದಲ್ಲಿ ಬೇಯುವಂತವಹಳು. ಕೊನೆಗೆ ಗಂಡಂದಿರ ಕಷ್ಟಕಳೆದು ಸುಖವಾಗಿರುವ ಕಾಲದಲ್ಲಿ ಪುತ್ರ ಶೋಕವನ್ನು ಅನುಭವಿಸುತ್ತಾಳೆ.

ದ್ರೌಪದಿಯು ಮಹಾಭಾರತದ ಕೇಂದ್ರಶಕ್ತಿಯಾಗಿ ಹೇಗೆ ಕಾಣಿಸಿಕೊಂಡಳೂ ಹಾಗೆಯೇ ಅನೇಕ ದುರಿತಕ್ಕೊಳಗಾಗಿ ದುಃಖಿನಿಯಾದದ್ದು ಇಡಿಯಾಗಿ ಕಂಡು ಬರುತ್ತದೆ. ಆದರೆ ಅದನ್ನೆಲ್ಲಾ ಎದುರಿಸಬಲ್ಲ ಅನೇಕ ಬಗೆಯನ್ನು ಆಕೆ ಆಯ್ಕೆ ಮಾಡಿಕೊಂಡು ಎದುರಿಸಿದ್ದುಂಟು. ಕೆಲವೊಂದು ಮಹಾಭಾರತದಲ್ಲಿ ಅವಳನ್ನು ಆದಿಪರಾಶಕ್ತಿಯೆಂದು ಕರೆದು ಶಕ್ತಿಮಾತೆಯನ್ನಾಗಿಸಿದ್ದಾರೆ. ಇದರಿಂದಾಗಿ ಇಡೀ ಭಾರತದ ಯುದ್ಧ ವಿಜಯದ ಮಾಲೆಯನ್ನೇ ಅವಳಿಗೆ ಹಾಕಿದೆ. ಇದು ಅವಳ ಜೊತೆಗೆ ಸ್ತ್ರೀಯ ವಿಜಯವೂ ಆಗಿವೆ. ಏನೇಯಾದರೂ ದ್ರೌಪದಿಯು ಭಾರತ ಕಥೆಯ ಬೆಳಗುದೀಪವಾಗಿ ಉರಿದಂತವಳು. ಅದು ಬೆಳಗಿ ಬೆಳಕನ್ನು ಬೀರಬಹುದು; ಕೈಇಟ್ಟವರನ್ನು; ಸುಡಲೂಬಹುದು. ಅದರಂತೆ ಭಾರತದಲ್ಲಿ ಬೆಳಗಿದವಳೂ ಆಗಿದ್ದಾಳೆ. ಇಂತಹ ಪಾತ್ರ ಚಿತ್ರಣವೂ ವಾಸ್ತವ ಬದುಕಿಗೆ ಹತ್ತಿರವಾದದ್ದು ಎಂದರೆ ಅತಿಶಯೋಕ್ತಿಯಾಗಲಾರದು.

ಹೀಗೆ ಜನಮನದಲ್ಲಿ ಒಂದು ಕಾವ್ಯ ಪ್ರಭಾವ ಬೀರುವಲ್ಲಿ ಅದರ ಕತೆ ಮಾತ್ರ ಕಾರಣವಾಗಿರದೆ, ಅದರ ಪಾತ್ರಗಳು, ಅವು ಎತ್ತಿಹಿಡಿದ ಮೌಲ್ಯಗಳು, ಬದುಕಿದ ರೀತಿ, ಇವೆಲ್ಲವೂ ಕಾರಣವಾಗಿರುತ್ತವೆ. ಮಹಾಭಾರತದಲ್ಲಿ ಬರುವ ಎಲ್ಲ ಪಾತ್ರಗಳೂ ಮುಖ್ಯವೇ. ಅದಕ್ಕೆ ಅನೇಕ ನಾಯಕರು ವ್ಯಾಸರಿಗೆ ಧರ್ಮರಾಯ ನಾಯಕನಾದರೆ, ಪಂಪನಿಗೆ ಅರ್ಜುನ, ರನ್ನನಿಗೆ ಭೀಮ ಕುಮಾರವ್ಯಾಸನಿಗೆ ಕೃಷ್ಣ. ಆದರೆ ಸ್ತ್ರೀಪಾತ್ರಗಳಲ್ಲಿ ಎದ್ದು ನಿಲ್ಲುವ ಪಾತ್ರವೆಂದರೆ ದ್ರೌಪದಿಯೊಬ್ಬಳೇ. ಅಪ್ರಾಕೃತಿಕವಾದ ಜನನ, ಮನೋಹರ ವಾದ ರೂಪ, ಹೆಂಗಸಿಗೆ ಸಾಮಾನ್ಯವಾಗಿ ಸಹಜವಲ್ಲದ ಕ್ಷಾತ್ರಪ್ರವೃತ್ತಿ, ಬೇರಾವ ಕಾವ್ಯದಲ್ಲೂ ಕಂಡು ಬಾರದ 'ಬಹುಪತಿತ್ವದ' ತೊಡಕು - ಇವು ಒಟ್ಟಾಗಿ ಸೇರಿ ಅವಳ ಪಾತ್ರವನ್ನು ವಿಶಿಷ್ಟವಾಗಿಸಿವೆ. ಅವಳ ವ್ಯಕ್ತಿತ್ವ ಅನೇಕ ಕಾರಣಗಳಿಂದ ಅನೇಕ ಘಟ್ಟಗಳಲ್ಲಿ ಒಮ್ಮೊಮ್ಮೆ ಮೆಚ್ಚುಗೆಯೂ, ಒಮ್ಮೊಮ್ಮೆ ಅಸಮಧಾನಕ್ಕೂ, ಒಮ್ಮೊಮ್ಮೆ ಅನುಕಂಪಿಗೂ ಪಾತ್ರವಾಗಿ ನಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳುತ್ತದೆ. "ಮಹಾಭಾರತದಲ್ಲಿ ಯಾರಾದರೂ ಗಂಡಸಿದ್ದರೆ ಅದು ದ್ರೌಪದಿ". "ಹೆಣ್ಣು ವೀರಳಾದಾಗ ಹೇಗೆ ನಡೆಯಬೇಕು ಎಂದು ಯಾರಾದರೂ ಕೇಳಿದರೆ ಮಹಾಭಾರತ ಹೇಳುವುದು ಒಂದೇ ಉತ್ತರ. ದ್ರೌಪದಿಯಂತೆ ನಡೆಯಬೇಕು" ಎಂಬ ವಿಮರ್ಶೆಯ ಮಾತುಗಳು ದ್ರೌಪದಿಯ ಪಾತ್ರವನ್ನು ಮೆಚ್ಚಿ ಆಶ್ಚರ್ಯದಿಂದ ತೆಗೆದಿರುವ ಉದ್ಗಾರಗಳು. ಕಾವ್ಯಗಳಲ್ಲಿ ಗಟ್ಟಿಯಾಗಿ ನೆಲೆಯೂರಬಲ್ಲ ಇಂತಹ 'ದ್ರೌಪದಿ' ಪಾತ್ರವನ್ನು ಪ್ರಭಾವತಿಯವರು ತಮ್ಮ ಕಾದಂಬರಿಯಲ್ಲಿ ಮುಖ್ಯ ಕೇಂದ್ರಬಿಂದುವನ್ನಾಗಿಸಿದ್ದಾರೆ. ಅಲ್ಲದೆ ಅದೇ ಹೆಸರನ್ನು ತಮ್ಮ ಕೃತಿಯ ಶೀರ್ಷಿಕೆಯನ್ನಾಗಿ ಮಾಡಿ, ಸ್ತ್ರೀವಾದಿ ದೃಷ್ಟಿಕೋನದಲ್ಲಿ ಕೆಲವೊಂದು ವ್ಯತ್ಯಾಸ ಗಳೊಂದಿಗೆ ಕಾದಂಬರಿಯನ್ನು ಚಿತ್ರಿಸಿದ್ದಾರೆ.

೫.೨. ಕುಂತಿ

ಮಹಾಭಾರತದ ಕಥೆಯ ಸ್ಮರಣೀಯ ಪಾತ್ರಗಳಲ್ಲಿ ಕುಂತಿಯ ಪಾತ್ರವೂ ಒಂದಾಗಿದೆ. ಕುಂತಿಯು ಹುಟ್ಟಿನಿಂದಲೂ ಬದುಕಿನ ಕೊನೆಗಳಿಗೆಯವರೆಗೂ ಬದುಕನ್ನು ಅತ್ಯಂತ ಬಿಕ್ಕಟ್ಟಿನ ನೆರಳಿನಲ್ಲಿಯೇ ಮುಂದುವರೆಸುತ್ತಾಳೆ. ರೋಗಗ್ರಸ್ತ ಗಂಡನೊಂದಿಗೆ ಸಂಸಾರ ನಡೆಸಿ ಮಕ್ಕಳ ಮೇಲಿನ ಮಮತೆಯಿಂದ ಕಾಡು - ಮೇಡು ಅಲೆದು ಅನುಭವಿಸಿದ್ದನ್ನು ಹೇಳಲಾರದೇ ತೊಳಲಾಟ, ಸಂಕಟಗಳಿಂದಲೇ ಬದುಕನ್ನು ಸವೆಸುತ್ತಾಳೆ. ಈ ರೀತಿಯ ನಡವಳಿಕೆಗಳಿಂದಲೇ ಕುಂತಿಯು ಆಪ್ತಳಾಗುತ್ತಾಳೆ. ಕುಂತಿಯ ಮೊದಲ ಹೆಸರು 'ಪೃಥಾ' ಅಂದರೆ 'ಭೂವಿ' ಎಂದರ್ಥ. ಕುಂತಿ ಭೋಜನಿಗೆ ಬಹುಕಾಲದವರೆಗೆ ಮಕ್ಕಳೇ ಇರಲಿಲ್ಲ. ಆದ್ದರಿಂದ ತನ್ನ ತಂಗಿಯಾದ ಬೃಹನ್ಮತಿಯ ಮಗಳನ್ನು ದತ್ತು ಪಡೆಯುತ್ತಾನೆ. ಅಂದಿನಿಂದ 'ಪೃಥಾ' ಎನ್ನುವ ಹೆಸರಿಗೆ ಬದಲಾಗಿ ಕುಂತಿ ಎಂಬ ಹೆಸರು ಬಂದಿತು. ಕುಂತಿಯು ಕುಂತಿ ಭೋಜನ ಸಾಕು ಮಗಳಾಗಿ ಅರಮನೆಯಲ್ಲಿ ಬೆಳೆಯುತ್ತಾಳೆ. ಒಂದು ದಿನ ದುರ್ವಾಸ ಮುನಿಗಳು ಅರಮನೆಗೆ ಬರುತ್ತಾರೆ. ತಂದೆಗೆ ಅವರ ಉಪಚಾರದ ಬಗ್ಗೆ ಗೊಂದಲ ಉಂಟಾದಾಗ ಕುಂತಿಯೇ ಉಪಚಾರಕ್ಕೆ ನಿಂತು ತಂದೆಯ ಗೊಂದಲವನ್ನು ದೂರ ಮಾಡುತ್ತಾಳೆ. ದುರ್ವಾಸರ ಸಹವಾಸ ಮಾಡಿ ಗರ್ಭ ಧರಿಸುತ್ತಾಳೆ. ಸಮಾಜಕ್ಕೆ ಹೆದರಿ ಕನ್ಯೆಯಾದಾಗಲೇ ಮಗುವನ್ನು ಪಡೆದ ಕಾರಣ ಆ ಮಗುವನ್ನು ಬೆಸ್ತನ ಮನೆಯಲ್ಲಿ ಜನ್ಮ ನೀಡಿ ಅಲ್ಲಿಯೇ ಬಿಟ್ಟು ಬರುತ್ತಾಳೆ. ಇದು ಈ ಕಾದಂಬರಿಯಲ್ಲಿನ ಬದಲಾವಣೆಯಾದರೆ, ಮೂಲದಲ್ಲಿ ಕನ್ಯತನದಲ್ಲಿ ದುರ್ವಾಸರ ವರದ ಫಲವಾಗಿ ಸೂರ್ಯಮಂತ್ರ ಜಪದಿಂದ ಕರ್ಣನ ಜನನವಾಗುತ್ತದೆ. ಆದರೆ ಇಲ್ಲಿ ದುರ್ವಾಸ ಮುನಿಯ ಕುಡಿಕೆಯಿಂದ ಅವಳು ಗರ್ಭ ಧರಿಸುತ್ತಾಳೆ. ಲೋಕಾಪವಾದಕ್ಕೆ ಹೆದರಿ ಗಂಗೆಯಲ್ಲಿ ಮಗುವನ್ನು ತೇಲಿಬಿಡದೆ, ಬೆಸ್ತ ಮತ್ತು ಆತನ ಹೆಂಡತಿಯಾದ ರಾಧೆಯ ಮನೆಯಲ್ಲಿ ಕರ್ಣನಿಗೆ ಜನ್ಮ ನೀಡುತ್ತಾಳೆ. ರಾಧೆಯು ತಾನು ಸತ್ತು ಹೋದರೆ ಕುಂತಿ ಮಗುವನ್ನು ಗುರುತಿಸುವ ಸಲುವಾಗಿ ಮಗುವಿನ ಮೇಲೆ ಹಸಿರು ಹಚ್ಚೆ ಹಾಕುತ್ತಾಳೆ. ಎದೆ ತುಂಬಾ ಒಳ್ಳೆ ಕವಚ ಇದ್ದಂಗೆ ಅದೇ ಕಾಪಾಡಲಿ ಎಂದು ಸಹ ಹಾರೈಸುತ್ತಾಳೆ. "ಈ ದಂಪತಿಗಳಿಗೆ ತನ್ನ ಮಗುವಿನ ತಂದೆ ಮಹರ್ಷಿಗಳಾದ ದುರ್ವಾಸ ಎಂದು ಹೇಳಿದರೂ ಅವರಿಗೆ ಅರ್ಥವಾಗುತ್ತದೆಯೊ ಇಲ್ಲವೋ, ಅಲ್ಲದೆ ತನ್ನ ಬಗ್ಗೆ ಏನು ತಿಳಿಯುತ್ತಾರೋ ಜಾರಿಣಿ, ವ್ಯಭಿಚಾರಿಣಿ", ಎಂದೆಲ್ಲಾ ಯೋಚಿಸಿ ಈ ಬೆಸದಂಪತಿಗಳ ಮಗನಾಗಿಯೇ ಬೆಳೆಯಲು ಬಿಡುತ್ತಾಳೆ. ಇಲ್ಲಿ ದುರ್ವಾಸರು ರಾಜಸತ್ತೆಯಲ್ಲಿ ನಿಂತು ಹೆಣ್ಣನ್ನು ಅನುಭವಿಸಿದರು. ಅಂತಹ ವ್ಯವಸ್ಥೆಗೆ ಕುಂತಿ ಭೋಜನೇ ಕಾರಣನಾಗುತ್ತಾನೆ. ಆದರೆ ಇಲ್ಲಿ ಕುಂತಿಯು ತನ್ನ ಮಗನಿಂದ ದೂರವಿದ್ದು ಇನ್ನೊಬ್ಬ ರಾಜನ ಮಡದಿಯಾಗಿ ಹೋಗುತ್ತಾಳೆ. ಇದು ಯಾಜಮಾನ ಸಂಸ್ಕೃತಿಯ ಕಪಟತನವೆಂದು ಕಾದಂಬರಿ ಹೇಳುತ್ತದೆ.

ಪುರಾಣ ಪಾತ್ರದ ಮೂಲಕ ಸ್ತ್ರೀ ಸಂವೇದನೆಯನ್ನು ವ್ಯಕ್ತಪಡಿಸುವುದನ್ನು ಇಲ್ಲಿ ನೋಡಬಹುದು. ಕುಂತಿ ಭೋಜನ ಅರಮನೆಗೆ ದುರ್ವಾಸರು ಬರುತ್ತಾರೆಂಬುದು ಅವರಿಗೆ ಉಪಚಾರದಲ್ಲಿ ವ್ಯತ್ಯಾಸವಾದಲ್ಲಿ ಶಾಪ ಕೊಟ್ಟರೆ ಎಂಬ ತಂದೆಯ ಆಂತಕವನ್ನು ತಿಳಿದ ಕುಂತಿಯು ತಾನೆ ಉಪಚಾರಕ್ಕೆ ನಿಲ್ಲುತ್ತಾಳೆ.

ಅರಮನೆಗೆ ಬಂದ ದುರ್ವಾಸರನ್ನೇ ಹೀಗೆ ಕೇಳುತ್ತಾಳೆ. ಮಹರ್ಷಿಗಳೇ ನೀವು ತುಂಬಾ ಕೋಪಿಷ್ಟರಂತೆ, ನಮ್ಮ ತಂದೆಗೆ ಅದೇ ಭಯ ನಿಮ್ಮ ಉಪಚಾರದಲ್ಲಿ ಎಲ್ಲಿ ಸ್ವಲ್ಪ ಊನವಾದರೂ ನಮಗೆಲ್ಲಿ ಶಾಪ ಕೊಡುವಿರೋ, ಎಲ್ಲಿ ಕೋಪಗೊಳ್ಳುವಿರೋ ಎಂದು ಅವರ ಕಳವಳ. ಆದರೆ ನನಗೆ ಅನ್ನಿಸುತ್ತದೆ. ಲೋಕಕಲ್ಯಾಣಕ್ಕಾಗಿ ಇಂದ್ರಿಯಗಳನ್ನು ಜಯಿಸಿ, ಮನೆ ಮಠಗಳನ್ನು ತೊರೆದು, ಕಾಡಿನಲ್ಲಿ ಗುಡಿಸಿಲಲ್ಲಿ, ಬ್ರಹ್ಮಚರ್ಯದಿಂದ ವಾಸಿಸುವ ನೀವು ನಮ್ಮಂತಹ ಹುಲು ಮಾನವರ ಮೇಲೆ ಕೋಪಗೊಂಡು ಶಪಿಸಿದರೆ (ಪ್ರಭಾವತಿ.ಎಸ್.ವಿ; ೧೯೯೭; ಪು. ೭) ಕುಂತಿಯ ಮುಂದಿನ ಮಾತು ದುರ್ವಾಸರಿಗೆ ಕೇಳಿಸಲಿಲ್ಲ. ಇಂದ್ರಿಯಗಳನ್ನು ಜಯಿಸಿ, ಬ್ರಹ್ಮಚರ್ಯದಿಂದ ಎಂಬ ಮಾತುಗಳೇಕೋ ಅವರನ್ನು ಶೂಲದಿಂದ ತಿವಿದಂತೆ ಮತ್ತೆ ಮತ್ತೆ ಮನಸ್ಸಿನಲ್ಲಿ ಪ್ರತಿ ಧ್ವನಿಸಿತು. ದುರ್ವಾಸರ ಕೋಪ, ಶಾಪಗಳಲ್ಲಿ ಕುಂತಿಗೆ ನಂಬಿಕೆ ಇರುವುದಿಲ್ಲ. ಅವರ ಜಪ-ತಪಗಳು ಲೋಕಕಲ್ಯಾಣಕ್ಕಾಗಿ ಇರಬೇಕೇ ವಿನಃ ಅನ್ಯತಹ ಇನ್ನೊಬ್ಬರನ್ನು ಶಿಕ್ಷಿಸುವುದಕ್ಕಲ್ಲ ಅದು ಅವರಿಗೆ ಶೋಭೆಯು ಅಲ್ಲ ಅನ್ನುವುದು ಇಲ್ಲಿ ಕುಂತಿಯ ಪಾತ್ರದೊಂದಿಗೆ ಪ್ರತಿಭಟಿತವಾಗಿದೆ. ದುರ್ವಾಸರನ್ನು ಪ್ರಶ್ನೆಸುವಲ್ಲಿ ಕುಂತಿಯು ಪುರಾಣ ಮಹಿಳೆಯಂತೆ ಕಾಣಿಸುವುದಿಲ್ಲ. ಬದಲಾಗಿ ಸ್ತ್ರೀವಾದಿಯಾಗಿ ದುರ್ವಾಸರ ವ್ಯಕ್ತಿತ್ವವನ್ನೇ ಕುರಿತು ಪ್ರಶ್ನೆಸುತ್ತಾಳೆ. ಸೃಷ್ಠಿ ಕ್ರಿಯೆಯಲ್ಲಿ ಗಂಡು ಹೆಣ್ಣು ಸಮಭಾಗಿಗಳಾದರೂ ಮಗುವಿನ ಜನನಕ್ಕೆ, ಪಾಲನೆ ಪೋಷಣೆಗೆ ಹೆಣ್ಣಿಗಿರುವಂತಹ ಜವಾಬ್ದಾರಿ ಗಂಡಸಿಗಿಲ್ಲ. ಕಾದಂಬರಿಯಲ್ಲಿ ದುರ್ವಾಸರ ಬಗೆಗೆ ಕುಂತಿ ಹೇಳುವ ಮಾತುಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಅಷ್ಟೇ ಏಕೆ ದುರ್ವಾಸರಿಗೆ ತನಗೊಬ್ಬ ಮಗನಾಗಲಿದ್ದಾನೆಂಬ ಅಂಶವೇ ತಿಳಿಯದೋ ಏನೋ ತಿಳಿಯುವುದಾದರೂ ಹೇಗೆ? ಅಂದು ಅರಮನೆಯಿಂದ ಹೋದವರು ಎಲ್ಲಿದ್ದಾರೋ ಎಲ್ಲಿಗೆ ಹೋದರೋ ಒಂದು ತಿಳಿಯದಲ್ಲ (ಅದೇ.,; ಪು. ೧೨).

ಕುಂತಿಯ ಮನಸ್ಸು ಸದಾ ಕರ್ಣನನ್ನು ಕುರಿತು ಚಿಂತಿಸುವುದರಿಂದ ಮದುವೆಗೆ ಒಪ್ಪುವುದಿಲ್ಲ ಎಂದು ತಿಳಿದ ಕುಂತಿ ಭೋಜನು ಉಪಾಯ ಮಾಡಿ ಮಗಳ ಮನಸ್ಸನ್ನು ಬದಲಿಸುತ್ತಾನೆ. ಕುಂತಿಗೆ ಕೇಳುವಂತೆ, ಅಂತಃಪುರದಲ್ಲಿ ಪಿಸು ಮಾತು ಹರಡಿತು. ಬೆಸ್ತ ದಂಪತಿಗಳಿಗೆ ಗಂಗಾ ನದಿಯಲ್ಲಿ ಒಂದು ಗಂಡು ಮಗು ದೊರೆಕಿತಂತೆ ಅದನ್ನು ತೆಗೆದುಕೊಂಡು ಹಸ್ತಿನಾವತಿಯ ಕಡೆಗೆ ಹೋದರು ಎನ್ನುವ ವಿಷಯ ತಿಳಿದ ಕುಂತಿ ತನ್ನ ಅಂತರಂಗದಲ್ಲಿಯೇ ಕುಸಿಯ ತೊಡಗಿದಳು. ಅಷ್ಟರಲ್ಲೇ ಕುಂತಿ ಭೋಜನು ಸ್ವಯಂವರವನ್ನು ಏರ್ಪಾಡಿಸುತ್ತಾನೆ. ಆತನ ಆದೇಶದಂತೆ ಸ್ವಯಂವರದ ಆಹ್ವಾನ ಹೊತ್ತ ದೂತರು ಆರ್ಯಾವರ್ತದ ದೇಶಗಳಿಗೆಲ್ಲಾ ಹೋದರು. ಒಬ್ಬೊಬ್ಬ ರಾಜನ ವಾಸ್ತವ್ಯಕ್ಕೂ ಒಂದೊಂದು ಅರಮನೆಯೇ ಸಿದ್ಧವಾಯಿತು.

ಕುಂತಿಯ ಬಾಳಿನಲ್ಲಿ ಇತ್ತೀಚೆಗೆ ನಡೆದ ಘಟನೆಗಳಿಂದ ಘಾಸಿಗೊಂಡಿದ್ದ ಕುಂತಿ ಭೋಜನಿಗೆ ತುಂಬಾ ಸುಂದರನೂ, ಪರಾಕ್ರಮಿಯೂ ಆದ ರಾಜಕುಮಾರನೊಬ್ಬನಿಗೆ ಮಗಳನ್ನು ಕೊಟ್ಟು ಬೇಗನೇ ಮದುವೆ ಮಾಡಬೇಕೆಂಬ ಹಂಬಲ. ಅವಳು ಮದುವೆಯಾಗಿ ನಾಲ್ಕಾರು ಮಕ್ಕಳನ್ನು ಪಡೆದು ಕರ್ಣನನ್ನು ಮರೆಯುತ್ತಾಳೆನೋ ಎಂಬ ದೂರದ ಆಸೆಯಿಂದ ಸ್ವಯಂವರವನ್ನು ಏರ್ಪಡಿಸುತ್ತಾನೆ. ಆದರೆ ಕುಂತಿಯು

ಕರ್ಣನನ್ನು ಎಂದು ಮರೆಯುವುದಿಲ್ಲ. ಕುಂತಿಯ ಮನಸ್ಸಿನಲ್ಲಾದ ಅಸಹನೆ, ಅಸಹಾಯಕತೆ, ದುಗುಡದ ಚಿತ್ರಣವನ್ನು ಮನಸ್ಸಿಗೆ ತಟ್ಟುವಂತೆ ಕಾದಂಬರಿಯಲ್ಲಿ ಕಟ್ಟಿಕೊಡಲಾಗಿದೆ. ಸ್ವಯಂವರದಲ್ಲಿ ಕುಂತಿಯು ಎಲ್ಲ ರಾಜರ ಪರಿಚಯದೊಂದಿಗೆ ಹಸ್ತಿನಾವತಿಯ ಚಕ್ರವರ್ತಿಯೂ, ಚಂದ್ರ ವಂಶದವನೂ, ಶಾಂತನು ಸತ್ಯವತಿಯರ ಮೊಮ್ಮಗನೂ ಆದ ಪಾಂಡುಮಹಾರಾಜ ಎಂದು ಬಿರುದು ಬಾವಲಿಗಳು ಕಿವಿಗೆ ಬಿದ್ದರು. ಹಸ್ತಿನಾವತಿ ಎಂಬ ಪದ ಕಿವಿಗೆ ಬೀಳುತ್ತಲೇ ಬೆಸ್ತ ದಂಪತಿಗಳ ನೆನಪಾಗಿ ಅಲ್ಲಿಗೆ ಹೋದರೆ ತನ್ನ ಮಗನನ್ನು ನೋಡಬಹುದು ಎಂಬ ಆಸೆಯಿಂದ ಪಾಂಡು ರಾಜನಿಗೆ ವರುಣ ಮಾಲೆಯನ್ನು ಹಾಕುತ್ತಾಳೆ. ಪಾಂಡುರಾಜನ ದೇಹಕ್ಕೆ ಮೋಹಿತಳಾಗಿದ್ದ ಕುಂತಿಯ ಆಸೆ ಆಕಾಂಕ್ಷೆಗಳನ್ನು ನಿಷ್ಫಲಗೊಳಿಸುತ್ತಾನೆ. ಇದನ್ನು ಪ್ರತಿಭಟಿಸಿದಾಗ "ಕುಂತಿ ನಿನ್ನ ಅಧಿಕ ಪ್ರಸಂಗ ಅತಿಯಾಯಿತು. ನನಗೆ ಏನಾಗಿದೆ ಎಂದು ನಿನ್ನ ಮಾತಿನ ಅರ್ಥ? ನನಗೆ ಕಾಯಿಲೆಯೇ ಕಸಾಲೆಯ ಎಂದು ದುರುಗುಟ್ಟಿದ. ಆಗ ಕುಂತಿಯು ಇದು ಕಾಯಿಲೆ ಕಸಾಗಿಗಿಂತಲೂ ಒಂದು ಕೈ ಮೇಲು ಎಂದು ಸಮಾಧಾನವಾಗಿ ಉತ್ತರಿಸಿದಾಗ ಪಾಂಡು ರಾಜನು ಕೈ ಎತ್ತಿ ಅವಳ ಕೆನ್ನೆಗೆ ಹೊಡೆಯಲು ಸಿದ್ಧನಾದಾಗ ಅವಳ ಕೈಯನ್ನು ಬಲವಾಗಿ ಹಿಡಿದು ನಿನ್ನ ಈ ಅಹಂಕಾರಕ್ಕೆ ಬದಲಾಗಿ ಇದ್ದುದ್ದನ್ನು ಇದ್ದಂತೆ ಒಪ್ಪಿಕೊಳ್ಳುವ ಬುದ್ಧಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು" (ಅದೇ; ಪು; ೧೮). ಇಲ್ಲಿ ಪಾಂಡುರಾಜ ತನ್ನ ದೌರ್ಬಲ್ಯದಿಂದ ಕುಂತಿಯ ಬಯಕೆಗಳನ್ನು ಶಮನ ಮಾಡುವ ಶಕ್ತಿಯನ್ನು ಪಡೆದುಕೊಂಡಿಲ್ಲ. ಇದನ್ನು ಅಧಿಕಾರದ ಬಲದಿಂದ ಮುಚ್ಚಿಕೊಳ್ಳುವ ಸಲುವಾಗಿ ದಂಡಿಸಲೂ ಹೋದಾಗ ಕುಂತಿಯು ತಡೆಯನ್ನೊಡ್ಡುತ್ತಾಳೆ. ಈ ಪ್ರಸಂಗವನ್ನು ಸ್ತ್ರೀವಾದ ತಾತ್ವಿಕ ಚೌಕಟ್ಟಿನೊಳಗಿಟ್ಟು ನೋಡಲಾಗಿದೆ. ಹೆಣ್ಣನ್ನು ಶೋಷಿಸುವ ಪುರುಷ ಸಮುದಾಯವನ್ನು ಲೇಖಕಿಯು ಇಲ್ಲಿ ಕುಂತಿಯ ಪಾತ್ರದ ಮೂಲಕ ಪ್ರಶ್ನಿಸುತ್ತಾರೆ, ಮೂಲದಲ್ಲಿ ಈ ರೀತಿಯ ಸನ್ನಿವೇಶವಿಲ್ಲ.

ಸ್ವಯಂವರದಲ್ಲಿ ಪಾಂಡುರಾಜನ್ನು ವರಿಸಿದ ಮೇಲೆ ಅವನಿಂದ ಸಮಾಗಮವಾದಾಗ ಅವನು ನಪುಂಸಕನೆಂದು ತಿಳಿದು ಖಂಡಿಸುತ್ತಾಳೆ. ಆಗ ಪಾಂಡುರಾಜನು ನಿನಗೆ ಸವತಿಯನ್ನು ತರುತ್ತೇನೆಂದು ಹೇಳಿದಾಗ ಕುಂತಿಯು ನನಗೊಬ್ಬ ಸವತಿಯನ್ನು ತರುವನಂತೆ ಅವನ ಗಂಡಸುತನಕ್ಕೆ ನಾನು ಸಾಲುವುದಿಲ್ಲ ಎನ್ನುವಲ್ಲಿ ಕುಂತಿಯು ರಾಜಸತ್ತೆಯ ಪೌರುಷಕ್ಕೆ ಸಾವಲು ಹಾಕುತ್ತಾಳೆ. ಹೆಣ್ಣಿಗೆ ಮೋಸ ಮಾಡುವ ಪುರುಷ ಪ್ರಧಾನ ಸಮಾಜದಲ್ಲಿ ಶೋಷಣೆಗೆ ಒಳಗಾಗುವ ಹೆಣ್ಣುಗಳ ಪ್ರತಿನಿಧಿಯಾಗಿ ಕಾದಂಬರಿಯಲ್ಲಿನ ಕುಂತಿ ಪಾತ್ರವೂ ಬೆಳೆಯುತ್ತದೆ. ಪಾಂಡು ರಾಜನು ಕುಂತಿಯ ಮಾತಿನಿಂದ ಅವಳಿಗೆ ಸವತಿಯನ್ನು ತರುವುದಾಗಿ ದಿಗ್ವಿಜಯಕ್ಕೆ ಹೊರಡುತ್ತಾನೆ. ಭೀಷ್ಮ, ಕೃಪ, ಸತ್ಯವತಿ ಮೊದಲಾದ ಹಿರಿಯರು ಮೊಮ್ಮಗನ ಪರಾಕ್ರಮವನ್ನು ಹೊಗಳುತ್ತಾರೆ. ಆಗ ಕುಂತಿಯು ಸೈನಿಕರು ಯುದ್ಧ ಮಾಡಿ ಗೆಲ್ಲುತ್ತಾರೆ. ಇವನು ಮಾಡುವುದೇನು? ಯುದ್ಧವೆಂದರೆ ಸಾಮಾನ್ಯ ಸೈನಿಕರ ಸಾವು ಅವರ ಹೆಂಡತಿಯರೆಲ್ಲಾ ವಿಧವೆಯರಾಗುತ್ತಾರೆ. ಮಕ್ಕಳು ಅನಾಥರಾಗುತ್ತಾರೆ. ಈ ರಕ್ತಪಾತವನ್ನು, ಇವರು ದಿಗ್ವಿಜಯ ಎನ್ನುತ್ತಾರೆಂದು ಮರುಗುತ್ತಾಳೆ. ಕುಂತಿಯ ಈ ಮಾತುಗಳಲ್ಲಿ ಯುದ್ಧದ ಬಗೆಗಿನ ತೀಕ್ಷ್ಣ ಪ್ರತಿಕ್ರಿಯೆಯು ವ್ಯಕ್ತವಾಗುತ್ತದೆ. ಅಲ್ಲದೆ ಈ ಮನೆಗೆ ಬಂದ ಸೊಸೆಯರೆಲ್ಲರೂ ದೌರ್ಭಾಗ್ಯವಂತಿಯರಬೇಕು. ನಾನು ಮದುವೆಯಾಗಿ ಸೊಸೆಯಾಗಿ,

ಈ ಮನೆಗೆ ಬಂದಾಗ ನಮಸ್ಕರಿಸಿದ ನನಗೆ 'ದೀರ್ಘ ಸುಮಂಗಲಿಯಾಗು' ಎಂದು ಆಶೀರ್ವದಿಸಿದ್ದನ್ನು ಬಿಟ್ಟರೆ ತನ್ನ ಅತ್ತೆ ಇದ್ದೂ ಇಲ್ಲದಂತಿದ್ದಾಳೆ. ಸತ್ಯವತಿ, ಅಂಬಿಕೆ, ಅಂಬಾಲಿಕೆ, ಅವರು ವಿಧವೆಯರು. ನಾನು ಗಂಡನಿದ್ದು ವಿಧವೆ. ಗಾಂಧಾರಿಯದು ಬಹುಶಃ ಇಂತಹ ಬದುಕಲ್ಲದಿದ್ದರೂ ಇನ್ನೊಂದು ರೀತಿಯಲ್ಲಿ ಅವಳು ವಂಚಿತಳೇ. ಈ ರೀತಿ ಸ್ತ್ರೀಯೂ ಒಂದಲ್ಲ ಒಂದು ವಿಷಯದಲ್ಲಿ ಕಷ್ಟಗಳನ್ನು ಅನುಭವಿಸುತ್ತಿರುವಾಗಲೇ ಕುಂತಿಗೆ ಸವತಿಯನ್ನಾಗಿ ಮಾದ್ರಿಯನ್ನು ಮದುವೆಯಾಗುತ್ತಾನೆ. ಅವಳನ್ನು ಸಹ ತನ್ನ ದೌರ್ಬಲ್ಯದಿಂದ ತೃಪ್ತಿಪಡಿಸದ ಪಾಂಡುರಾಜ ಹೆಣ್ಣುಗಳ ಮೇಲೆ ಹೆಣ್ಣುಗಳನ್ನು ತರುವುದನ್ನು ನಿಲ್ಲಿಸುವುದಿಲ್ಲ. ಕಾದಂಬರಿಯಲ್ಲಿನ ಕುಂತಿ ಮತ್ತು ಮಾದ್ರಿಯರ ಪಾತ್ರದ ಮೂಲಕ ಲೇಖಕರರು ರಾಜರ 'ಬಹುಪತ್ನಿತ್ವ'ವನ್ನು ಖಂಡಿಸುತ್ತಾರೆ. "ಅಕ್ಕ ಹೀಗೆ ತಮ್ಮ ದೌರ್ಬಲ್ಯವನ್ನು ಅರಿತಿದ್ದೂ ಹೆಣ್ಣಿನ ಮೇಲೆ ಹೆಣ್ಣನ್ನು ಮದುವೆಯಾಗಿ ಕೊಲ್ಲುವುದಕ್ಕೆ ಇವರಿಗೆ ನಾಚಿಕೆಯಾಗುವುದಿಲ್ಲವೆ" ಎಂಬ ಮಾದ್ರಿಯ ಮಾತುಗಳನ್ನು ಇಲ್ಲಿ ಉದಾಹರಿಸಬಹುದು. ಮಾದ್ರಿಯು ಸಹ ಕುಂತಿಯಂತೆ ಪಾಂಡುರಾಜನ ಶೋಷಣೆಗೆ ಸಿಲುಕಿದವಳಾಗಿದ್ದಾಳೆ. ತಾವು ಬಯಸಿ ತಂದುಕೊಂಡದ್ದನ್ನು ನಾವೇ ಅನುಭವಿಸಿ ತೀರಿಸಬೇಕಾದುದು ಎಂದು ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಅಧೀನ ನೆಲೆಗೆ ತಳ್ಳುತ್ತಿದೆ. ವ್ಯಕ್ತಿತ್ವವೇ ಇಲ್ಲದ ಹೆಣ್ಣು ಒಂದು ವಸ್ತುವಾಗಿ, ಪರಿಕರವಾಗಿ ಉಳಿದು ಹೋಗುತ್ತಾಳೆ. ಸಮಾಜವೆಂಬ ನಾಟಕದಲ್ಲಿ ವಿವಾಹ, ಕುಟುಂಬ ಎಂಬ ಅಂಕಣಗಳಲ್ಲಿ ಹೆಂಡತಿ, ತಾಯಿ ಎಂಬ ಸ್ಥಿರ ಮಾದರಿ ಪಾತ್ರಗಳನ್ನು ನಿರ್ವಹಿಸಲೇಬೇಕಾಗುತ್ತದೆ. ಇಂತಹ ಆದರ್ಶನಾರಿಯ ಭೂತವನ್ನು ಹೊತ್ತುಕೊಂಡ ಹೆಣ್ಣು, ಯಾವ ವಿರೋಧವೂ ಇಲ್ಲದೆ ಸ್ವೀಕರಿಸುತ್ತಾಳೆ. ಈ ಒತ್ತಾಯದಲ್ಲಿ ತನ್ನ ಮೇಲೆ ನಡೆಯುವ ದೌರ್ಜನ್ಯ, ಹಿಂಸೆ, ನೋವು, ಅವಮಾನಗಳ ಆಕ್ರಮಣವನ್ನು ನಗುನಗುತ್ತಲೇ ಸಹಿಸಿಕೊಳ್ಳುತ್ತಾಳೆ. ಗಂಡಿಗೆ ಒಪ್ಪಿಗೆಯಾಗುವುದು ಹೆಣ್ಣಿನ ಈ ಸ್ವರೂಪ ಮಾತ್ರವೇ. ಪ್ರಸ್ತುತ ಸಮಾಜದಲ್ಲಿ ಅನೇಕ ದೌರ್ಬಲ್ಯವನ್ನು ಬಚ್ಚಿಟ್ಟುಕೊಂಡು ತಮ್ಮಿಂದ ಸುಖಪಡಿಸಲಾಗದ ಗಂಡಸರು ಗೋಮುಖವ್ಯಾಘ್ರರಂತೆ ಕಾಣಿಸಿಕೊಂಡು ಹೆಣ್ಣನ್ನು ಬಲಿಪಶುವನ್ನಾಗಿ ಮಾಡುತ್ತಾರೆ. ಅಂತಹ ಕೃತ್ಯವನ್ನು ಕಾದಂಬರಿ ಖಂಡಿಸುತ್ತದೆ. ಅಲ್ಲದೆ ಪ್ರತಿದಿನ ಕಣ್ಣೀರಿನಲ್ಲಿ ಕೈತೊಳೆಯುವ ಎಷ್ಟು ಮಂದಿಯನ್ನು ಒಂದು ಪಾತ್ರ ಕಲ್ಪನೆಯ ದೃಷ್ಟಿಯಲ್ಲಿ ಲೇಖಕಿ ಕಟ್ಟಿಕೊಟ್ಟಿದ್ದಾರೆ.

ಪಾಂಡುರಾಜನೇ ಈ ಅಂತಃಪುರದ ವಿಲಾಸ ಜೀವನವನ್ನು ತೊರೆದು, ರಾಜಕೀಯ ಜಂಡಗಳಿಲ್ಲದೆ ಶಿವನನ್ನು ಆರಾಧಿಸಿ ಮನಶ್ಶಾಂತಿ ಪಡೆಯಬೇಕೆಂದು ನಿರ್ಧರಿಸಿ ಅರಣ್ಯಕ್ಕೆ ಕುಂತಿ, ಮಾದ್ರಿಯೊಂದಿಗೆ ತೆರಳುತ್ತಾನೆ. ಕುಂತಿ ಮಾದ್ರಿ ಅರಣ್ಯವಾಸದಲ್ಲಿ ಪೂಜೆ, ವ್ರತ ಮಾಡುವಂತೆ ಪಾಂಡುರಾಜನು ಸಹ ಋಷಿಗಳೊಂದಿಗೆ ಸೇರಿ ತಪಸ್ಸು ಮಾಡುವುದನ್ನು ಕಲಿಯುತ್ತಾನೆ. ಅಲ್ಲದೆ ಒಬ್ಬ ಋಷಿ ಮುನಿಯಿಂದ ಪಾಂಡುರಾಜನು ಹಸಿರು ಮದ್ದನ್ನು ಪಡೆಯುತ್ತಾನೆ. ರಾಜನು 'ನಿಯೋಗ ಪದ್ಧತಿ'ಯಿಂದ ಮಕ್ಕಳನ್ನು ಪಡೆಯುವ ಸಂಕಲ್ಪವನ್ನು ವ್ಯಕ್ತಪಡಿಸುತ್ತಾನೆ. ಇವನ ತೀರ್ಮಾನದಂತೆ ತನ್ನ ಹೆಂಡತಿಯೊಂದಿಗೆ ಋಷಿ ಕೇವಲ ಪುತ್ರ ಪಡೆಯುವ ಸಲುವಾಗಿ ನಿಯೋಗ ಹೊಂದಬೇಕು. ಅದರ ಹೊರತು ಬೇರೊಂದು

ಉದ್ದೇಶವಿಲ್ಲವೆಂದೂ, ಕುಂತಿಯನ್ನು ಯಾವುದೇ ಕಾರಣಕ್ಕೂ ಮೋಹಿಸುವುದಿಲ್ಲವೆಂದೂ, ಕುಂತಿ ಗರ್ಭಿಣಿಯಾಗಿರುವುದು ತಿಳಿಯುತ್ತಲೇ ಅವನಿಗೂ ಅವಳಿಗೂ ಯಾವುದೇ ಸಂಬಂಧವಿಲ್ಲವೆಂದು ಇಬ್ಬರ ಹತ್ತಿರ ಪ್ರತಿಜ್ಞೆ ಮಾಡಿಸಿಕೊಳ್ಳುತ್ತಾನೆ. ಈ ರೀತಿ ನಿಯೋಗ ಪದ್ಧತಿಯ ಮೂಲಕ ಕುಂತಿ, ಮಾದ್ರಿ ಮಕ್ಕಳನ್ನು ಹೆರುತ್ತಾರೆ. ಇಂತಹ ಕೆಲಸಗಳಿಗೆ ಪುರುಷನ ಆಜ್ಞೆಯಂತೆ ಸ್ತ್ರೀ ನಡೆಯಬೇಕು. ಹೆಣ್ಣು ತಾನೇ ಬಯಸಿ ಮಕ್ಕಳನ್ನು ಪಡೆದರ ಅಪರಾಧಿ ಎಂದು ಹೇಳುವ ವ್ಯವಸ್ಥೆಯನ್ನು ಕುಂತಿಯು ಪ್ರತಿಭಟಿಸುತ್ತಾಳೆ.

ಕುಂತಿಯ ಜಾಗೃತ ಮನಸ್ಸು ಮುಂದೆ ತಾನು ಪಡೆಯುವ ಮಕ್ಕಳು ಪಾಂಡುವಿನಂತೆ, ಧೃತರಾಷ್ಟ್ರನಂತೆ ಅಂಗವಿಕಲರಾಗಿ ಹುಟ್ಟಬಾರದೆಂಬ, ಆಧುನಿಕ ಮಹಿಳೆಯ ಚಿಂತನೆಯನ್ನು ಕಾದಂಬರಿಯು ಪ್ರಸ್ತುತ ಪಡಿಸುತ್ತದೆ. ಮೂಲದಲ್ಲಿ ಪಾಂಡುವಿಗೆ ಶಾಪಗ್ರಸ್ಥನಾದ್ದರಿಂದ ಕುಂತಿ, ಮಾದ್ರಿಯರಿಗೆ ಗಂಡನಿಂದ ರತಿ ಸುಖವೇ ಇಲ್ಲ. ಆದ್ದರಿಂದ ಋಷಿಗಳೊಂದಿಗೆ ನಿಯೋಗ ಹೊಂದುತ್ತಾರೆ. ಪಾಂಡು ತನ್ನ ವಿರಹ ವೇದನೆಯನ್ನು ತಡೆಯಲಾರದೆ ಮಾದ್ರಿಯೊಂದಿಗೆ ಶಕ್ತಿ ಮೈಗೂಡಿದೆ ಎಂದು ತನ್ನ ಬ್ರಹ್ಮಚರ್ಯ ನಿಯಮವನ್ನು ಸರಿಯಾಗಿ ಪಾಲಿಸದೇ ಅವಳೊಂದಿಗೆ ಕೂಡಿ ಸಾವನ್ನಪ್ಪುತ್ತಾನೆ. ಆದರೆ ವಾಸ್ತವದಲ್ಲಿ ಪತಿಯ ಅಗಲುವಿಕೆಯ ಜೊತೆಗೆ ಹೆಂಡತಿಯಾದವಳು. ಅನೇಕ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕಟ್ಟುಪಾಡುಗಳ ನಿಬಂಧಕ್ಕೆ ಒಳಗಾಗುತ್ತಾಳೆ. ಹೆಂಡತಿಯ 'ಕಾಲ್ಗುಣ'ದಿಂದಲೇ ಗಂಡಸತ್ತ ಎಂಬ ನಂಬಿಕೆಯಲ್ಲಿ ಗಂಡನ ಸಾವಿಗೂ ಹೆಣ್ಣನ್ನೇ ಈಡು ಮಾಡಿ ಅಪರಾಧ ಹೊರಿಸಲಾಗುತ್ತದೆ. ಹೆಣ್ಣುಗಳ ಮೇಲೆ ಹೆಣ್ಣನ್ನು ಮದುವೆ ಮಾಡಿಕೊಂಡ, ಗಂಡಿನಿಂದ ವಂಚನೆಗೊಳಗಾಗಿ, ಅವರಿವರಿಂದ ಮಕ್ಕಳನ್ನು ಪಡೆದು ವಿಧವೆಯಾಗಿ ಆ ಮಕ್ಕಳೊಂದಿಗೆ ಬದುಕುವ ಕುಂತಿಯು ಕಾದಂಬರಿಯಲ್ಲಿ ಚಿತ್ರತಗೊಂಡಿದ್ದಾಳೆ. ಹೀಗೆ "ಒಬ್ಬಂಟಿಗಳನ್ನಾಗಿ ಮಾಡಿ ಹೋದ, ಇಂತಹ ಸ್ಥಿತಿಯಲ್ಲಿ ನಾನು ಅರಮನೆಗೆ ಹಿಂದಿರುಗಿದರೆ ಆಡಿಕೊಳ್ಳುವವರ ಮುಂದೆ ಎಡವಿ ಬಿದ್ದಂತಾಗುವುದಿಲ್ಲವೆ? ಧೃತರಾಷ್ಟ್ರ ಗಾಂಧಾರಿಯರು ನಮ್ಮನ್ನು ಹೇಗೆ ಸ್ವೀಕರಿಸಬಹುದು? ಅವನ ಮಕ್ಕಳಿಗೂ ದಾಸಿಯರ ಮಕ್ಕಳನ್ನೆಲ್ಲಾ ಸೇರಿಸಿ ನೂರ ಒಂದು ಮಕ್ಕಳು ಎಂದು ಹೇಳಿಕೊಳ್ಳುವನಂತೆ, ಈ ನನ್ನ ಮಕ್ಕಳಿಗೂ ಹೊಂದಾಣಿಕೆಯಾಗಬಹುದೆ? ಸಿಂಹಾಸನಕ್ಕಾಗಿ ಹೋರಾಟ ಎಂಬ ಮಾತು ಇಬ್ಬರ ಬಾಯಲ್ಲೂ ಬಂದಿದೆ. ಅಂಥದೊಂದು ಮಾತು ಬಂದ ಬಳಿಕ ಒಂದೇ ಸ್ಥಳದಲ್ಲಿ ಕೂಡಿ ಬಾಳುವುದೆಂದರೇನು.... ಆದರೆ ಈಗ ಬೇರೆ ದಾರಿಯೇ ಇಲ್ಲ. ಸತ್ಯವತಿ ಬದುಕಿರುವವರೆಗೂ ಭಯವಿಲ್ಲ, ಆಮೇಲೆ ಭೀಷ್ಮನಿದ್ದಾನೆ ಎಂದು ಹೇಗೋ ಸಮಾಧಾನ ಮಾಡಿಕೊಂಡು ಋಷಿಗಳ ಸಲಹೆಗೆ ಒಪ್ಪಿಕೊಳ್ಳುತ್ತಾಳೆ" (ಅದೇ; ಪು. ೪೧). ಕುಂತಿಯು ಸ್ವತಂತ್ರವಾಗಿ ಬಾಳಲು ಆಗದೇ ಮಕ್ಕಳ ಯೋಗಕ್ಷೇಮಕ್ಕಾಗಿ ಅರಮನೆಯಲ್ಲಿ ಆಶ್ರಯವನ್ನು ಪಡೆಯುತ್ತಾಳೆ. ಅದಕ್ಕಾಗಿ ದಾಯದಿಗಳ ಮನೆಯ ಬಾಗಿಲಿಗೆ ಬಂದು ಅವರು ಹಾಕಿದ ಗಂಜಿಗೆ ಕೈಯೊಡ್ಡಿ ದೂರು ದೌರ್ಜನ್ಯಗಳನ್ನು ಸಹಿಸಿಕೊಂಡು ಮಕ್ಕಳನ್ನು ಮುಂದಕ್ಕೆ ತರುತ್ತಾಳೆ.

ಮಕ್ಕಳ ಮೇಲಿನ ಪ್ರೀತಿಯನ್ನು, ಅದರಲ್ಲೂ ಭೀಮನ ಮೇಲಿನ ಪ್ರೀತಿಯನ್ನು ಈ ರೀತಿ ವರ್ಣಿಸಲಾಗಿದೆ. ಮೂಲದಲ್ಲಿ ಭೀಮನ ಜನನವನ್ನು ತಿಳಿಸುವಾಗ ತಾಯಿ ತೊಡೆಯ ಮೇಲಿಂದ ಮಗು ಕೆಳಗಿದ್ದ ಒಂದು ಬಂಡೆಯ ಮೇಲೆ ಉರುಳಲು ಮಗುವಿಗೆ ಬದಲಾಗಿ ಕಲ್ಲೇ ನೂರು ಚೂರಾಯಿತ್ತು. ಇದನ್ನು ಕಂಡು ಅವಳು ಮಗುವನ್ನು ಯಾರಾದರೂ ಕಂಡಾರೂ ಎಂದು ಮುಚ್ಚಿಕೊಂಡಳಂತೆ. ಇದು ಉಳಿದ ಮಕ್ಕಳಿಗಿಂತ ಭೀಮನ ಮೇಲೆ ಅವಳಿಗಿದ್ದ ಪ್ರೀತಿಯ ಪ್ರತೀಕವಾಗಿದೆ. ಏಕಚಕ್ರ ನಗರದಲ್ಲಿ ಭಿಕ್ಷೆ ಬೇಡಿ ತಂದು ಮಾಡಿದ ಅಡುಗೆಯನ್ನು ಅವನಿಗಾಗಿ ಎತ್ತಿ ಇಡುತ್ತಿದ್ದ ಚಿತ್ರದಲ್ಲೂ ಕಾಣಬಹುದು. ಹೊಟ್ಟೆ ತುಂಬಾ ಅನ್ನ ಕೊಡುವವಳು ತಾಯಿ. ಅವಳು ನೀಡುವ ಅನ್ನ ಅನಾದೃಶ್ಯವಾದದ್ದು. ಆಕೆ ಕೇವಲ ಅನ್ನ ನೀಡಿ ಕೈಬಿಡುವುದಿಲ್ಲ. ಹೊಟ್ಟೆ ತುಂಬಲಿ ಎಂಬ ಅನುಗ್ರಹಭಾವವನ್ನು ತನ್ನ ಹೊಟ್ಟೆ ತುಂಬಾ ತುಂಬಿಕೊಂಡಿರುತ್ತಾಳೆ. ಇಂಥ ಆರ್ದ್ರತೆ, ಜೀವಸಲೆ, ಸೃಷ್ಟಿಧಾರಣ ಶಕ್ತಿ ಹೊಂದಿದವಳಾಗಿ ಕುಂತಿ ಕಾಣಿಸುತ್ತಾಳೆ. ಅಂತೆಯೇ ಮಾದ್ರಿಯ ಹೊಟ್ಟೆಯಲ್ಲೂ ಮಕ್ಕಳಾಗುವಂತೆ ಮಂತ್ರೋಪದೇಶವನ್ನು ಮಾಡುತ್ತಾಳೆ. ಇಲ್ಲಿ ಪ್ರಭಾವತಿಯವರು 'ನಿಯೋಗ'ದ ಮೂಲಕ ಮಕ್ಕಳನ್ನು ಪಡೆಯುತ್ತಿದ್ದ ಪದ್ಧತಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕೊನೆಗೆ ಪಾಂಡುವನ್ನು ಕಳೆದುಕೊಳ್ಳುತ್ತಾರೆ. ಚಿತೆಯನ್ನೇರಲು ಹೊರಟಾಗ ಮಾದ್ರಿ ಅಕ್ಕ, 'ಮಕ್ಕಳನ್ನು ನೀನೇ ಚೆನ್ನಾಗಿ ನೋಡಿಕೊಳ್ಳುತ್ತೀಯ' ಎಂದು ಅವಳೊಬ್ಬಳೇ ಚಿತೆ ಏರುತ್ತಾಳೆ. ಇಲ್ಲಿಯೂ ಕುಂತಿಯ ಮಾತೃಪ್ರೇಮ ಮಮಕಾರವೇ ಮೆರೆಯುತ್ತದೆ.

ಮದುವೆಯಾಗಿ ಬಂದ ದ್ರೌಪದಿಗೂ ಸಹ ಗಂಡನ ಮನಸ್ಸನ್ನು ಅರಿತುಕೊಂಡು ನಡೆಯುವಂತೆ ತಿಳಿ ಹೇಳುತ್ತಾಳೆ. ಅಲ್ಲದೆ ಪಾಂಡವರು ಭಿಕ್ಷೆ ತಂದ ಅನ್ನವನ್ನು ಅರ್ಧಮಾಡಿ, ಬಂದ ಅರ್ಧವನ್ನು ಭೀಮನಿಗೆ ಕೊಡು. ಅವನು ವೀರ, ಯಾವಾಗಲೂ ಅವನ ಊಟ ದೊಡ್ಡದು. ಮಿಕ್ಕ ಅರ್ಧವನ್ನು ಉಳಿದ ಆರು ಜನಕ್ಕೂ ಹಂಚಿಕೊಡು ಎನ್ನುವಲ್ಲಿ ಜಿಜ್ಞಾಸೆಯೊಂದು ಏಳುತ್ತದೆ. ಅಂದರೆ 'ತಾಯಿ' ನೀಡುವ ಅನ್ನದಿಂದ ಹೊಟ್ಟೆ ತುಂಬಿತ್ತೋ, ಅವಳ ಅಂತರಂಗದ ಭಾವದ ಹಾರೈಕೆಯಿಂದ ತುಂಬುತ್ತದೋ ಎಂಬುದು. ಇವೆರಡನ್ನು ತನ್ನದಾಗಿಸಿಕೊಂಡಿದ್ದ 'ಮಾತೆ' ಕುಂತಿಯಾಗಿ ಕಂಡು ಬರುತ್ತಾಳೆ. ಹೀಗೆ ಒಂದು ಕಡೆ ವಾತ್ಸಲ್ಯ ಮೂರ್ತಿಯಾಗಿ ಮತ್ತೊಂದು ಕಡೆ ಪ್ರತಿಭಟನೆಯ ಪ್ರತಿರೂಪವಾಗಿ ಕುಂತಿ ಕಾಣಿಸುತ್ತಾಳೆ.

ಕುಂತಿ ವಸುದೇವನ ತಂಗಿ, ಕುಂತಿ ಭೋಜನ ಮಗಳು, ವಿಚಿತ್ರ ವೀರ್ಯನ ಸೊಸೆ, ಪಾಂಡುವಿನ ಹೆಂಡತಿಯಾಗಿ, ಉಪ್ಪರಿಗೆಯ ಮನೆಯಲ್ಲಿ ಕಮಲದಂಥ ಹಾಸಿಗೆಯ ಮೇಲೆ ಮಲಗುತ್ತಿದ್ದ ಸುಕುಮಾರಿ. ಇಂಥವಳು ಆಯಾಸ ಪಟ್ಟು ನೆಲದ ಮೇಲೆ ಮಲಗಿ ನಿದ್ರೆ ಮಾಡುವುದನ್ನು ನೋಡಿದರೆ ಅದು ದುಃಖತರಹವಾದುವಗಳೇ ಆಗಿವೆ. ಭೀಮ ಹಿಡಿಂಬೆ ಪ್ರಸಂಗದಲ್ಲಿ ಹಿಡಿಂಬೆಯನ್ನು ಕುರಿತು ಮೃದುವಾಗಿಯೇ ನಡೆದುಕೊಳ್ಳುತ್ತಾಳೆ. ಮುಂದೆ ಕುಂತಿ ನಿರ್ವಹಿಸಿದ ಮಾನವೀಯ ಘಟನೆಯಲ್ಲೊಂದಾಗುವ 'ಏಕಚಕ್ರನಗರಿಯ' ಬಡ ಬ್ರಾಹ್ಮಣನ ದುಃಖ ನಿವಾರಣೆ. ಬಕಾಸುರನ ಉಪಟಳವನ್ನು ಮಗನಿಂದ ಮುಕ್ತಿಗೊಳಿಸಿದ್ದು ಇಡೀ ಭಾರತದ ಸಮಾಜೋಪಯೋಗಿ ಕಾರ್ಯವಾಗಿ ಗೋಚರಿಸುತ್ತದೆ.

ಪಾಂಡವರನ್ನು ವಾರಣಾವತ ಊರಿಗೆ ಧೃತರಾಷ್ಟ್ರನೇ ಕಳುಹಿಸುತ್ತಾನೆ. ಅಲ್ಲಿರುವ ಮನೆಯನ್ನು ಹೊತ್ತಿ ಉರಿಯುವ ವಸ್ತುಗಳಾದ ಅರಗು, ತುಪ್ಪ, ಹುಲ್ಲು ಮೊದಲಾದವುಗಳಿಂದ ಕಟ್ಟಿರುತ್ತಾರೆ. ಹಸ್ತಿನಾವತಿಯಿಂದ ಬಂದ ದೂತನ ಸಹಾಯದಿಂದ ಸುರಂಗವನ್ನು ತೋಡಿಸಿ, ಅರಮನೆಯಿಂದ ತಪ್ಪಿಸಿ ಕೊಂಡು ಹೋಗುತ್ತಾರೆ. ಸ್ವಯಂವರದಲ್ಲಿ ಮತ್ಸ್ಯಯಂತ್ರ ಭೇದನ ಮಾಡಿದ ಅರ್ಜುನನೊಂದಿಗೆ ದ್ರೌಪದಿಯು ಮನೆಗೆ ಬರುತ್ತಾಳೆ. ಭೀಮನು ಭಿಕ್ಷೆ ತಂದಿವೆಂದು, ಅರ್ಜುನ ಹಣ್ಣು ತಂದಿವೆಂದು ಹೇಳಿದಾಗ ತಾಯಿ ಸಹಜವಾಗಿ ಎಲ್ಲರೂ ಹಂಚಿಕೊಳ್ಳಿ ಎಂದು ಹೇಳುತ್ತಾಳೆ. ತಾಯಿಯ ಮಾತನ್ನು ಮೀರುವುದಿಲ್ಲ. "ಹಸ್ತಿನಾವತಿಯ ಸಿಂಹಾಸನಕ್ಕಾಗಿ ತನ್ನ ಅಣ್ಣ ತಮ್ಮಂದಿರನ್ನು ಚಿಕ್ಕಮ್ಮನನ್ನು ಬೆಂಕಿಯಲ್ಲಿ ಹಾಕಿ ಸುಡಲೂ ಹೇಸಲಿಲ್ಲ ಆ ದುರ್ಯೋಧನ. ಅಂಥವನಿಗೆ ವಿರುದ್ಧವಾಗಿ ನನ್ನ ಮಕ್ಕಳು ಬಲಿಷ್ಠರಾಗಬೇಕೆಂದರೆ ಮೊದಲು ಅವರಲ್ಲಿ ಒಗ್ಗಟ್ಟು ಇರಬೇಕು. ಒಬ್ಬೊಬ್ಬನಿಗೂ ಬೇರೆ ಬೇರೆ ಹೆಂಡತಿಯರು ಬಂದು ಅವರ ಕಿವಿ ಹಿಡಿದರೆಂದರೆ ಎಲ್ಲಿ ಬಂತು ಒಗ್ಗಟ್ಟು. ಹಾಗಾದರೆ ನನ್ನ ದೈವವೇ ಈ ಅವಕಾಶವನ್ನು ಕಲ್ಪಿಸಿರಬೇಕು. ಏನಾದರೂ ಮಾಡಿ ಈ ಮದುವೆಗೆ ದ್ರುಪದನನ್ನು ಒಪ್ಪಿಸಬೇಕು. ಈ ಹುಡುಗಿಯನ್ನು ನನಗೆ ತಕ್ಕಂತೆ ಪಳಗಿಸಬೇಕು. ಸಿಕ್ಕಿರುವ ಅವಕಾಶ ಬಿಡಬಾರದು" (ಅದೇ; ಪು. ೬೫). ಈ ಮಾತಿನಲ್ಲಿ ಪ್ರಭಾವತಿಯವರು ವಿಭಿನ್ನ ಆಲೋಚನೆಗಳನ್ನು ತಿಳಿಯಪಡಿಸುತ್ತಾರೆ. ಮೂಲ ಪುರಾಣದಲ್ಲಿ ಈ ತರಹದ ಚರ್ಚೆ ಇಲ್ಲ. ತಾನು ಈ ವಂಶಕ್ಕೆ ಸೊಸೆಯಾಗಿ ಬಂದಂದಿನಿಂದ ಕಷ್ಟಕಾರ್ಪಣ್ಯಗಳಲ್ಲಿ ಬೆಂದವಳಾಗಿದ್ದೇನೆ. ನನ್ನ ಮಕ್ಕಳು ಒಬ್ಬಳನ್ನೆವರಿಸುವುದನ್ನು ದುರ್ಯೋಧನನ ವಿರುದ್ಧ ಬಲಿಷ್ಠರನ್ನಾಗಿ ಮಾಡಬಹುದು ಹಾಗೂ ಅಣ್ಣ ತಮ್ಮ ಚಿಕ್ಕಮ್ಮನೆಂದೂ ಭಾವಿಸದೇ ಸುಡಲು ಹೊರಟ ದುರ್ಯೋಧನ ನಾಶಕ್ಕಾಗಿ, ಐವರನ್ನು ಒಗ್ಗಟ್ಟಿನಲ್ಲಿರುವ ಒಬ್ಬಳನ್ನೇ ತಂದುಕೊಳ್ಳುವಲ್ಲಿ ನನ್ನ ದೈವವೇ ಕಲ್ಪಿಸಿಕೊಟ್ಟಿರುವ ಅವಕಾಶವಾಗಿದೆ. ಆದ್ದರಿಂದ ಕುಂತಿಯು ತನ್ನ ಮಕ್ಕಳವುಳ್ಳವರನ್ನು ದ್ರೌಪದಿಯೊಂದಿಗೆ ಮದುವೆ ಮಾಡಿಸಲು ಮುಂದಾಗುತ್ತಾಳೆ. ಇದಕ್ಕೆ ದ್ರುಪದನು "ಧರ್ಮ ವಿರುದ್ಧವಾದ ಇಂತಹ ಮಾತನ್ನಾಡಲು ನಿಮಗೆ ಬಾಯಾದರೂ ಹೇಗೆ ಬಂತು. ಲೋಕ, ವೇದಗಳೆರಡಕ್ಕೂ ವಿರುದ್ಧವಾದ ಇಂತಹ ಕಾರ್ಯಮಾಡಿ ನಾನು ನರಕಕ್ಕೆ ಹೋಗಲೇ? ಇದಕ್ಕೆ ನಾನು ಒಪ್ಪುವುದಿಲ್ಲ" ಎಂದಾಗ ದ್ರುಪದನ ಮಾತಿಗೆ ಕುಂತಿಯು ಹೀಗೆ ಹೇಳುತ್ತಾಳೆ. "ಸ್ವರ್ಗ ನರಕಗಳ ಬಗ್ಗೆ ನನಗೆ ನಂಬಿಕೆಯಿಲ್ಲ. ನೀವು ರಾಜರು ಪ್ರಜೆಗಳನ್ನು ಬೆದರಿಸಲೆಂದೇ ಅಂತಹ ನಂಬಿಕೆಯನ್ನು ಹುಟ್ಟು ಹಾಕಿದವರು. ನಾನು ಸ್ವರ್ಗವನ್ನು ನೋಡಿಲ್ಲ ನರಕವನ್ನು ಇಲ್ಲೇ ಕಂಡಿರುವೆ. ನಪುಂಸಕ ಗಂಡನನ್ನು ಮದುವೆಯಾಗಿ ಅವರಿಂದ ಮಕ್ಕಳನ್ನು ಪಡೆದು ವಿಧವೆಯಾಗಿ ಗಂಡನ ಮನೆ ಸೇರಿ ನಿತ್ಯ ನರಕದಲ್ಲಿ ಬೆಂದ ನನಗೆ ಸ್ವರ್ಗ ಬೇಕಿಲ್ಲ" (ಅದೇ; ಪು. ೬೬) ಎನ್ನುವಲ್ಲಿ ಸಮಾಜ ತನ್ನ ಅನುಕೂಲಕ್ಕಾಗಿ ನಿಯಮಗಳನ್ನು ಹುಟ್ಟು ಹಾಕಿ, ಸಾಮಾನ್ಯರನ್ನು ಬೆದರಿಸುವ, ಅವರ ದಬ್ಬಾಳಿಕೆಯನ್ನು ಪ್ರಸ್ತುತ ಸಂದರ್ಭದ ಸಮಸ್ಯೆಗಳನ್ನು ಎತ್ತಿಕೊಂಡೇ ಕುಂತಿ ಪಾತ್ರದ ಮೂಲಕ ಲೇಖಕಿ ಸಮಾಜದ ದೌರ್ಜನ್ಯವನ್ನು ಖಂಡಿಸಿದ್ದಾರೆ.

ದ್ರೌಪದಿಯನ್ನು ಸಭೆಯಲ್ಲಿ ಅಪಮಾನ ಮಾಡಿದ್ದನ್ನು ಕುಂತಿ ಪ್ರತಿಭಟಿಸುತ್ತಲೆ, "ಇದೆಲ್ಲಾ ಧರ್ಮವೆಂದು ನೀವು ಒಪ್ಪುವಿರೇನು? ಆ ಮುದುಕನಿಗೆ ಕಣ್ಣಿಲ್ಲವೆ? ಇಷ್ಟೆಲ್ಲಾ ನಡೆಯುತ್ತಿದ್ದಾಗ ನೀವು

ಆನಂದಿಸುತ್ತಾ ಕುಳಿತಿದ್ದೀರೇನು? ನನ್ನ ಸೊಸೆ ಸೂರ್ಯನ ಕಿರಣವನ್ನೇ ನೋಡದೇ ಬೆಳೆದವಳು. ಐವರು ವೀರಾಧಿವೀರ ಗಂಡಂದಿರದ್ದು ಅಂತಹ ತುಂಬಿದ ಸಭೆಯಲ್ಲಿ ಯಾರು ಅವಳ ಮಾನರಕ್ಷಣೆಗೆ ಮುಂದಾಗಲಿಲ್ಲವಲ್ಲ" (ಅದೇ.; ಪು. ೮೨) ಇಂತಹ ಚಿಂತನೆ ಮೂಲ ಕತೆಯಲ್ಲಿ ಕಂಡು ಬರುವುದಿಲ್ಲ. ಸಭೆಯಲ್ಲಿ ಹೆಣ್ಣಿನ ಅಪಮಾನವನ್ನು ನೋಡುತ್ತ ಸಭೆಯಲ್ಲಿ ಕುಳಿತವರನ್ನು ನಿಂದಿಸುತ್ತಾಳೆ. ಅಂದಿನ ಪುರಾಣಕತೆಯಲ್ಲಿ ಐವರು ಪಾಂಡವರು ವೀರಾಧಿವೀರರು ಇದ್ದು ಮಾನರಕ್ಷಣೆಗೆ ಹೋಗದ್ದಿದ್ದು ನೋಡಿದರೆ ಅವರೆಲ್ಲಾ ಆ ಸಂಸ್ಕೃತಿಯಲ್ಲಿ ಇದ್ದವರೇ ಆದ್ದರಿಂದ ಪಾಂಡವರು ಕೂಡ ಅವಳ ಅಪಮಾನಕ್ಕೆ ಕಾರಣರಾಗುತ್ತಾರೆ. ಒಂದು ಹೆಣ್ಣಿನ ನೋವನ್ನು ಅರಿತುಕೊಳ್ಳುವ ಹೃದಯವಂತಿಕೆ ಹೆಣ್ಣಿಗೆ ಮಾತ್ರ ಇದೇ ಎಂಬುದನ್ನು ಸಾಧಿಸುವಂತಿದೆ. ಅರ್ಜುನನ ಸ್ನೇಹಿತ ಕಟ್ಟಿಕೊಟ್ಟ ಚಮತ್ಕಾರದ ಭವನವಿದೆ. ಒಂದು ತಿಂಗಳಿಂದ ಅಲ್ಲಿ ಇದ್ದ ದುರ್ಯೋಧನ ಪ್ರತಿದಿನವೂ ನೋಡುತ್ತಿದ್ದರೂ ನೀರಿಲ್ಲ ಎಂದು ಭಾವಿಸಿ ಅದರಲ್ಲಿನ ಒಂದು ಕೊಳಕ್ಕೆ ಬಿದ್ದನು. ಅದನ್ನು ನೋಡಿದ ಭೀಮಾ - ಅರ್ಜುನ ಮಾತ್ರ ನಕ್ಕಿದ್ದರೆ ಪರಿಗಣಿಸುತ್ತಿರಲಿಲ್ಲ. ದ್ರೌಪದಿ ನಕ್ಕಿದ್ದು ಅವನನ್ನು ಕೆರಳಿಸಿದೆ. ಅದಕ್ಕೇ ಅಷ್ಟು ಧೈರ್ಯ ಮಾಡಿ ಅವಳನ್ನು ಸಭೆಯಲ್ಲಿ ಎಳೆದಾಡಿಸಿದ. ದ್ರೌಪದಿಯು ದುರುಳನ ಕಪಾಳಕ್ಕೆ ಬಾರಿಸಿ ತನ್ನನ್ನು ತಾನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. ಇಲ್ಲಿ ಸ್ತ್ರೀಯ ಧೈರ್ಯವು ಮೆಚ್ಚುವಂತಹದ್ದಾಗಿದೆ. 'ಹೆಣ್ಣು ಒಲಿದರೆ ನಾರಿ ಮುನಿದರೇ ಮಾರಿ' ಎನ್ನುವಂತೆ ದ್ರೌಪದಿಯನ್ನು ಅಪಮಾನ ಮಾಡಿದ ಕೌರವರ ವಿರುದ್ಧ ಆಕೆ ಸೇಡು ತೀರಿಸಿಕೊಳ್ಳುತ್ತಾಳೆ.

ಕರ್ಣನು ರಣರಂಗದಲ್ಲಿ ಅರ್ಜುನನಿಂದ ಹತನಾದಾಗ ಕುಂತಿಯು ಬಂದು ತಬ್ಬಿಕೊಂಡು ರೋಧಿಸುವಳು. ಕುಂತಿಯು ಕರ್ಣನನ್ನು ಮಗನೆಂದು ತಿಳಿಸುತ್ತಾಳೆ. ಧರ್ಮರಾಯ ಇನ್ನೊಬ್ಬ ಅಣ್ಣನನ್ನು ಕಳೆದುಕೊಂಡ. ದುರ್ಯೋಧನ ಈಗಲಾದರೂ ಸಂಧಿ ಮಾಡಿಕೋ ನಿನಗೆ ಇಷ್ಟವಾದ ಐದು ಹಳ್ಳಿಗಳನ್ನಾದರೂ ಕೂಡು ಎಂದಾಗ ಕುಂತಿಯು "ಬೇಡ ಮಗೂ ನನ್ನ ಮಗನನ್ನು ಹಾಳು ಮಾಡಿದವನೇ ಇವನು. ಇವನಿಲ್ಲದಿದ್ದರೆ ಕರ್ಣ ನಾನು ಕರೆದಾಗ ಓಡಿ ಬರುತ್ತಿದ್ದ ಮೊದಲು ಇವನನ್ನು ಕೊಲ್ಲಿ" (ಅದೇ; ಪು. ೧೩೯). ಈ ಮಾತು ಮೂಲ ಕತೆಯಲ್ಲಿ ಕಂಡು ಬಂದಿಲ್ಲ. ಇವನಿಲ್ಲದ ಸಮಯದಲ್ಲಿ ಕರೆದರೆ ಬರುವ ಕರ್ಣನ ಸಾವಿಗೆ ಕಾರಣನಾದ ದುರ್ಯೋಧನನ್ನು ಮೊದಲು ಕೊಲ್ಲು ಎನ್ನುತ್ತಾಳೆ. ಇಲ್ಲಿ ದುರ್ಯೋಧನನ ದುಷ್ಟ ಸ್ವಭಾವವನ್ನು ಮತ್ತು ಅಪಮಾನಗಳಾದವೆಂಬ ವೇದನೆಯ ಈ ಮಾತುಗಳಲ್ಲಿ ಧ್ವನಿತವಾಗುತ್ತದೆ. ಮೂಲ ಕೃತಿಯಲ್ಲಿ ಕುಂತಿಯು ಸೌಮ್ಯ ಸ್ವಭಾವದ ಹೆಣ್ಣಾಗಿ ಕಂಡರೆ, ಇಲ್ಲಿ ಸೇಡು ತೀರಿಸಿಕೊಳ್ಳುವ ಸ್ತ್ರೀಯಾಗಿ ಕಾಣಿಸುತ್ತಾಳೆ. ಯುದ್ಧದಲ್ಲಿ ಕರ್ಣನು ಹತನಾದ ನಂತರ ಭೀಮನು ದುರ್ಯೋಧನನ ತೊಡೆಯನ್ನು ಮುರಿಯುತ್ತಾನೆ. ಯುದ್ಧ ಮುಗಿಯಿತು ದುರ್ಯೋಧನ ಸತ್ತ ಎಂದುಕೊಳ್ಳುವಾಗ ಕೃಷ್ಣನು ದುರ್ಯೋಧನ ಸತ್ತಿಲ್ಲ ಎಂಬ ಸುದ್ದಿಯನ್ನು ತಿಳಿಸುತ್ತಾನೆ. ನಮಗೆ ಅವನ ಗೆಳೆಯನಾದ ಅಶ್ವತ್ಥಾಮನಿಂದ ಅಪಾಯವಿದೆ ಎಂದು ತಿಳಿದ ಕೃಷ್ಣನು ಅವರನ್ನು ನೀಲಾಚಲಕ್ಕೆ ಹೋಗಿ ಶಿವನನ್ನು ಆರಾಧಿಸೋಣವೆಂದು ಕರೆದುಕೊಂಡು ಹೋಗುತ್ತಾನೆ. ಆಗ ಕುಂತಿಯು ನನ್ನ ಬಗ್ಗೆ ದ್ರೌಪದಿಯ ಮಕ್ಕಳ

ಬಗ್ಗೆ ಕಾಳಜಿಯಿಲ್ಲವೆಂದು ಕೇಳುತ್ತಾಳೆ. 'ಅತ್ತೇ ಮಮ ಪ್ರಾಣಾಹಿ ಪಾಂಡವಾ', ಇದು ನನ್ನ ಪ್ರತಿಜ್ಞೆ ಎಂದು ಹೇಳುವಲ್ಲಿ ಕುಂತಿಯು ಕೃಷ್ಣನ ತಾರತಮ್ಯ ಭಾವನೆಯನ್ನು ಖಂಡಿಸುತ್ತಾ "ಮಮ ಪ್ರಾಣಾಹಿ ಪಾಂಡವಾ; ಅಂತೆ ಆ ಪಾಂಡವರಿಗೆ ಪ್ರಾಣ ಕೊಟ್ಟವಳು, ಜನ್ಮ ಕೊಟ್ಟವಳು ನಾನಲ್ಲವೇನೋ! ದ್ರೌಪದಿ, ನಾನಿರುವೆ ಭಯಪಡಬೇಡ, ನಿನ್ನ ಮಕ್ಕಳೈವರೂ ಇಂದು ಈ ಶಿಬಿರದಲ್ಲಿ ಮಲಗಲಿ ನಾನೇ ಬಾಗಿಲಲ್ಲಿ ಮಲಗುವೆ, ಆದಾವ ಅಶ್ವತ್ಥಾಮ ಬರುತ್ತಾನೋ ನಾನು ನೋಡುವೆ" (ಅದೇ.; ಪು. ೧೪೭). ದಿಟ್ಟತನದ ಧೈರ್ಯವಂತಿಕೆಯ ಪಾತ್ರವಾಗಿ ಕುಂತಿಯು ಮೂಡಿ ಬಂದಿದ್ದಾಳೆ.

ಕೃಷ್ಣನ ಪಾತ್ರವು ಯಾಜಮಾನ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ. ಇಲ್ಲಿ ಅವನು ದೈವಸಂಭೂತ ನಾಗಿ ಕಾಣುವುದಿಲ್ಲ. ಅಂತಹ ಪವಾಡಗಳನ್ನು ಕಾದಂಬರಿ ಕಳಚಿ ವಾಸ್ತವ ದೃಷ್ಟಿಕೋನದಿಂದ ಪಾತ್ರ ಚಿತ್ರಣ ಮಾಡಲಾಗಿದೆ. ಕುಂತಿಯನ್ನು ಅತ್ತೆ ಎಂದು ಕರೆಯುವ ಕೃಷ್ಣನ ಮಾತುಗಾರಿಕೆಗೆ ತನ್ನ ಮಕ್ಕಳು ಮಾರು ಹೋಗಿರುವುದನ್ನು ಕುಂತಿಯೂ ನಿಂದಿಸುತ್ತಾಳೆ. ಕುಂತಿಯು ತನ್ನ ಮೊದಲ ಮಗನ ಬಗ್ಗೆ ಪ್ರಸ್ತಾಪ ಮಾಡುವುದರಲ್ಲಿ, ಕುಂತಿಯನ್ನು ಗೊಂದಲಕ್ಕೆ ಒಳಗಾಗುವಂತೆ ಮಾಡುತ್ತಾನೆ. ಕರ್ಣ ಸತ್ತ ನಂತರ ಕಾಣಲು ಬಂದ ಕೃಷ್ಣ ಅತ್ತೆ ನನ್ನ ಮೇಲೆ ಕೋಪವೇನು ಎಲ್ಲಾ ಒಳ್ಳೆಯದನ್ನೇ ಮಾಡುತ್ತೇನೆ. ಆದರೆ ಅದು ವಿಪರೀತವಾಗಿ ಬಿಡುತ್ತದೆ ಎಂದಾಗ 'ಕುಂತಿ' ನೀನೀನು ದೈವಾಂಶ ಸಂಭೂತನೇ ಎಲ್ಲರಿಗೂ ಒಳ್ಳೆಯದು ಮಾಡಲು ಅಥವಾ ಕಾಲ ಪುರುಷನೋ ನಿನಗೆ ಯಾವುದು ಬೇಕೋ ಅದನ್ನು ಮಾಡುವ ಸ್ವಾರ್ಥಿ ನೀನು. ನನಗೆ ಅರ್ಜುನ ಬೇರೆ, ಕರ್ಣ ಬೇರೆ ಎಂದು ಭಾವಿಸಿದೆಯಲ್ಲವೆ? ಹೆತ್ತ ಹೊಟ್ಟೆ ಯಾವ ಕಾರಣಕ್ಕೂ ಭೇದ ಮಾಡುವುದಿಲ್ಲ ತಿಳಿ" (ಅದೇ; ಪು. ೧೪೧) ಎಂದು ಕೃಷ್ಣನ ತಂತ್ರಗಳನ್ನು ಅವನ ಭೇದೋಪಾಯಗಳನ್ನು ನೋಡಬಹುದಾಗಿದೆ. ಮೂಲ ಕತೆಯಲ್ಲಿ ಕುಂತಿಗೆ ಈ ಆಲೋಚನೆ ಇದ್ದಂತೆ ಕಾಣುವುದಿಲ್ಲ.

ಹೀಗೆ ಮಾನವನ ಮೂಲಭೂತವಾದ ಅನೇಕ ಗುಣಗಳಿಗೆ ಪುರಾತನ ಸ್ಥಾನಮಾನ ನೀಡಿರುವ ಹಿನ್ನೆಲೆಯಲ್ಲಿ ಕುಂತಿಯ ಬದುಕಿಗೆ ಪೂರಕವಾದ ಮಾನವೀಯ ಜೀವ ಪರತೆಯ ಅನೇಕ ಅಲೆಗಳು ಬಂದದ್ದುಂಟು. ಬದುಕಿನ ಯಾವುದೋ ಘಟ್ಟದಲ್ಲಿ ಇದ್ದಕ್ಕಿದ್ದ ಹಾಗೆ ಕರ್ಣನನ್ನು ಭೇಟಿಯಾಗುತ್ತಾಳೆ. ಮಾತೃತ್ವದ ಸಹಜ ವಾತ್ಸಲ್ಯದ ಮೂಲಕ ಸಂಬಂಧ ಮತ್ತು ಸಂಕಷ್ಟದ ಸ್ಥಿತಿಗೆ ಗುರಿಯಾಗುತ್ತಾಳೆ. ತನ್ನ ಭೇಟಿಯ ಉದ್ದೇಶ ಫಲ ನೀಡಿದಾಗ ಆಕೆಯ ಅಸ್ತ್ರವಾದರೂ 'ತೊಟ್ಟ ಬಾಣ ತೊಡದಿರು' ಎನ್ನುವುದು. ಅವಳ ಮಾತೃಪ್ರೇಮದ ಮರುಕವು ಹೆಚ್ಚು ಕೆಲಸ ಮಾಡಿದರೂ ಅದು ಹೆಚ್ಚಿಗೆ ಪಾಂಡವರ ಮೇಲಿನದೇ ಆಗಿದ್ದರೂ ಅಂತರಾಳದಲ್ಲಿ ಕರ್ಣನ ಮೇಲೆ ಮಾತೃ ವಾತ್ಸಲ್ಯ ಹೆಚ್ಚಾಗಿಯೆಯಿತ್ತು. ಸಮಾಜದ ಬೆದರಿಕೆ, ಅರಮನೆಯ ಬೆದರಿಕೆ, ಸಮಾಜದ ನಿಂದನೆಗೆ ಗುರಿಯಾಗುತ್ತೇನೆಂದು ಅಸಹಾಯಕ ಸ್ಥಿತಿಯಿಂದ ಸಮಾಜದಲ್ಲಿ ಸತ್ಯವನ್ನು ಹೇಳದೆ ಮಗನನ್ನು ಕಳೆದುಕೊಳ್ಳುತ್ತಾಳೆ. ಕೊನೆಗೆ ಕುಂತಿ ಮಕ್ಕಳು ಯುದ್ಧವನ್ನು ಗೆದ್ದು, ಬಾಳುವಂತಹ ಕಾಲದಲ್ಲಿ ಗಾಂಧಾರಿ, ಧೃತರಾಷ್ಟ್ರ, ವಿಧುರರೊಡನೆ, ಕುಂತಿಯೂ ವಾನಪ್ರಸ್ಥ ಆಶ್ರಮಕ್ಕೆ ಹೋಗುತ್ತಾಳೆ.

ಕುಂತಿಯು ಗಂಡನನ್ನು ಕಳೆದುಕೊಂಡು ಮಕ್ಕಳ ಮೇಲಿನ ಮಮತೆಯಿಂದ ಕಾಡುಮೇಡು ಅಲೆಯುತ್ತಾಳೆ. ತಾನು ಅನುಭವಿಸಿದ್ದನ್ನು ಹೇಳಲಾರದೇ ತೊಳಲಾಟ, ಸಂಕಟಗಳಿಂದಲೇ ಬದುಕುವ ವಳಾಗಿದ್ದಾಳೆ. ಇಡೀ ಕಾವ್ಯದೊಳಗೆ ಒಂದು ಮೂಲೆಯಲ್ಲಿ ಅತ್ಯಂತ ಮಾನವೀಯ ನಡವಳಿಕೆಗಳನ್ನು ಪ್ರಚುರ ಪಡಿಸುತ್ತಲೇ ಆಪ್ತಳಾಗುವ ಚಿತ್ರಕಾವ್ಯದಲ್ಲಿ ಸಾಕಷ್ಟು ಸಿಗುವುದುಂಟು. ಹದಿಮೂರು ವರ್ಷಗಳು ಕುಂತಿಯ ಜೀವನದ ದಾರುಣ ದುರ್ದಿನಗಳು! ಯಾವ ಪುರುಷಾರ್ಥ ಪ್ರಾಪ್ತಿಯೂ ಇಲ್ಲದೆ, ನೆನಪು ಕಳೆದುಕೊಂಡವರಂತೆ ಭವಿಷ್ಯದ ಆಸೆಯೂ ಕಾಣದೆ, ಸಾಯಲೂ ಆಗದೆ, ಜೀವಹಿಡಿದು ಬದುಕಿದವಳು. ಇಂತಹ ಕುಂತಿಯ ಗುಂಡಿಗೆ ಬಲುಗಟ್ಟಿ ಎನ್ನಬಹುದು. ಈ ಪಾತ್ರದ ಸನ್ನಿವೇಶಗಳನ್ನು ನೋಡಿದಾಗ, ಆಧುನಿಕ ಸಂದರ್ಭದಲ್ಲಿಯೂ ಮಹಿಳೆ ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಲೇ ಗಟ್ಟಿ ಧೈರ್ಯದಿಂದ ಮುನ್ನಡೆಯುವುದನ್ನು ಈ ಕಾದಂಬರಿಯು ಪ್ರತಿಬಿಂಬಿಸಿದಂತೆಯಿದೆ. ಅಲ್ಲದೆ ಇವತ್ತಿನ ಸಂದರ್ಭದಲ್ಲಿ ಮಹಿಳೆ ತೋರುತ್ತಿರುವ ಧೈರ್ಯ, ವೈಚಾರಿಕ ನಿಲುವುಗಳನ್ನು ಆ ಪಾತ್ರಗಳಿಗೆ ಸಮನ್ವಯಗೊಳಿಸಲಾಗಿದೆ ಹಾಗೂ ಪುರುಷ ದೌರ್ಜನ್ಯವನ್ನು ತಡೆಗಟ್ಟಬಹುದಿತ್ತು ಎಂಬುದನ್ನು ಪಾತ್ರದ ಮೂಲಕ ವ್ಯಕ್ತಪಡಿಸಲಾಗಿದೆ.

೫.೩. ಶಕುಂತಲಾ

ಪುರಾಣ ಪಾತ್ರಗಳನ್ನು ಬೇರೆ ಬೇರೆ ಕಾಲಗಳಲ್ಲಿ ಲೇಖಕರು ತಮ್ಮ ಕಾವ್ಯ ಕೃತಿಗಳಿಗೆ ನಾಯಕ, ನಾಯಕಿಯರನ್ನಾಗಿ ಆಯ್ದುಕೊಂಡಿದ್ದಾರೆ. ಹೀಗೆ ಪುರಾಣದ ಪಾತ್ರಗಳನ್ನು ಆಯ್ದುಕೊಂಡು ಅವುಗಳನ್ನು ಚಿತ್ರಿಸುವಾಗ ತಮ್ಮ ಕಾಲದ ಧೋರಣೆಗಳ ಹಿನ್ನೆಲೆಯಲ್ಲಿ ಪುನರ್‌ಸೃಷ್ಟಿಸುವ, ಪುನರ್‌ವ್ಯಾಖ್ಯಾನಿಸುವ ಕೆಲಸವನ್ನು ಲೇಖಕರು ಮಾಡಿರುತ್ತಾರೆ. ಮಹಾಭಾರತದಲ್ಲಿ ದುಷ್ಯಂತ - ಶಂಕುತಲೆಯ ಪ್ರಸಂಗ ಅತ್ಯಂತ ಚಿಕ್ಕದಾಗಿ ನಿರೂಪಿತವಾಗಿದ್ದ, ಕಾಳಿದಾಸ ಆ ಪ್ರಸಂಗವನ್ನು ಪ್ರಸಿದ್ಧ ನಾಟಕವಾಗಿ ಬೆಳೆಸಿದ. ಮಾಸ್ತಿಯವರು ದುಷ್ಯಂತ ಮತ್ತು ಶಂಕುತಲೆಯರ ಕಥೆಯನ್ನು ವಸ್ತುವನ್ನಾಗಿಸಿಕೊಂಡು 'ಹೇಮಕೂಟದಿಂದ ಬಂದ ಮೇಲೆ' ಎಂಬ ಸಣ್ಣಕಥೆಯನ್ನು ರಚಿಸಿದ್ದಾರೆ. ಅದೇ ರೀತಿ 'ಶಂಕುತಲಾ' ಕಾದಂಬರಿ ಪ್ರಭಾವತಿಯವರ ಒಂದು ವೈಶಿಷ್ಟ್ಯಪೂರ್ಣವಾದ ಕೃತಿಯಾಗಿದೆ. ಇಲ್ಲಿ ಪೌರಾಣಿಕ ಪಾತ್ರವನ್ನು ಹೊಸ ದೃಷ್ಟಿಕೋನದಿಂದ ವಿಶ್ಲೇಷಣೆಗೊಳಪಡಿಸಲಾಗಿದೆ. ಸ್ತ್ರೀಪರ ಚಿಂತನೆಗಳಲ್ಲಿ ರೂಪುಗೊಂಡ ಕಾದಂಬರಿಯು ಸಾಮಾಜಿಕ, ಕೌಟುಂಬಿಕ, ಶೋಷಣೆಯನ್ನು ಪ್ರತಿಭಟಿಸುವ ಹಿನ್ನೆಲೆಯಲ್ಲಿ, ಸ್ತ್ರೀವಾದದ ನೆಲೆಯನ್ನು ಚಿತ್ರಿಸುವುದರ ಮೂಲಕ ಮಾನವೀಯ ನೆಲೆಯಲ್ಲಿಯೇ ಈ ಪಾತ್ರವೂ ರೂಪುಗೊಂಡಿದೆ. ಶೋಷಿತ ಮಹಿಳೆಯ ಪರವಾಗಿ ಕಾದಂಬರಿ ಪ್ರಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತದೆ. ಶಂಕುತಲಾ ಕಾದಂಬರಿಯು ಪ್ರಸಿದ್ಧವಾದ ದುಷ್ಯಂತ ಹಾಗೂ ಶಕುಂತಲಾಳ ಪ್ರೇಮ ವಿವಾಹದ ಕಥೆ ಆಗಿದೆ. ಕಾದಂಬರಿಯಲ್ಲಿ ಶಕುಂತಲ ಪಾತ್ರವನ್ನು ಆಧುನಿಕ ಛಾಯೆಯಲ್ಲಿ ನೋಡುವಂತಹ ಹೊಸ ರೂಪವನ್ನು ಲೇಖಕಿ ಕಟ್ಟಿಕೊಟ್ಟಿದ್ದಾರೆ. ಸ್ತ್ರೀ ತಾನು ಅನುಭವಿಸುವ ವಿವಿಧ ಸಮಸ್ಯೆಗಳು, ಅವಳ ನೋವು - ನಿರಾಶೆಗಳು, ಬದುಕಲು ಅವಳು ನಡೆಸುವ ಪ್ರಯತ್ನಗಳು, ಮಾನವ ಸಂಬಂಧಿ ವಿಚಾರಗಳ ಉಲ್ಲೇಖಗಳು ಈ ಕಾದಂಬರಿಯಲ್ಲಿ ಮೂಡಿಬಂದಿದೆ. ವೇದಕಾಲೀನ ಸಮಾಜದಲ್ಲಿ ಸ್ತ್ರೀಯರಿಗಿದ್ದ ಮುಕ್ತ ಸ್ವಾತಂತ್ರ್ಯ, ಮಾತೃಪ್ರಧಾನತೆ ಕ್ರಮೇಣ ಉಪನಿಷತ್

ಕಾಲಕ್ಕೆ ತಗ್ಗಿ ಹೋಗಿತ್ತು. ಅಲ್ಲದೆ ಪುರಾಣಗಳ ಕಾಲಕ್ಕಾಗಲೇ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ದೊರತ ಅಪ್ರಧಾನತೆ, ಆಕೆ ನಿರಂತರವಾಗಿ ಅನುಭವಿಸಿದ ದೈಹಿಕ ಮಾನಸಿಕ ದೌರ್ಜನ್ಯಗಳ ಅಮಾನವೀಯ ಸ್ಥಿತಿಯನ್ನು ಸ್ತ್ರೀವಾದದ ನೆಲೆಯಲ್ಲಿ ಮಾನವೀಯ ದೃಷ್ಟಿಯಿಂದ ಗುರುತಿಸುವ ಪ್ರಮುಖ ಕಾದಂಬರಿ ಇದಾಗಿದೆ.

ಶಾಕುಂತಲ ಕಣ್ವ ಋಷಿಗಳ ಸಾಕು ಮಗಳು. ಅಪೂರ್ವ ಸೌಂದರ್ಯವತಿಯಾಗಿ ಹಸ್ತನಾವತಿಯ ರಾಜನೊಡನೆ ಗಾಂಧರ್ವ ವಿವಾಹವಾಗುತ್ತಾಳೆ. ಆ ಮೂಲಕ ಅವಳ ಮನಸ್ಸಿನ ಒಳ ವ್ಯಾಪಾರಗಳಲ್ಲಿ ಕಾದಂಬರಿ, ಮೂಲ ಕಥೆಯಂತೆ ಮೂಡಿ ಬಂದಿದ್ದರು, ಅಂತ್ಯದಲ್ಲಿ ಸ್ತ್ರೀವಾದಿ ನಿಲುವಿನ ಮೂಲಕ ಪುರುಷ ಪ್ರಧಾನ ಸಮಾಜದ ಕ್ರೂರತನವನ್ನು ಬಯಲಿಗೆಳೆಯುತ್ತಾಳೆ. ಮೃಗಯಾ ವಿನೋದದಲ್ಲಿ ನಿರತನಾಗಿದ್ದ ದುಷ್ಯಂತ ಆಕಸ್ಮಿಕವೆಂಬಂತೆ ಕಣ್ವರ ಆಶ್ರಮವನ್ನು ಪ್ರವೇಶಿಸುತ್ತಾನೆ. ಅಲ್ಲಿ ಕಣ್ವರಿರುವುದಿಲ್ಲ, ಅಲ್ಲಿದ್ದ ಶಕುಂತಲೆಯನ್ನು ಭೇಟಿಯಾಗುತ್ತಾನೆ. ಇಬ್ಬರಲ್ಲೂ ಪರಸ್ಪರ ಪ್ರೇಮ ಅಂಕುರವಾಗುತ್ತದೆ. ಉಂಗುರ ಬದಲಾವಣೆ ಮಾಡಿಕೊಂಡು ಗಾಂಧರ್ವ ವಿವಾಹ ಮಾಡಿಕೊಳ್ಳುವುದರೊಂದಿಗೆ ಪರಸ್ಪರ ಸಮಾಗಮವೂ ನಡೆದು ಹೋಗಿ ಬಿಡುತ್ತದೆ. ಹಣ್ಣು ಹಂಪಲುಗಳನ್ನು ತರಲು ಆಶ್ರಮದಿಂದ ಹೊರಗೆ ಹೋಗಿದ್ದ ಕಣ್ವರು ಹಿಂದಿರುಗಿ ಬರುವಷ್ಟರಲ್ಲಿ ಇಷ್ಟೆಲ್ಲಾ ನಡೆದು ಬಿಡುತ್ತದೆ. ಎಲ್ಲವೂ ವಿಧಿಯಾಟ, ಈ ವಿಧಿಯಾಟಕ್ಕೆ ಬಲಿಯಾಗುವವಳು ಶಕುಂತಲೆ. ದುಷ್ಯಂತ ಮಹಾರಾಜನು ಶಕುಂತಲಳನ್ನು ಗಾಂಧರ್ವ ವಿವಾಹದಲ್ಲಿ ವರಿಸಿದ್ದಾನೆ. ಆಗ ಹಸ್ತಿನಾವತಿಯಿಂದ ರಾಜಕಾರ್ಯ ನಿಮಿತ್ತ ಕರೆ ಬರಲು ಹೊರಡುವಾಗ ಶಕುಂತಲಾ ನೀವೀಗ ರಾಜಧಾನಿಗೆ ಹೋಗಲೇ ಬೇಕೆ? ಎಂದು ಕೇಳುತ್ತಾಳೆ. ಆಗ ದುಷ್ಯಂತನು ಹೌದು ಶಕುಂತಲೆ, ಬಂದು ಬಹು ದಿನಗಳಾದವು ರಾಜಕಾರ್ಯ ನನನ್ನು ಕೈಬೀಸಿ ಕರೆಯುತ್ತಿದೆ. ರಾಜಧಾನಿಯನ್ನು ತಲುಪಿದ ಕೂಡಲೇ ನಿನ್ನನ್ನು ಕರೆಸಿಕೊಳ್ಳುತ್ತೇನೆ. ಎಂದಾಗ ಶಂಕುತಲಾ ತಲುಪಿದ ಕೂಡಲೇ ಏಕೆ, ಈಗಲೇ ನನ್ನನ್ನು ನಿಮ್ಮೊಂದಿಗೆ ಕರೆದೊಯ್ಯಲಾಗದೇ? ಎನ್ನುತ್ತಾಳೆ. ಆಗ ದುಷ್ಯಂತನು ಈಗಲೇ ಸಾಧ್ಯವಿಲ್ಲ ಎನ್ನುತ್ತಾನೆ. ಹಾಗಾದರೇ ತಿಳಿಯಿತು, ನಿಮ್ಮ ಪತ್ನಿಯರು ಏನೆನ್ನುವರೋ ಎಂಬ ಭಯ ಅಲ್ಲವೇ ಹೌದು, ನೀನು ಹೇಳುವುದೂ ಸರಿ ಅವರಿಗೆ ಈ ವಿಷಯ ತಿಳಿಯದು ವಸಂತಕ ಏನು ತಿಳಿದಿರುವನೋ, ಹೋಗಿ ಏನು ಹೇಳಿರುವನೋ ನನಗೆ ತಿಳಿಯುತ್ತಿಲ್ಲ. ಆದ್ದರಿಂದ ನಾನು ಹೋಗಿ ಅಲ್ಲಿಯ ಸಮಯ ಸಂದರ್ಭ ತಿಳಿದು ನಂತರ ಹೇಳುವೆ. ಅದಕ್ಕೆ ಶಕುಂತಲೆ ಸಮಯ ಸಂದರ್ಭ ಸರಿಯಿಲ್ಲದ್ದಿದ್ದರೆ? ಅಥವಾ ಸರಿಯಾಗದಿದ್ದರೆ? "ಹಾಗೇಕೆ ಸಂದೇಹಿಸುವೆ? ನಿನ್ನದು ತುಂಬಾ ಸಂದೇಹ ಪ್ರಕೃತಿ ಎಂದು ತೋರುತ್ತದೆ. ಹೌದು ನನ್ನ ಪ್ರಕೃತಿ ಹಾಗಿದಿದ್ದರೆ ನಿಮ್ಮ ಬಗ್ಗೆ ಎಲ್ಲಾ ತಿಳಿದು ನಿಮ್ಮನ್ನು ಮೋಹಿಸುತ್ತಿದ್ದೇನೆ?" (ಪ್ರಭಾವತಿ ಎಸ್.ವಿ; ೨೦೦೧; ಪು. ೪೩-೪೪). ದುಷ್ಯಂತನು ತನ್ನನ್ನು ಗಾಂಧರ್ವ ವಿವಾಹವಾಗಿ ತೊರೆದು ಹೋಗುತ್ತಾನೆಂಬ ಅಳುಕು ಶಂಕುತಲೆಯ ಪಾತ್ರದಲ್ಲಿ ಕಂಡು ಬರುತ್ತದೆ. ನಿಮ್ಮ ಜೊತೆಗೆ ಕರೆದೊಯ್ಯಲು ನಿಮ್ಮ ಪತ್ನಿ ತಾಯಿಯರ ಭಯವಿದೆ ಎಂದು ಪ್ರಶ್ನಿಸುವಲ್ಲಿ, ಒಂದು ಹೆಣ್ಣನ್ನು ನಂಬಿಸಿ ಹೋಗುವ ಎಳೆಯನ್ನು ಶಕುಂತಲೇ ಪಾತ್ರದ ಮೂಲಕ ಲೇಖಕಿಯು ತೋರಿಸಿದ್ದಾರೆ. ಮೂಲ

ಕತೆಯ ಪಾತ್ರದೊಂದಿಗೆ ಆಧುನಿಕ ಆಲೋಚನೆಯಲ್ಲಿ ನಿಂತು ಕಾದಂಬರಿಯನ್ನು ನೋಡುವಾಗ, ವಾಸ್ತವಿಕ ಬದುಕಿನಲ್ಲಿ ನಡೆಯುವ ನೈಜ ಸಂಗತಿಗಳನ್ನು, ಹೆಣ್ಣಿನ ಮುಗ್ಧತೆಯನ್ನು ಮತ್ತು ಹೆಣ್ಣು ಮೋಸಕ್ಕೆ ಬಹುಬೇಗ ಬಲಿಯಾಗುವುದನ್ನು ಶಕುಂತಲ ಪಾತ್ರದ ಮೂಲಕ ಕಟ್ಟಿಕೊಟ್ಟಿರುವುದು ಗೋಚರವಾಗುತ್ತದೆ. ಶಾಕುಂತಲ ಕಣ್ವ ಋಷಿಗಳ ಮತ್ತು ಗೌತಮಿಯ ಸಾಕು ಮಗಳಾಗಿದ್ದರೂ ಇವಳನ್ನು ಸ್ವಂತ ಮಗಳಂತೆ ಸಾಕುವಲ್ಲಿ ಗೌತಮಿಯ ಪಾತ್ರ ಕಾದಂಬರಿಯ ದೃಷ್ಟಿಯಿಂದ ಮಹತ್ವದ್ದಾಗುತ್ತದೆ. ಅಲ್ಲದೇ ಗೌತಮಿ ಸ್ತ್ರೀವಾದದ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ಹಸ್ತಿನಾವತಿಯ ದುಷ್ಯಂತ ಮಹಾರಾಜನ ಮೊದಲ ಹೆಂಡತಿಗೆ ಮಕ್ಕಳಾಗಲಿಲ್ಲವೆಂದು ಹಂಸಪದಿಕ ಎಂಬ ರಾಣಿಯನ್ನು ಮದುವೆಯಾಗುತ್ತಾನೆ. ಈ ಸಮಾರಂಭಕ್ಕೆ ಹೋಗುವುದಕ್ಕೆ ಕಣ್ವರಿಗೆ ಆಹ್ವಾನ ಬಂದಿದೆ ಎಂದು ಹೇಳುವಲ್ಲಿ ಲೇಖಕಿಯು ದುಷ್ಯಂತನು ಗಂಡು ಮಕ್ಕಳಾಗಲಿಲ್ಲವೆಂದು ಮದುವೆ ಮೇಲೆ ಮದುವೆಯಾಗುವುದರ ಬಗ್ಗೆ ಓದುಗರ ಗಮನ ಸೆಳೆಯುತ್ತಾರೆ. ಹೆಣ್ಣನ್ನು ಹೆರುವ ಯಂತ್ರವನ್ನಾಗಿ ನೋಡುವ ಇಂದಿನ ವಾಸ್ತವಕ್ಕೆ ಅನ್ವಯಿಸಿ ಗೌತಮಿ ಕಣ್ವರನ್ನು ಕುರಿತು ಹೀಗೆ ಹೇಳುತ್ತಾಳೆ. ಮತ್ತೆ ಮತ್ತೆ ಮದುವೆಯಾಗಲು ಈ ರಾಜರಿಗೆ ನೆಪ ಬೇರೆ ಬೇಕೇನು? ಇನ್ನೆರಡು ವರ್ಷಕ್ಕೆ ಇನ್ನೊಂದು ಮದುವೆಯ ಆಹ್ವಾನ ಬರುತ್ತದೆ ನೋಡುತ್ತಿರಿ ಎನ್ನುತ್ತಾಳೆ. ದುಷ್ಯಂತ ಮಹಾರಾಜನ ಪಟ್ಟಾಭಿಷೇಕ ಹಾಗೂ ಮೊದಲ ಹೆಂಡತಿಯಿಂದ ಮಕ್ಕಳಾಗಲಿಲ್ಲವೆಂದು ಎರಡನೇ ಮದುವೆಯ ಆಹ್ವಾನವನ್ನು ಕುರಿತು ಹೀಗೆ ಹೇಳುತ್ತಾಳೆ. ಇಂದಿನ ಸಮಾಜದಲ್ಲಿ ಮಕ್ಕಳಾಗಾದಿದ್ದಕ್ಕಾಗಿ ಮೊದಲ ಹೆಂಡತಿಯಲ್ಲಿ ದೋಷವಿದೆ ಎಂದು ಅವಳನ್ನು ಬಿಟ್ಟು ಮರುಮದುವೆ ಮಾಡಿಕೊಳ್ಳುವವರನ್ನು ಪ್ರತಿಭಟಿಸುತ್ತಾಳೆ. ಕಣ್ವರು ಹಿಮಾಲಯ ಪರ್ವತದ ದೀರ್ಘತಮ ಮುನಿಗಳ ಘಟಿಕೋತ್ಸವದ ಆಹ್ವಾನಕ್ಕೆ ಹೋಗುವರು. ಅಂದು ಜಿಂಕೆಮರಿಯಂತೆ ಇದ್ದ ಶಕುಂತಲ ಹಿಂದಿರುಗಿ ಬರುತ್ತಾರೆಂಬ ಸುದ್ದಿ ತಿಳಿದಾಗ ಅವಳ ಮನಸ್ಸು ಈ ರೀತಿ ಆಲೋಚಿಸುತ್ತದೆ. "ತಂದೆ ಆಶ್ರಮದಿಂದ ಹೊರಟಾಗ ವರ್ಷದ ಹಿಂದೆ ಚಿಗರೆ ಮರಿಯೊಂದಿಗೆ ಚಿಗರಿಯಂತೆ ನಲಿಯುತ್ತಾ ಬೀಳ್ಕೊಟ್ಟಿದ್ದ ನಾನು ಈಗ ಈ ಆರು ತಿಂಗಳ ಗರ್ಭದ ಭಾರ ಹೊತ್ತು ಯಾವ ಮುಖದಿಂದ ತಂದೆಯೆದುರು ಹೋಗಿ ನಿಲ್ಲುವುದು? ಅವರು ತನ್ನನ್ನು ವ್ಯಭಿಚಾರಣಿ ಎಂದು ಭಾವಿಸಿದರೆ? ಚಾರಿಣಿ ಎಂದು ಜರಿದರೆ? ಛೇ ಛೇ ಹಾಗಾಗಲಾರದು" (ಅದೇ; ಪು. ೪೬). ಹೀಗೆ ಅವರ ಅನುಪಸ್ಥಿತಿಯಲ್ಲಿ ದುಷ್ಯಂತನನ್ನು ಮೋಹಿಸಿ ಗರ್ಭಧರಿಸಿರುವುದರಿಂದ ಅವಳ ಒಳಮನಸ್ಸಿನಲ್ಲಿ ಅಂಜಿಕೆ ಅಳುಕು ವ್ಯಕ್ತವಾಗುತ್ತದೆ. ತಂದೆಯು ನನ್ನನ್ನು ವ್ಯಭಿಚಾರಿಣಿ ಎಂದು ಕರೆದರೆ ಎಂಬ ಆಂತಕಗಳು ಅವಳನ್ನು ಕಾಡುತ್ತವೆ.

ಶಕುಂತಲಾಳ ಪಾತ್ರವೂ ಪುರಾಣ ಪಾತ್ರಕ್ಕಿಂತ ಭಿನ್ನವಾಗಿ ಈ ಕಾದಂಬರಿಯಲ್ಲಿ ಮೂಡಿ ಬಂದಿದೆ. ಇವಳು ದುಷ್ಯಂತನನ್ನು ಗಾಂಧರ್ವ ವಿವಾಹದಿಂದ ವರಿಸುತ್ತಾಳೆ. ಆದರೆ ರಾಜಕಾರಣ ನಿಮಿತ್ತ ಅವಳನ್ನು ಅಗಲುತ್ತಾನೆ. ಅವನು ಬಹುಕಾಲ ಬಾರದಿದ್ದಾಗ ಇಷ್ಟು ದಿನಗಳಾದರೂ ಏಕೆ ಬರಲಿಲ್ಲ, ನನ್ನನು ಮರೆತುಹೋದನೇ ಅಥವಾ ನಾನು ಬೇಡವಾದನೇ? ಅಂತಃಪುರದಲ್ಲಿ ಅವರ ತಾಯಿ ಮತ್ತು ಪತ್ನಿಯರಿಗೆ ಹೆದರಿ ಹೀಗೆ ಮಾಡಿದರೆ? ಅವರೆಲ್ಲರಿಗೂ ಮಹಾರಾಜರು ಹೊಣೆಗಾರರಲ್ಲವೆ. ದಿನವೆಲ್ಲಾ ಕಾಡುವ

ಇನ್ನೊಂದು ಸಂದೇಹವೆಂದರೆ ಇವರ ಪ್ರೇಮಕ್ಕೆ ಸಿಲುಕಿ ಮೋಸ ಹೋದನೆ? ಹೆಣ್ಣು ಕಂಡಾಗ ಅನುಭವಿಸಿ ಅನಂತರ ಕೈಬಿಡುವರೇ, ಏನು ತಿಳಿಯದೇ ಆಶ್ರಮದಲ್ಲಿ ಬೆಳೆದ ನಾನು ಮೋಸ ಹೋದುದೇ ನಿಶ್ಚಯ ಎಂದು ಶಕುಂತಲೆ ಪಡುವ ವೇದನೆಯನ್ನು ಕಾದಂಬರಿಯಲ್ಲಿ ನೋಡಬಹುದಾಗಿದೆ. ಅಲ್ಲದೆ ಆಕೆಯ ಮನಸ್ಸಿನಲ್ಲಾದ ಅಸಹನೆ, ಅಸಹಾಯಕತೆ, ದುಗುಡದ ಚಿತ್ರಣವನ್ನು ಒಳಗೊಂಡ ಶಾಕುಂತಲೆಯ ಈ ಪಾತ್ರ ಮೂಲ ಕಥೆಯಿಂದ ಭಿನ್ನವಾಗಿದೆ. ತಾನು ಮೋಹಿಸಿದ ದುಷ್ಯಂತನು ಬಾರದಿರುವುದಕ್ಕಾಗಿ ಅವಳು ನರಳುವಲ್ಲಿ ಮೋಸ ಹೋಗಿದ್ದೇನೆ ಅರಮನೆಯಲ್ಲಿ ವಿರೋಧವಿರಬಹುದೇ ಎಂದು ಚಿಂತಿಸುತ್ತಾಳೆ. ಗಂಡಸಿನ ಕಾಮಕ್ಕೆ ಬಲಿಯಾಗಿ ಸಾಮಾನ್ಯ ಹೆಣ್ಣಾಗಿ ನಿಲ್ಲುತ್ತಾಳೆ. ದುಷ್ಯಂತನು ಅರಮನೆಯಲ್ಲಿ ಹೊಣೆಗಾರ ನಾಗಿರುವಂತೆ ಅವರು ನನಗೂ ನನ್ನ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೂ ಹೊಣೆಗಾರರೇ ಆಗಿದ್ದಾರೆ. ಅವರ ಬರುವಿಕೆಗಾಗಿ ಶಕುಂತಲೆನೊಂದು, ಬಾರದಿರುವುದಕ್ಕಾಗಿ ತನ್ನ ಆಲೋಚನೆಯಲ್ಲಿ ನಾನು ಮೋಸ ಹೋದನೇ ತಪ್ಪು ಮಾಡಿ ಕಾಲು ಜಾರಿದನೇ ಅವರು ವಂಚಕರೆ, ಹೆಣ್ಣನ್ನು ಕಂಡಾಗ ಭೋಗಿಸಿ ಮರೆಯುವರೇ ಎಂದು ಮರುಗುತ್ತಾಳೆ. ಹೀಗೆ ಹೆಣ್ಣನ್ನು ನಂಬಿಸಿ ಮೋಸ ಮಾಡುವ ಪುರುಷ ವ್ಯವಸ್ಥೆಯ ವಿರುದ್ಧ ಕಾದಂಬರಿ, ನಾಯಕಿಯ ಪಾತ್ರದ ಮೂಲಕ ಧ್ವನಿಯೆತುತ್ತದೆ. ಶೋಷಣೆಗೆ ಒಳಗಾದ ಹೆಣ್ಣಿನ ಮನಸ್ಸಿನಲ್ಲಿ ನ್ಯಾಯದ ಪ್ರಶ್ನೆಗಳನ್ನು ಲೇಖಕಿ ಕಾದಂಬರಿ ಮೂಲಕ ಮೂಡಿಸಿದ್ದಾರೆ. ಆಹಾರಕ್ಕಾಗಿ ವನಕ್ಕೆ ಹೋಗಿದ್ದ ಕಣ್ವರು ಹಿಂದಿರುಗಿ ಆಶ್ರಮಕ್ಕೆ ಬಂದಾಗ ಎಲ್ಲ ವಿಷಯ ತಿಳಿಯುತ್ತದೆ. ಶಕುಂತಲ ದುಷ್ಯಂತನ ಅರಮನೆಗೆ ಹೋಗಲು ಕಣ್ವರು ಸಿದ್ಧತೆ ನಡೆಸಿ ಅವಳನ್ನು ಕರೆತರಲು ಹೇಳುತ್ತಾರೆ. ಆಗ ಸಖಿಯರು ಶಕುಂತಲೆಗೆ ಉಂಗುರವನ್ನು ಕೇಳುತ್ತಾರೆ. "ಉಂಗುರವೆ? ಯಾವ ಉಂಗುರ?" ಎಂದು ಹೇಳಿದಾಗ ಸಖಿಯರು ಅದೇ ಮಹಾರಾಜರು ನಿನಗೆ ಕೊಟ್ಟಂತಹ ಉಂಗುರ. ಇಲ್ಲಿ ಉಂಗುರ ದುಷ್ಯಂತನನ್ನು ನೆನಪಿಸುವ ಸ್ಥಿತಿಯಲ್ಲಿ ನಿಂತರೆ ಅದು ಶಕುಂತಲೆಗೆ ಅಪನಂಬಿಕೆಯ ಸಾಂಕೇತವಾಗುತ್ತದೆ. ಅಂದು ದುರ್ವಾಸರು ಆಶ್ರಮಕ್ಕೆ ಬಂದಾಗ ಮಹಾರಾಜರೇನಾದರೂ ಮರೆತರೆ ನೆನಪಿಸಲು ಆ ಉಂಗುರ ಬೇಕು ಎನ್ನುತ್ತಾರೆ. "ನಿದ್ರಿಸುತ್ತಿರುವವರನ್ನು ಎಬ್ಬಿಸಬಹುದು ಅನಸೂಯೆ, ನಿದ್ರಿಸುತ್ತಿರುವಂತೆ ನಟಿಸುವವರನ್ನಲ್ಲ, ನಿಜವಾಗಿಯೂ ಮರೆತಿದ್ದವರನ್ನು ನೆನಪಿಸಬಹುದು. ಮರೆತಂತೆ ನಟಿಸುವವರನ್ನು ಎಚ್ಚರಿಸುವುದು ಹೇಗೆ ಹೇಳು?" (ಅದೇ; ಪು. ೭೯). ಈ ಮಾತಿನಲ್ಲಿ ಉಂಗುರ ಒಂದು ನೆಪಮಾತ್ರವಾಗುತ್ತದೆ. ದುಷ್ಯಂತನು ಶಕುಂತಲಳ ದೃಷ್ಟಿಯಲ್ಲಿ ಎಚ್ಚರವಿದ್ದು ನಿದ್ರಿಸುತ್ತಿರುವಂತೆ ಕಾಣುತ್ತಾನೆ. ಅಂದರೆ ನೆನಪಿಸುವುದು ವ್ಯರ್ಥ ಎಂದು ಹೇಳುತ್ತಾಳೆ ಹಾಗೂ ಉಂಗುರ ತೋರಿಸುವುದರಿಂದ ನನ್ನ ನೆನಪು ಬರುತ್ತದೆ ಎಂದರೆ ನಾನು ನಂಬುವುದಿಲ್ಲ. ಅವನು ನನ್ನನ್ನು ಬೇಕಂತಲೇ ಮರೆತಂತೆ ನಟಿಸುತ್ತಿರುವಾಗ ಉಂಗುರದ ಬಗೆಗಿನ ಭ್ರಮೆಯನ್ನು ಕಾದಂಬರಿಯು ತೆಗೆದು ಹಾಕುತ್ತದೆ. ಆದರೆ ಮೂಲ ಕಥೆಯಲ್ಲಿ ದುಷ್ಯಂತ ನೀಡಿದ ಉಂಗುರ ಶಕುಂತಲೆಯಿಂದ ಜಾರಿ ಹೋಗುತ್ತದೆ ಶಕುಂತಲೆ ತಿರಸ್ಕೃತಳಾಗುತ್ತಾಳೆ. ವಿಚಿತ್ರ ಪವಾಡದಂತೆ ಕೈ ಜಾರಿದ ಉಂಗುರ ಬೆಸ್ತನ ಮೂಲಕ ಮತ್ತೆ ದುಷ್ಯಂತನ ಕೈಸೇರುತ್ತದೆ. ದುಷ್ಯಂತ ಶಕುಂತಲೆಯರ ಸಹಜ ಪ್ರೀತಿಯ ಒಲವಿನ ಪ್ರೇಮಕ್ಕೆ ಇಲ್ಲಿ ಬೆಲೆಯಿಲ್ಲ. ದುಷ್ಯಂತನಿಗೆ ಇದೇ ಮೊದಲ ಮದುವೆಯಲ್ಲ

ಬೇರೆ ಹೆಂಡತಿಯರು ಆಗಲೇ ಇದ್ದಾರೆ. ಶಕುಂತಲೆ ಕೊನೆಗೂ ದುಷ್ಯಂತನನ್ನು ಭೇಟಿಯಾಗುತ್ತಾಳೆ. ಉಂಗುರ ಕೈ ಸೇರಿದ ಮೇಲೆ ದುಷ್ಯಂತನಿಗೆ ಹಳೆಯದೆಲ್ಲಾ ನೆನಪಾಗುತ್ತದೆ. ಆಕೆಯನ್ನು ತ್ಯಜಿಸಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟು ತನ್ನ ಬಗ್ಗೆ ತಾನೇ ಬೇಸರಪಟ್ಟುಕೊಳ್ಳುತ್ತಾನೆ. ಆಗ ಶಕುಂತಲೆ ಅವನನ್ನು ಸಮಾಧಾನ ಪಡಿಸುತ್ತಾ ಇದೆಲ್ಲಾ ನನ್ನ ಕರ್ಮದಿಂದಲೇ ನನಗೆ ಈ ಕಷ್ಟ ಒದಗಿತು ಎನ್ನುತ್ತಾಳೆ. ಅಂದರೆ ಎಲ್ಲವೂ ವಿಧಿ ವಿಲಾಸವೆ ಒಳ್ಳೆಯದಾದರೂ ಆಕೆಯ ಪೂರ್ವಾರ್ಜಿತ ಕರ್ಮ. ಕೆಟ್ಟದ್ದಾದರೂ ಅಷ್ಟೆ ವಾಸ್ತವವಾಗಿ ದುಷ್ಯಂತನಿಗೆ ತಕ್ಕುದಾದ ನಡವಳಿಕೆ ಇದಲ್ಲ ಎಂದು ಪ್ರಭಾವತಿಯವರು ಕಾದಂಬರಿಯಲ್ಲಿ ಉಂಗುರದ ಪ್ರಸ್ತಾಪ ಮಾಡಿದರೋ ಅದಕ್ಕೆ ಮಹತ್ವವನ್ನು ಕೊಡುವುದಿಲ್ಲ, ಪ್ರಸ್ತುತ ಆಲೋಚನೆಗಳಿಗೆ ಬೆಲೆ ಕೊಡುತ್ತಾರೆ.

ಶಕುಂತಲೆ ದುಷ್ಯಂತನಿಂದ ಗರ್ಭಧರಿಸಿ ಆರು ತಿಂಗಳಾದರೂ ಕರೆದುಕೊಂಡು ಹೋಗದರ ಬಗ್ಗೆ ಮಹಾರಾಜರನನ್ನು ಕುರಿತು ಆಶ್ರಮದಲ್ಲಿದ್ದ ಶಾರ್ಙ್ಗರವ/ಶಾರ್ಗರವ ಕೇಳುತ್ತಾನೆ. ಇಲ್ಲಿ ರಾಜಪ್ರಭುತ್ವದಡಿ ಯಲ್ಲಿ ಶೋಷಿತಳಾದ ಶಕುಂತಲೆಯ ಪರವಾಗಿ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾನೆ. 'ಇವನೆಂತಹ ರಾಜನೋ ಕಚ್ಚೆ ಹರಕು, ಎರಡು ಮೂರು ಮಕ್ಕಳು ಹುಟ್ಟಿಸಿ ಇಬ್ಬಿಬ್ಬರು ಹೆಂಡತಿಯರಿದ್ದು, ಅವರನ್ನು ಅಲ್ಲಿ ಬಿಟ್ಟು ಬಂದು ಮತ್ತೊಂದು ಹೆಣ್ಣನ್ನು ವಂಚಿಸಿದ ದುಷ್ಯಂತನನ್ನು ಕುರಿತು ಆಕ್ಷೇಪವೆತ್ತುವನು. ಶಕುಂತಲಾಳನ್ನು ಅರಮನೆಗೆ ಕರೆದೊಯ್ಯುವ ಸಂದರ್ಭವನ್ನು ಸಾಮಾಜಿಕರಿಸಿ, ಸ್ತ್ರೀ ಶೋಷಣೆಯನ್ನು ವಿವರಿಸಿ ಸಮಾಜದ ಬಗ್ಗೆ ಹಲವು ಪ್ರಶ್ನೆಗಳನ್ನು ಹಾಕುವನು. ರಾಜನಾದವನು ತನಗೆ ಇಷ್ಟ ಬಂದ ಹಾಗೆ ನಿಯಮಗಳನ್ನು ಸೃಷ್ಟಿಸಿಕೊಂಡು ತನ್ನ ಸುಖಕ್ಕಾಗಿ ಬಹುಪತ್ನಿತ್ವವನ್ನು ಅನುಸರಿಸುವವರನ್ನು ನಿಂದಿಸುತ್ತಾನೆ. ದುಷ್ಯಂತನು ತನ್ನ ತಾಯಿಯ ಮಾತಿಗೆ ಕಟ್ಟು ಬಿದ್ದೋ ಅಥವಾ ಹೆದರಿಯೋ ಅಪ್ಸರೆಯ ಮಗಳನ್ನು ಮದುವೆಯಾಗಿ ಕರೆದುಕೊಂಡು ಹೋಗಲು ಒಪ್ಪುವುದಿಲ್ಲವೇ ಎಂದು ತಿಳಿದು ಇವಳನ್ನು ಮರೆತಂತೆ ನಟಿಸಿ ಮೋಸ ಮಾಡಿದ ಅವನನ್ನು ಕುರಿತು ಶಾರ್ಙ್ಗರವ ಆಡುವ ಮಾತುಗಳು "ಅನಾರ್ಯನೆ ಹಸ್ತಿನಾವತಿಯ ರಾಜಪದದ ಮಾರ್ಯದೆಯನ್ನು ಕಳೆಯುವಂತಹ ಕೆಲಸ ಮಾಡಿದೆಯಲ್ಲವೆ? ಕಾಡಾನೆಗಳನ್ನು ಓಡಿಸುವ ನೆವದಿಂದ ನೀನೆ ಕಾಡಾನೆಯಂತೆ ಬಂದು ಋಷಿ ಪುತ್ರಿ ಶಕುಂತಲೆಯನ್ನು ಮರುಳು ಮಾಡಿದ ಅನಂತರ ಶಾಸ್ತ್ರೋಕ್ತವಾದ ವಿಧಿ ವಿಧಾನಗಳೊಂದು ಇಲ್ಲವೇ ನಿನ್ನ ರಾಜ ಪರಿವಾರವನ್ನು ಅನುಮತಿಗಾಗಿ ಕೇಳದೇ ಕಣ್ವರ ಬರುವಿಕೆಗಾಗಿ ಕಾಯದೇ ಈ ಹೆಂಗಸರ ಮಧ್ಯಸ್ಥಿಕೆಯಿಂದ ಗಾಂಧರ್ವ ವಿಧಿ ಎಂಬ ದೊಡ್ಡ ಹೆಸರಿರುವ ನಿಮ್ಮ ಕ್ಷತ್ರಿಯರ ಕಚ್ಚೆ ಹರುಕತನಕ್ಕೆ ಅನುವು ಕೊಡುವ ವಿವಾಹ ವಿಧಿಯಿಂದ ಅವಳನ್ನು ಆರು ಮಾಸಗಳ ಸುಖಿಸಿ ಗರ್ಭಿಣಿಯಾಗಿಸಿದೆ (ಅದೇ; ಪು. ೮೪) ಎಂದು ಶಾರ್ಗರವರ ಕಿಡಿನುಡಿಗಳಲ್ಲಿ ಹೆಣ್ಣಿನ ಶೋಷಣೆಯನ್ನು ಪ್ರತಿಭಟಿಸುವುದು ಕಂಡು ಬರುತ್ತದೆ. ಸಮಾಜದಲ್ಲಿ ಪುರುಷನು ತಮ್ಮ ಸ್ವಾರ್ಥಕ್ಕಾಗಿ ಎಲ್ಲಾ ನಿಯಮಗಳನ್ನು ಸ್ವಹಿತಕ್ಕಾಗಿ ಮಾಡಿಕೊಂಡು ಹೆಣ್ಣಿನ ಮೇಲೆ ಹೇರುತ್ತಿದ್ದಾನೆ. ದುಷ್ಯಂತನೇ ಶಕುಂತಲೆಯನ್ನು ಮೋಹಿಸಿ ಆಕೆ ಗರ್ಭಧರಿಸಿದಾಗ ಕರೆಯಿಸಿಕೊಳ್ಳದೇ ಇರುವುದರ ಹಿಂದೆ ರಾಜಪ್ರಭುತ್ವದ ನಿಯಮವಿದೆ ಎಂದು ನಾನಾ ಕಾರಣ ನೀಡುತ್ತಾನೆ. ಅಲ್ಲದೆ ತನ್ನ ತಪ್ಪನ್ನು ಸ್ತ್ರೀಯರ

ಮೇಲೆ ಹಾಕುವ ಪುರುಷಪ್ರಧಾನ ವ್ಯವಸ್ಥೆಯ ಕ್ರೌರ್ಯದ ಬಗ್ಗೆ ಮಹಿಳೆಯರಲ್ಲಿ ಜಾಗೃತಿಯನ್ನು ಉಂಟು ಮಾಡುವಂತೆ ಈ ಪಾತ್ರ ಮೂಡಿ ಬಂದಿದೆ.

ಸೌಂದರ್ಯಕ್ಕೆ ದಾಸನಾಗಿ ರೂಪವತಿಯಾದ ಶಕುಂತಲೆಯನ್ನು ಮೋಹಿಸಿದ ದುಷ್ಯಂತನಿಗೆ ಕನಿಷ್ಠ ಜವಾಬ್ದಾರಿಗಳಿಲ್ಲ. ಆಕೆಯನ್ನು ನಂಬಿಸಿ ವಶಗೊಳಿಸಿಕೊಂಡು ಸುಖಪಟ್ಟು ಅನಂತರದಲ್ಲಿ ಮಾತುಕೊಟ್ಟು ಹಿಂದಿರುಗದ ದುಷ್ಯಂತ ಕೊನೆಗೆ ಮರೆತು ಬಿಡುವುದೆ? ಇಲ್ಲಿ ಒಬ್ಬ ಕಪಟ ಪುರುಷನ ಪ್ರತೀಕ ದುಷ್ಯಂತ. ಈಗಲೂ ಅನೇಕ ಹೆಣ್ಣುಮಕ್ಕಳು ಪುರುಷನ ಈ ಬಗೆಯ ಅನಾಚಾರದಿಂದ ಜೀವನವೆಲ್ಲಾ ನರಳುತ್ತಾರೆ. ಕೆಲವರು ಸಮಾಜಕ್ಕೆ ಅಂಜಿ ಜೀವವನ್ನೇ ಬಿಡುತ್ತಾರೆ. ಇಂಥ ಪರಿಸ್ಥಿತಿಗೆ ಕಾರಣನಾದ ಪುರುಷ ಮಾತ್ರ ಏನೂ ಆಗಿಲ್ಲವೆಂಬಂತೆ ಎಂದಿನಂತೆ ಇದ್ದು ಬಿಡುತ್ತಾನೆ. ಪುರುಷನ ಸ್ವಾರ್ಥಕ್ಕೆ ಒಳಗಾದವಳು ಶಕುಂತಲೇ ಒಬ್ಬಳೇ ಅಲ್ಲ. ಮೇನಕೆಯು ಸಹ ಪುರುಷರಿಂದ ಈಗಾಗಲೇ ಶೋಷಣೆಗೆ ಒಳಗಾಗಿದ್ದ ಸ್ತ್ರೀ ಆದಕಾರಣ ಅವಳು ಈ ಕ್ಷತ್ರಿಯರ ಸಣ್ಣತನವನ್ನು ಬಯಲಿಗೆಳೆಯುತ್ತಾಳೆ. "ಮಗು ಅಂದು ವಿಶ್ವಾಮಿತ್ರರು ನನಗೆ, ಮಾಡಿದ್ದನ್ನೇ ಇಂದು ಈ ದುಷ್ಯಂತ ನಿನಗೆ ಮಾಡಿದ. ಇಬ್ಬರೂ ಕ್ಷತ್ರಿಯರೇ ಅಲ್ಲವೆ? ನಿನ್ನ ಸಾಕು ತಾಯಿ ನಿನ್ನನ್ನು ತೊರೆದು ಹೋಗಬಹುದು. ಆದರೆ ನಿನ್ನ ಹೆತ್ತ ತಾಯಿ ಹಾಗೆಂದಿಗೂ ಮಾಡಳು. ನಡೆ ನನ್ನ ಜೊತೆಯಲ್ಲಿ ನಿನಗೆ ಯಾರಿಲ್ಲದಿದ್ದರೂ ನಾನಿದ್ದೇನೆ (ಅದೇ; ಪು. ೮೯) ಎನ್ನುವ ಮಾತಿನಲ್ಲಿ ಸ್ತ್ರೀವಾದದ ಗಟ್ಟಿತನವಿದೆ. ಶಕುಂತಲೆಯನ್ನು ತಿರಸ್ಕರಿಸಿದ ರಾಜಪ್ರಭುತ್ವವನ್ನು ಪ್ರತಿಭಟಿಸುವಲ್ಲಿ ನಿನಗೆ ಯಾರಿಲ್ಲದಿದ್ದರೂ ನಾನು ಇದ್ದೇನೆ ಎನ್ನುವಲ್ಲಿ ಒಂದು ಹೆಣ್ಣಿನ ದುಃಖಕ್ಕೆ ಮತ್ತೊಂದು ಹೆಣ್ಣು ಸ್ಪಂದಿಸುವ ಮಾನವೀಯತೆ ಇದಾಗಿದೆ. ಪುರಾಣ ವಸ್ತುವನ್ನು ವಾಸ್ತವಿಕ ನೆಲೆಯಲ್ಲಿ ನೋಡುವುದರಿಂದ ಇಂದಿನ ಸ್ತ್ರೀಪರ ಸಮಸ್ಯೆಗಳ ಜೊತೆಗೆ ಸಮೀಕರಿಸುವುದರಿಂದ ಹೆಣ್ಣಿನ ಒಳನೋಟಗಳನ್ನು ಕಾದಂಬರಿ ಪ್ರತಿಬಿಂಬಿಸುತ್ತದೆ. ಶಕುಂತಲೇ ದುಷ್ಯಂತನ ಪೊಳ್ಳು ಮಾತುಗಳಿಂದ ತನ್ನನ್ನು ಅವನಿಗೆ ಅರ್ಪಿಸಿಕೊಂಡು ಅಸಹಾಯಕಳಾದ ಪರಿಯನ್ನು ಕಾದಂಬರಿಯು ಓದುಗರ ಮುಂದೆ ತೆರೆದಿಡುತ್ತದೆ. "ಆರು ತಿಂಗಳು ಕಾಮುಕಳಾಗಿ ಒಬ್ಬ ಕಾಮುಕನೊಡನೆ ಸುಖಿಸಿದ ಮಾತ್ರಕ್ಕೆ ಗರ್ಭದಲ್ಲಿರುವ ಈ ಪಿಂಡವೆ? ಇದು ಗಂಡು ಮಗುವಂತೆ ಚಕ್ರವರ್ತಿಯಾಗುವುದಂತೆ" ಶಕುಂತಲೆಯನ್ನು ಅರ್ಥಮಾಡಿಕೊಳ್ಳದ ದುಷ್ಯಂತನಿಗಾಗಿ ತನ್ನ ಗರ್ಭದಲ್ಲಿರುವ ಮಗುವನ್ನು ಶಪಿಸುತ್ತಾಳೆ. ಹೆಣ್ಣನ್ನು ಮನಸಾರೆ ಭೋಗಿಸಿ ಅವಳನ್ನೆ ಪುರುಷ ಮರೆಯುತ್ತಾನೆ. ಹೆಂಗಸರ ಶೀಲಾಹರಣಕ್ಕೆ ಆಸ್ಪದವಾಗದಂತೆ ಕಟ್ಟುಪಾಡುಗಳನ್ನು ನಿರ್ಮಿಸುವ ಪುರುಷ ತಾನೇ ಹೆಣ್ಣಿನಶೀಲ ಕೆಡಿಸುತ್ತಾನೆ. ಪರಿಣಾಮವಾಗಿ ಹೆಣ್ಣು ತೊಂದರೆಗೊಳಗಾಗುತ್ತಾಳೆ. ತಪ್ಪು ಇಬ್ಬರದ್ದಾದರೂ ಶಿಕ್ಷೆ ಮಾತ್ರ ಹೆಣ್ಣಿಗೆ ಗಂಡಿನಸಿನ ಹಾದಿಗೆ ಅಡ್ಡಿಗಳೇ ಇಲ್ಲ. ಅವನು ಸ್ವೇಚ್ಛಾಚಾರಿ, ಸಹನೆ, ತಾಳ್ಮೆ, ಹೊಂದಾಣಿಕೆ, ಕ್ಷಮ ಗುಣ ಕೇವಲ ಸ್ತ್ರೀಯರಿಗೆ ಮಾತ್ರ ಇರಬೇಕಾದವು ಎಂಬ ಸಾಮಾಜಿಕ ಕಟ್ಟಳೆಯನ್ನು ಶಕುಂತಲೆ ಪ್ರಶ್ನಿಸುತ್ತಾಳೆ. ತಾಯಿಗೆ, ಹೆಂಡತಿಯರಿಗೆ ಹೆದರಿ ಹೀಗೆ ಮಾಡುವುದು ಸರಿಯಲ್ಲ. ಈ ಹೆದರಿಕೆ ಅಂದು ನನ್ನನ್ನು ಕಾಮೂಕನಾಗಿ ಕೊಡುಮಾಗ ಹೆದರಿಕೆ ಏಕಿರಲಿಲ್ಲ? ಅನಂತರವೂ ಆರು ತಿಂಗಳು ರಾಜರೋಷವಾಗಿ ವಿವಾಹ ವಿಧಿಯೂ, ಸಂಸ್ಕಾರವೂ ಇಲ್ಲದೆ ಮಾಡುವ ಯಾವ ಕಾರ್ಯವೂ

ಪ್ರಯೋಜನವಾಗದು. ಅಷ್ಟೆಲ್ಲದೇ ಅವನು ವೇದಗಳನ್ನು ಅಭ್ಯಾಸ ಮಾಡಿದವನು ಅವನ ಮಡದಿಯಾಗಿದ್ದರೆ ಹೇಗಿರುತ್ತಿತ್ತು? ಆಡುವುದೊಂದು ಮಾಡುವುದೊಂದು ಎಂದು ಜೀವನವೇ ನಶ್ವರ ಎಂಬ ತಿರಸ್ಕಾರದ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ.

ಶಕುಂತಲ ಮಾರೀಚರ ಆಶ್ರಮದಲ್ಲಿ ಗಂಡು ಮಗನನ್ನು ಹೆರುತ್ತಾಳೆ. ಅದೇ ಆಶ್ರಮದ ಮಾರ್ಗವಾಗಿ ದುಷ್ಯಂತನು ಅಲ್ಲಿಗೆ ಬರುತ್ತಾನೆ. ಆಗ ತಾನು ಶಕುಂತಲೆಗೆ ಇಷ್ಟು ದಿನ ಬರದಿದ್ದಕ್ಕೆ ರಾಜಕಾರಣದ ಕಾರ್ಯದಿಂದ ನಿನ್ನನ್ನು ನೋಡಲು ಬರದೇ ಹೋದೆ ಎಂದು ಕಾರಣ ನೀಡುತ್ತಾನೆ. ಅಲ್ಲದೆ ಶಕುಂತಲೆಯನ್ನು ಹಸ್ತಿನಾವತಿಗೆ ಕರೆದುಕೊಂಡು ಹೋಗುವುದಾಗಿ ಹೇಳಿದಾಗ ಮಾರೀಚರು ಇಷ್ಟೆಲ್ಲಾ ವರ್ಷಗಳಲ್ಲಿ ನೊಂದು ಬೆಂದಿರುವ ಶಕುಂತಲೇ ಸನ್ಯಾಸವನ್ನು ಸ್ವೀಕರಿಸುವಳಂತೆ ಎಂದಾಗ ದುಷ್ಯಂತನು ಸನ್ಯಾಸವೇಕೆ ಎಂದು ಕೇಳುತ್ತಾನೆ. ಆಗ ಶಕುಂತಲೆ ಏಕೆಂದರೆ? "ಮಹಾರಾಜರೇ ನೀವು ಮಾಡಿದ ತಪ್ಪಿಗಾಗಿ ನಾನು ಗರ್ಭ ಹೊತ್ತೆ. ನೀವು ಪ್ರಜೆಗಳನ್ನು ಒಪ್ಪಿಸಲು ಇಷ್ಟು ದೀರ್ಘಕಾಲ ಪರಿಶ್ರಮಿಸುತ್ತಿರುವಾಗ ನಾನು ಬ್ರಹ್ಮಚಾರಣಿಯಾಗಿದ್ದೆ. ಆದರೆ ಈ ಯಾವ ಹಂತದಲ್ಲೂ ನಿಮ್ಮ ಸುಖಕ್ಕೆ ಕಿಂಚಿತ್ತೂ ಊನ ಬಂದಿಲ್ಲ. ಅಂತಹ ನೀವು ನನ್ನ ಸಂಕಟವನ್ನು ಏನು ಮಾಡಿದರೂ ತಿಳಿಯಲಾರಿರಿ. ಈಗ ನಾನು ಸನ್ಯಾಸಿನಿಯಾದರೂ ನಿಮ್ಮ ಸುಖಕ್ಕೇನು ಅಡ್ಡಿಯಿಲ್ಲ. ನಿಮ್ಮನ್ನು ತಣಿಸಲು ಇಬ್ಬಿಬ್ಬರು ಹೆಂಡತಿಯರಿದ್ದಾರೆ. ಮಗನಿಲ್ಲವೆಂಬ ಚಿಂತೆಯೂ ತೀರಿತು. ಈ ನಿಮ್ಮ ಮಗನನ್ನು ಕರೆದೊಯ್ಯಿರಿ. ಅವನಿಗೆ ಸಲ್ಲಬೇಕಾದ ರಾಜಸಿಂಹಾಸನವನ್ನು ಸಲ್ಲಿಸಿರಿ. ನಾನು ಮಾತ್ರ ನಿಮ್ಮೊಂದಿಗೆ ಬರುವುದಿಲ್ಲ" ಎಂದು ಶಕುಂತಲ ದುಃಖದಿಂದ ಮಾತನಾಡುತ್ತಾಳೆ. ಸಮಾಜದಲ್ಲಿ ಗಂಡಿನ ದೌರ್ಜನ್ಯಕ್ಕೆ ಬಲಿಯಾದ ಹೆಣ್ಣು ತನ್ನ ವ್ಯಕ್ತಿತ್ವಕ್ಕೆ ಬಂದಾಗ ಯಾವ ಉಪದೇಶವು ಪ್ರಯೋಜನವಾಗದು. ಅಂತಹ ಮನಸ್ಸಿನ ಅಂತರಂಗದ ಧ್ವನಿಯಿಂದ ಶಕುಂತಲೆಯ ವೇದನೆಯನ್ನು ನೋಡಬಹುದು.

ಕೊನೆಯಲ್ಲಿ ಶಕುಂತಲ ದುಷ್ಯಂತನಿಂದ ಅಷ್ಟೆಲ್ಲಾ ವೇದನೆಯನ್ನು ಅನುಭವಿಸಿದರೂ ಹಸ್ತಿನಾವತಿಯ ಅರಮನೆಗೆ ಹೋಗಿದ್ದು ರಾಣಿಯಾಗಿ ಮೆರೆಯಲಿಕ್ಕಲ್ಲ. ಅಪನಂಬಿಕೆಯ ರಾಜನ ಅಂತಃಪುರದಲ್ಲಿ ಏಕಾಂತವಾಗಿದ್ದಾಗಲೂ ಅವಳನ್ನು ತಬ್ಬಿಕೊಂಡಾಗ 'ಮಹಾರಾಜರೇ ನಿಮಗೆ ನನ್ನ ದೇಹ ಸಿಗಬಹುದೇ ಹೊರತು ಮನಸ್ಸು ಸಿಗಲಾರದು'. ಬದುಕಿನಲ್ಲಿ ಯಾರ ಬಗೆಗೂ, ಯಾವುದರ ಬಗೆಗೂ ಶಕುಂತಲೆ ಈಗ ಕಾಠಿಣ್ಯವನ್ನು ಉಳಿಸಿಕೊಂಡಿಲ್ಲ. ಅಂತೆಯೇ ತನ್ನೆಲ್ಲ ದುರಂತಗಳಿಗೆ ಕಾರಣನಾದ ದುಷ್ಯಂತನು ಬಂದು ತಪ್ಪೊಪ್ಪಿಕೊಂಡಾಗ, ರೋಷಕ್ಕೆ ಒಳಗಾಗದೆ ಕ್ಷಮಿಸುತ್ತಾಳೆ. "ಹೀಗೆ ತಾನೆಷ್ಟೇ ಪ್ರತಿಭಟಿಸಿದರೂ ನಡೆಯುವುದೆಲ್ಲ ನಡೆಯುತ್ತಲೇ ಇರುವುದನ್ನು ಗಮನಿಸಿ ಆಶ್ಚರ್ಯವೂ ಆಗುತ್ತದೆ. ಬದುಕನ್ನು ಕೇವಲ ತನ್ನ ಮೂಗಿನ ನೇರಕ್ಕೆ ನೋಡದೆ ಇತರ ದೃಷ್ಟಿಕೋನದಿಂದ ನೋಡುವುದನ್ನು ಇನ್ನಾದರೂ ಕಲಿಯಬೇಕು" ಎಂದು ಕೊಳ್ಳುವಲ್ಲಿ ಬದುಕಿನ ಹೊಂದಾಣಿಕೆಯ ತತ್ವವೇ ಮುಖ್ಯವಾಗುತ್ತದೆ. ಹುಟ್ಟಿದ ಮನೆಯೂ ಅವಳದಲ್ಲದೆ, ಅತ್ತ ಗಂಡನ ಮನೆಯೂ ಅವಳದಾಗಲಿಲ್ಲ, ಕಣ್ವಾಶ್ರಮ, ಅಯೋಧ್ಯೆಯ ಅರಮನೆ, ಮಾರೀಚಾಶ್ರಮಗಳಲ್ಲಿ ಆಕೆಯ ತಾತ್ಕಾಲಿಕ ನೆಲೆಗಳು ಮಾತ್ರ ಆಗಿವೆ. ಹೀಗಾಗಿ ಅಲ್ಲಿ ಬದುಕಿ ಉಳಿಯ

ಬೇಕಾದರೆ ಇರುವವರೊಂದಿಗೆ ರಾಜಿ ಮಾಡಿಕೊಂಡು ಎಲ್ಲರ ಇಷ್ಟಾನಿಷ್ಟಗಳನ್ನು ಗಮನಿಸಿಕೊಂಡು, ಅದಕ್ಕೆ ತನ್ನನ್ನು ರೂಪಿಸಿಕೊಳ್ಳುವ ಹೆಣ್ಣಿನ ದುರಂತಕ್ಕೆ ಸಾಕ್ಷಿಯಾಗಿದ್ದಾಳೆ. ಸಾಂಪ್ರದಾಯಿಕ ಚೌಕಟ್ಟಿನಲ್ಲಿ ನಲುಗುವ ಹೆಣ್ಣಿನ ಸ್ಥಿತಿಗೆ ಸಾಕ್ಷ್ಯವಾಗಿ ಶಕುಂತಲೆ ಕಾಣಿಸುತ್ತಾಳೆ.

'ಶಕುಂತಲ' ಕಾದಂಬರಿ ಪ್ರಭಾವತಿಯರ ಸ್ತ್ರೀಪರ ಚಿಂತನೆಯುಳ್ಳ ಕಾದಂಬರಿಯಾಗಿದೆ. ಮೂಲ ಕತೆಯ ಕೆಲವು ಪ್ರಸಂಗಗಳನ್ನು ಯತವತ್ತಾಗಿರಿಸಿ ಶಕುಂತಲೆಯನ್ನು ಸಾಮಾನ್ಯ ಹೆಣ್ಣಾನ್ನಾಗಿ ಸೃಷ್ಟಿಸಿದೆ. ದುಷ್ಯಂತ ಮಹಾರಾಜನ ಮೋಹಕ್ಕೆ ಬಲಿಯಾಗಿ ಗಾಂಧರ್ವ ವಿವಾಹ, ಸಾಕು ತಂದೆಯ ಅನುಪಸ್ಥಿತಿಯಲ್ಲಿ ಗೌತಮಿಯ ಉಪಸ್ಥಿತಿಯಲ್ಲಿ ನಡೆದು ಹೋಗುತ್ತದೆ. ದುಷ್ಯಂತ ಮಹಾರಾಜ ತಾಯಿಯ ಮಾತಿನಂತೆ ರಾಜ್ಯದ ಉತ್ತರಾಧಿಕಾರಕ್ಕಾಗಿ ಹೆಣ್ಣುಗಳ ಮೇಲೆ ಹೆಣ್ಣುಗಳನ್ನು ಮದುವೆ ಮಾಡಿಕೊಳ್ಳುತ್ತಾನೆ. ಶಕುಂತಲೆಯ ವೃತ್ತಾಂತವನ್ನು ತಿಳಿದು ಇವಳು ವಿಶ್ವಾಮಿತ್ರ ಹಾಗೂ ಮೇನಕೆಯರ ಸಮಾಗಮದಿಂದ ಜನಿಸಿದವಳು. ಆದ್ದರಿಂದ ದುಷ್ಯಂತನು ಅವಳನ್ನು ಅರಮನೆಗೆ ಕರೆದುಕೊಂಡು ಹೋಗದೇ ಇರುವುದಕ್ಕೆ ಕಾದಂಬರಿ ಹೊಸ ಕಾರಣಗಳನ್ನು ನೀಡುತ್ತದೆ. ಅವಳು ಅಪ್ಸರೆಯ ಮಗಳು ಎಂದು ತಾಯಿಯ ವಿರೋಧವಿದೆ. ದೇವೇಂದ್ರನ ಸಲಹೆಯಂತೆ ಅಪ್ಸರೆಯ ಮಗನು ರಾಜ್ಯದ ಚಕ್ರವರ್ತಿಯಾಗಬಹುದು. ಆದರೆ ಅಪ್ಸರೆ ಪಟ್ಟಣದ ರಾಣಿಯಾಗುವಂತಿಲ್ಲ. ಇಂತಹ ವೈರುಧ್ಯಗಳನ್ನು ಕುರಿತು ಕಾದಂಬರಿಯಲ್ಲಿ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ಮಹಾಭಾರತದ ಮೂರು ಸ್ತ್ರೀಪಾತ್ರಗಳನ್ನು ಕೇಂದ್ರವಾಗಿರಿಸಿಕೊಂಡು ಪ್ರಭಾವತಿ ಯವರು ರಚಿಸಿದ ಈ ಕಾದಂಬರಿಗಳು ಪುರಾಣ ಕಥೆಗಿಂತ ತೀರಾ ಭಿನ್ನವಾದ ನೆಲೆಯಲ್ಲಿ ಸಾಗುತ್ತದೆ. ಪುರಾಣದ ಸಾಂಪ್ರದಾಯಿಕ ಸ್ತ್ರೀಪಾತ್ರಗಳು ಇಲ್ಲಿ ಆಧುನಿಕ ಮಹಿಳಾ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ಹೆಣ್ಣುಗಳಾಗಿ ಕಾಣಿಸುತ್ತಾರೆ. ಮಹಾಭಾರತದ 'ದ್ರೌಪದಿ' ಪಾತ್ರಕ್ಕೆ ಮಾತ್ರ ಕನ್ನಡದ ಪಂಪ, ರನ್ನ, ಕುಮಾರವ್ಯಾಸ ಆದಿ ಕವಿಗಳ ಕಾವ್ಯಗಳಲ್ಲೇ ಒಂದು ಬಗೆಯ ಹೊಸತನದ ಆಯಾಮ ಪ್ರಾಪ್ತವಾಗಿತ್ತು. ಪ್ರಭಾವತಿಯವರ ಕಾದಂಬರಿಯಲ್ಲಿ ದ್ರೌಪದಿ ಪಾತ್ರ ಇನ್ನಷ್ಟು ಆಧುನಿಕವಾಗಿ ಚಿತ್ರಿತವಾಗಿದೆ. 'ಕುಂತಿ' ಕಾದಂಬರಿಯ ಕುಂತಿ ಪಾತ್ರವೂ ವಿಭಿನ್ನವಾದ ಮನೋಧರ್ಮವುಳ್ಳದು ಭೈರಪ್ಪನವರ 'ಪರ್ವ ಮತ್ತು ಇರಾವತಿ ಕರ್ವೆ'ಯವರು ಮರಾಠಿ ಕೃತಿ 'ಯುಗಾಂತ'ಗಳಲ್ಲಿ ವಿಶ್ಲೇಷಣೆಗಳನ್ನು ದಾಟಿ ಪ್ರಭಾವತಿಯವರ ಕುಂತಿ ಪಾತ್ರ ಬೆಳೆಯುತ್ತದೆ. ಪಾತ್ರದ ಆತ್ಮವಿಶ್ಲೇಷಣೆಗೆ ಇಲ್ಲಿ ಸಾಕಷ್ಟು ಅವಕಾಶ ಕಲ್ಪಿಸಿಕೊಡಲಾಗಿದೆ. ಓರ್ವ ಕನ್ಯೆಯಾಗಿ, ಪಾಂಡುವಿನ ಮಡದಿಯಾಗಿ, ಪಾಂಡವರ ತಾಯಿಯಾಗಿ, ದ್ರೌಪದಿಯ ಅತ್ತೆಯಾಗಿ, ಎಲ್ಲಕ್ಕೂ ಮುಖ್ಯವೆಂಬಂತೆ ಮಾನವೀಯ ಮೂರ್ತಿಯಾಗಿ ಆಕೆಯ ಪಾತ್ರವನ್ನು ಇಲ್ಲಿ ಪುನರ್‌ಸೃಷ್ಟಿ ಸಲಾಗಿದೆ. ಅದೇ ರೀತಿ 'ಶಕುಂತಲಾ' ಕಾದಂಬರಿಯ ಶಕುಂತಲೇ ಪಾತ್ರ ಕೂಡ ಆಧುನಿಕ ಮಹಿಳಾ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ಹೆಣ್ಣಿನ ಪ್ರತೀಕವಾಗಿದೆ. ದುಷ್ಯಂತನು ಶಕುಂತಲೆಯನ್ನು ಮರೆಯುವುದಕ್ಕೆ ದುರ್ವಾಸರ ಶಾಪವನ್ನು ನೆಪವಾಗಿಸದೇ, ದುಷ್ಯಂತನನ್ನೇ ನೇರ ಹೊಣೆ ಮಾಡುವ ಕಾದಂಬರಿಯ ಸನ್ನಿವೇಶ ಚಿತ್ರಣದಲ್ಲಿ ಹೊಸತನವಿದೆ. ಪುರುಷ ಪ್ರಧಾನ ವ್ಯವಸ್ಥೆಯ ಪ್ರತೀಕವಾಗಿ ಇಲ್ಲಿ ದುಷ್ಯಂತ ಕಂಡು ಬರುತ್ತಾನೆ.

ಪ್ರಭಾವತಿಯವರು ರಚಿಸಿದ 'ದ್ರೌಪದಿ', 'ಕುಂತಿ', 'ಶಕುಂತಲಾ', ಕಾದಂಬರಿಯ ಇವಿಷ್ಟೇ ಪಾತ್ರಗಳಲ್ಲದೆ ಸುಭದ್ರ, ಅಂಬೆ, ಅಂಬಿಕೆ, ಅಂಬಾಲಿಕೆ, ಮಾದ್ರಿ, ಸತ್ಯವತಿ ಹಿಡಿಂಬೆ, ಗಂಗೆಯರಂಥ ಅನೇಕಾನೇಕ ಸಣ್ಣ ಪುಟ್ಟ ಸ್ತ್ರೀ ಪಾತ್ರಗಳೂ ಮಹಾಭಾರತದೊಳಗೆ ಇಡಿಕಿರಿದು ತುಂಬಿವೆ. ಅವೆಲ್ಲವೂ ಆಪ್ತವೂ, ವಾತ್ಸಲ್ಯಪೂರ್ಣವೂ ಆದವುಗಳು. ತಮಗೊದಗಿದ ಸ್ಥಾನಗಳಲ್ಲಿ ಸಾಮರ್ಥ್ಯ ಮೀರಿಯೇ ಕಾರ್ಯನಿರ್ವಹಿಸಿ ಸಾಗುವ ಉದಾತ್ತ ದರ್ಶನಗಳನ್ನು ಪ್ರತಿಬಿಂಬಿಸಿ ಮೆರೆಯುವ ನಾರಿ ಪಾತ್ರಗಳಾಗಿ ಕಂಡು ಬರುತ್ತವೆ. ಆದರೆ ಅವುಗಳು ಸಾಮ್ರಾಜ್ಯದ, ಸಂಸಾರದ, ಔನ್ನತ್ಯಕ್ಕೆ ಕಾರಣವಾಗುವಂತೆ ಅವುಗಳ ಅಧಃಪತನಕ್ಕೆ ಕಾರಣವಾಗುತ್ತವೆ. ಇವುಗಳು ಮನುಷ್ಯನ ಸಹಜ ಗುಣಗಳನ್ನು ಹೊಂದಿರುವುದು. ಮೇಲಾಗಿ ಮನುಷ್ಯ ಪಾತ್ರಗಳೇ ಆದುವುಗಳಾದುದರಿಂದ ಅವುಗಳಲ್ಲಿ ಪರಸ್ಪರ ಪ್ರೀತಿ, ಆತ್ಮೀಯತೆ, ಸ್ನೇಹ ಮನೋಭಾವ, ಕರುಣೆ, ದಯೆ, ನೈತಿಕತೆ, ಪ್ರಾಮಾಣಿಕತೆ, ದುಷ್ಟತನ, ಮೋಸ, ಸರಳತೆ, ಸಮಾನತೆ, ಗುರು ಹಿರಿಯರ ಬಗೆಗಿನ ಗೌರವ, ಕೋಪ ತಾಪ ಮುಂತಾದ ಬದುಕಿನ ಧನಾತ್ಮಕ - ಋಣಾತ್ಮಕ ಗುಣಗಳೊಂದಿಗೆ ನಿಸರ್ಗ ಕಾಳಜಿ, ಪ್ರಾಣಿ ಪಕ್ಷಿಗಳನ್ನು ಕುರಿತು ತಾಳುವ 'ಜೀವಪರ' ಚಿಂತನೆಗಳು ಮುಖ್ಯವಾಗಿ ನಿಲ್ಲುತ್ತದೆ. ಆದರೆ ಗುಣಗಳು ಕೆಲವೊಮ್ಮೆ ಕವಿಯ ಮನಸ್ಥಿತಿಗೂ ಅಥವಾ ಪಾತ್ರದ ಮನಸ್ಥಿಗೂ ಏರ್ಪಡುವ ಮುಖಾಮುಖಿತನದ ಹಿನ್ನೆಲೆಯಲ್ಲಿ ಭಿನ್ನವಾಗುವುದು ಸಾಮಾನ್ಯ ಅಂಶವಾಗುತ್ತದೆ.

ಅಷ್ಟೇ ಅಲ್ಲದೆ ಈ ಕಾದಂಬರಿಗಳಲ್ಲಿನ ಮಾನವ ಸ್ವಭಾವ ವೈವಿಧ್ಯಮಯವಾಗಿದೆ. ಒಬ್ಬೊಬ್ಬ ವ್ಯಕ್ತಿಯ ಸ್ವಭಾವವೂ ಒಂದೊಂದು ಬಗೆಯಾಗಿದೆ. ಒಬ್ಬೊಬ್ಬರದು, ಒಂದೊಂದು ಸಮಸ್ಯೆಯೇ ಆಗಿದೆ. ಇಲ್ಲಿನ ನೋವಿನ ಅನುಭವಗಳು ಸ್ತ್ರೀಲೋಕದಲ್ಲಿ ಅಭಿವ್ಯಕ್ತಗೊಂಡು ಸಂವಾದಗಳಂತೆ ದಿಗ್ಭ್ರಮೆ ಗೊಳಿಸುತ್ತವೆ. ಭಾರತೀಯ ಸಾಮಾಜಿಕ ಜನಜೀವನ ಎಂಥ ಅಸಂಬದ್ಧ ನಡಿಗೆಯದು ಎಂಬುದು ಮನದಟ್ಟಾಗುತ್ತದೆ. ಹಾಗೆ ನೋಡಿದರೆ ಕಾದಂಬರಿ ಮತ್ತು ಪುರಾಣಗಳಲ್ಲಿ ಬರುವ ಪಾತ್ರಗಳನ್ನೆಲ್ಲ ವಿಶ್ಲೇಷಣೆಗೊಳಪಡಿಸುವುದೆಂದರೆ ಸವಾಲಿನ ಕೆಲಸವೆ. ಆದರೆ ಕೆಲವೇ ಪಾತ್ರಗಳನ್ನು ನೋಡಿದರೂ ಸಹ ಹೆಣ್ಣು ಅವಹೇಳನಕ್ಕೊಳಗಾಗಿರುವುದು ಸ್ಪಷ್ಟವಾಗಿಯೇ ಗೋಚರಿಸುತ್ತದೆ.

ಹೀಗೆ ಮಾನವೀಯತೆಯು ಸ್ವಾರ್ಥದ ಪರಿಧಿಯನ್ನು ಮೀರಿ, ಮನುಷ್ಯ, ಮನುಷ್ಯರ ನಡುವೆ ಸಮಾನ ಸ್ಪಂದನ, ಸಹನೆ, ಪ್ರಾಮಾಣಿಕತೆ ಮೆರೆದ ಪಾತ್ರಗಳು ಅನೇಕ. ಅದರಲ್ಲೂ ಅಂಥ ಸ್ತ್ರೀ ಪಾತ್ರಗಳು ಭಾರತೀಯ ಸಾಹಿತ್ಯದಲ್ಲೇ ವಿರಳ. ಆದ್ದರಿಂದ ಅಂಥ ಎಲ್ಲ ಗುಣ ಮೌಲ್ಯಗಳ ಪ್ರತಿರೂಪಗಳು ಇದಾಗಿವೆ ಎನ್ನಬಹುದು.

• • •

ಅಧ್ಯಾಯ ಆರು

ಸಮಾಪನ

ಅಧ್ಯಾಯ ಆರು

ಸಮಾಪನ

ಪ್ರಾಚೀನ ಭಾರತೀಯ ಸಮಾಜವು ಸಾಮಾಜಿಕ, ರಾಜಕೀಯ ಸಂಘರ್ಷಗಳಿಂದ ತುಂಬಿ ಹೋಗಿ ಯುದ್ಧದ ಕೆನ್ನಾಲಗೆಯಲ್ಲಿ ಸದಕಾಲವೂ ಕರಾಳತೆಯನ್ನು ಕಂಡದ್ದುಂಟು. ಇದು ಆದಿಮಾನವನಿಂದ ಆಧುನಿಕ ಮಾನವನವರೆಗೂ ಜರಗುತ್ತಲೇ ಬಂದಿದೆ. ಈ ನೆಲೆಯಲ್ಲಿ ಜಗತ್ತಿನ ಇತಿಹಾಸ - ಪುರಾಣಗಳ ಪುಟಗಳಲ್ಲಿ ಯುದ್ಧದ ಕಲೆಗಳು ಉಳಿದು ಬಂದಿರುವುದು ಗೋಚರಿಸುತ್ತವೆ. ಇಂಥ ಕಲೆಗಳನ್ನು ಅಂಟಿಸಿಕೊಂಡೇ ನಮ್ಮ ಧರ್ಮ ಗ್ರಂಥಗಳಾದ 'ರಾಮಾಯಣ' ಮತ್ತು 'ಮಹಾಭಾರತ'ಗಳು ಗೋಚರಿಸುತ್ತವೆ.

ಹೀಗೆ ಜಗತ್ತಿನ ಚರಿತ್ರೆ ಪ್ರತಿ ಹಂತದ ಸಂಘರ್ಷಗಳೊಳಗೇ ಪ್ರತಿಪಾದಿತವಾಗುವ ಇನ್ನಿತರ ನಡಾವಳಿಗಳು ಮೌಲ್ಯಗಳನ್ನು ಹೊಂದಿ ವ್ಯಕ್ತಿಯ ಬದುಕಿನಲ್ಲಿ ಬರಲು ಹವಣಿಸುತ್ತವೆ. ಅಂತೆಯೇ ಮತ್ತೊಂದು ಮುಖದ ಮೌಲ್ಯವನ್ನು ಬಯಸುತ್ತವೆ. ಆ ನೆಲೆಯಲ್ಲಿ ಸಂಸ್ಕೃತಿಯ ತಿರುಗು ನೋಟದಲ್ಲಿ ಕವಿಗಳು ಬದುಕಿನ ವರ್ತಮಾನಕ್ಕೆ ಅನುಗುಣವಾಗಿ ಅವುಗಳನ್ನು ಅಳೆದು ತೂಗಿ ತಮ್ಮ ಕೃತಿಗಳಲ್ಲಿ ಮೂಡಿಸಿದ್ದಾರೆ. ಇಂಥ ಜೀವಬಂಧುರ ಗುಣಗಳೊಂದಿಗೆ ನಾಡಿನ ವೈಶಿಷ್ಟ್ಯ ಬಿಂಬಿಸುವ 'ರಾಮಾಯಣ' ಮತ್ತು 'ಮಹಾಭಾರತ'ಗಳು ಈ ಗುಣಮೌಲ್ಯಗಳನ್ನು ಸಾರಿದ ಉದ್ಗ್ರಂಥವಾಗಿವೆ. ಇವುಗಳನ್ನು ಆನಂತರದ ಕಾಲಘಟ್ಟದ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಬಳಸಿಕೊಂಡು ಇನ್ನಷ್ಟು ಸಮಕಾಲೀನಗೊಳಿಸಿದ್ದಾರೆ. ಅವೆಲ್ಲವೂ ಆಯಾ ಕಾಲಘಟ್ಟದ ಅವತರಣಿಕೆಗಳಾಗಿ ಅನಾವರಣಗೊಂಡಿವೆ. ಇಂಥ ಹಲವು ಅವತರಣಿಕೆಗಳಲ್ಲಿ ಅನುವಾದಗಳು, ಬಿಡಿಗ್ರಂಥಗಳು, ಬಿಡಿಪ್ರಸಂಗಗಳು ಕಂಡು ಬಂದಿವೆ. ಈ ನೆಲೆಯಲ್ಲಿ ಪ್ರಭಾವತಿಯವರ 'ಪೌರಾಣಿಕ ಕಾದಂಬರಿಗಳು' ಮಹತ್ವವನ್ನು ಪಡೆದುಕೊಳ್ಳುತ್ತವೆ.

ಪ್ರಭಾವತಿಯವರ ಕಾದಂಬರಿಯ ವಸ್ತುವಿನಲ್ಲಿ ಸ್ತ್ರೀ ಬದುಕಿಗೆ ಸಂಬಂಧಿಸಿದ ವಿವರಗಳು ಇರುತ್ತವೆ. ಹೆಣ್ಣು ತಾನು ಅನುಭವಿಸುವ ವಿವಿಧ ಸಮಸ್ಯೆಗಳು, ಅವಳ ನೋವು - ನಿರಾಶೆಗಳು, ಬದುಕಲು ಅವಳು ನಡೆಸುವ ಪ್ರಯತ್ನಗಳು ಮಾನವ ಸಂಬಂಧಿ ವಿಚಾರಗಳ ಉಲ್ಲೇಖಗಳು ಇವೆ. ಸ್ತ್ರೀವಾದಿ ನೆಲೆಯಲ್ಲಿ ರಚನೆಯಾದ 'ಸೀತಾ' ಮತ್ತು 'ಅಹಲ್ಯಾ' ಕಾದಂಬರಿಗಳಲ್ಲಿ ಬರುವ ರಾಮನ ಪಾತ್ರಗಳಲ್ಲಿ

ವೈರುಧ್ಯವಿರುವುದನ್ನು ಕಾಣಬಹುದು. 'ಅಹಲ್ಯಾ' ಕಾದಂಬರಿಯಲ್ಲಿ ಸ್ತ್ರೀಪರ ನಿಲುವುಳ್ಳವನಾಗಿ ಕಂಡು ಬಂದರೆ 'ಸೀತಾ' ಕಾದಂಬರಿಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಪ್ರತೀಕವಾಗಿ ಕಾಣಿಸುತ್ತಾನೆ. ಸೀತೆಯ ಬಗ್ಗೆ ಕೇಳಿದ ರಾಮನು ಲೋಕಾಪವಾದಕ್ಕೆ ಅಂಜಿ ಆಕೆಯನ್ನು ದೂರ ಮಾಡುತ್ತಾನೆ. ಅಹಲ್ಯಾ ಕಾದಂಬರಿಯಲ್ಲಿ 'ಅಹಲ್ಯೆ'ಯ ಪರವಹಿಸಿ ಗೌತಮನಿಗೆ ಹಿತವಚನವನ್ನು ಹೇಳುತ್ತಾನೆ. ಹೀಗೆ ಎರಡು ಕಾದಂಬರಿಗಳ ರಾಮನ ಪಾತ್ರಗಳಲ್ಲಿ ದ್ವಂದ್ವವಿರುವುದನ್ನು ಕಾಣಬಹುದು.

ಪುರುಷಪ್ರಧಾನ ಸಮಾಜವಾದ ಕಾರಣ ಅಹಲ್ಯೆ, ಸೀತೆ, ದ್ರೌಪದಿ, ಶಾಕುಂತಲಾ, ಕುಂತಿ, ಮಾದ್ರಿ ಮುಂತಾದವರು ಪುರುಷರಿಂದ ಹಿಂಸೆ ಅನುಭವಿಸಿದರು. ಇದು ಪುರಾಣ ಮತ್ತು ಚರಿತ್ರೆಯಿಂದ ಕಂಡುಕೊಂಡ ಸತ್ಯ ಸಂಗತಿಯಾಗಿದೆ. ರಾಜರು ಸರ್ವಾಧಿಕಾರಿಗಳಾಗಿದ್ದು ಊರಿನ ಎಲ್ಲ ಹೆಂಗಸರ ಮೇಲೆ ಹಕ್ಕನ್ನು ಚಲಾಯಿಸುತ್ತಿದ್ದರು. ರಾಜಮನೆತನದ ಸ್ತ್ರೀಯರನ್ನು ಹೊರಗಿನ ಗಂಡಸರ ಕಣ್ಣಿಗೆ ಬೀಳದಂತೆ ಪ್ರತ್ಯೇಕ ಅಂತಃಪುರದಲ್ಲಿರಿಸಲಾಗುತ್ತಿತ್ತು. ಸಭೆಗಳಲ್ಲಿ ಗಂಡಸಿನೊಂದಿಗೆ ಕೂಡಲು ಆಕೆಗೆ ಹಕ್ಕಿರಲಿಲ್ಲ. ಪುರುಷನ ಕಾಮ ಪೂರೈಕೆಗೆ ಸ್ತ್ರೀ ಒಂದು ವಸ್ತುವಾಗಿದ್ದಳು. ಅವಳ ಅಲಂಕಾರ ಗಂಡಿನ ಕಣ್ಣಿಗೆ ಅವಳು ಅಂದವಾಗಿ ಕಾಮೋತ್ತೇಜಕವಾಗಿ ಕಾಣಬೇಕು ಎಂಬ ಉದ್ದೇಶದಿಂದಲೇ ಇರುತ್ತಿತ್ತು. ಕುಂತಿ, ಅಹಲ್ಯಾ, ಸೀತಾ, ಈ ಮೂರು ಪಾತ್ರಗಳನ್ನು ನೋಡಿದಾಗ ಇವರು ಪ್ರಕೃತಿ ಸಹಜವಾದ ಲೈಂಗಿಕ ಕ್ರಿಯೆಯಲ್ಲಿ ಅತೃಪ್ತರಾಗಿದ್ದರು. ಅಂತಹ ಅತೃಪ್ತ ಭಾವಗಳನ್ನು ಇಲ್ಲಿ ಅವರು ನೇರವಾಗಿ ಪ್ರತಿಭಟಿಸಲು ಮುಂದಾದರು. ಈ ಪ್ರತಿಭಟನೆ ಮನುಷ್ಯನ ಮೂಲಭೂತ ಹಕ್ಕು ಎಂಬುದನ್ನು ಇಲ್ಲಿ ಪಾತ್ರಗಳ ಮುಖಾಂತರವಾಗಿ ಚಿತ್ರಿಸಲಾಗಿದೆ.

ಮೂಲ ಕಾದಂಬರಿಗಳಲ್ಲಿ ಚಿತ್ರಿತಗೊಂಡಿರುವ ಪಾತ್ರಗಳಿಗೂ ಮತ್ತು ಪ್ರಭಾವತಿಯವರ ಕಾದಂಬರಿಗಳಲ್ಲಿ ಬಿಂಬಿತಗೊಂಡಿರುವ ಪಾತ್ರಗಳಿಗೂ ವ್ಯತ್ಯಾಸಗಳಿರುವುದನ್ನು ನೋಡಬಹುದು. ಅಲ್ಲಿ ಮೌನವಾದ ಭಾವಗಳು ಇವರ ಕಾದಂಬರಿಗಳಲ್ಲಿ ಪ್ರತಿಭಟಿತ ಧ್ವನಿಯಾಗಿ ನಿಂತಿರುವುದು ಕಂಡು ಬರುತ್ತದೆ.

'ಪುರಾಣ' ಇದೊಂದು 'ಹಳೆಬೇರು, ಹೊಸಚಿಗುರಿನ ಹಾಗೆ'.... ಸದಾ ಹೊಸತನವನ್ನು ಹುಡುಕುವಲ್ಲಿ ತನ್ನ ಗಟ್ಟಿತನವನ್ನು ಉಳಿಸಿಕೊಂಡಿದೆ ಎನ್ನಬಹುದು. ಈ ಪುರಾಣವನ್ನು ಸಮಕಾಲೀನ ಸ್ಥಿತಿಗೆ ಅನುಗುಣವಾಗಿ ವಾಸ್ತವ ಬದುಕಿನ ವಿಷಯವನ್ನು ಕಾದಂಬರಿಗಳಲ್ಲಿಯ ಪಾತ್ರಗಳ ಮೂಲಕ ಹೆಣೆದಿದ್ದಾರೆ.

ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನದ ವಸ್ತುವು ಬಹಳಷ್ಟು ವಿಷಯ ವ್ಯಾಪ್ತಿಯನ್ನು ಹೊಂದಿವೆ. ನಮ್ಮ ಪುರಾಣ ಕೃತಿಗಳಲ್ಲಿ ಹಲವಾರು ಸ್ತ್ರೀ ಪಾತ್ರಗಳು ಬರುತ್ತವೆ. ಅಂಥ ಸ್ತ್ರೀಪಾತ್ರಗಳಲ್ಲಿ ಕೆಲವು ಪ್ರಧಾನ ಪಡೆದಿದ್ದರೆ ಮತ್ತೆ ಕೆಲವು ಗೌಣವಾಗಿ ಕಂಡು ಬರುತ್ತವೆ. ಪ್ರಧಾನವಾಗಿ ಚಿತ್ರಿತವಾಗಿರುವ ಸ್ತ್ರೀಪಾತ್ರಗಳು ಸಂಪ್ರದಾಯಿಕ ಪುರುಷಪ್ರಧಾನ ವ್ಯವಸ್ಥೆಗೆ ಅಧೀನವಾಗಿಯೇ ಬದುಕುತ್ತವೆ. ಅಂತಹ ಸ್ತ್ರೀಪಾತ್ರಗಳನ್ನೆಲ್ಲ ಆಧುನಿಕ ಸ್ತ್ರೀವಾದಿ ದೃಷ್ಟಿಕೋನದಿಂದ ವ್ಯಾಖ್ಯಾನಿಸಲು ಸಾಕಷ್ಟು ಅವಕಾಶಗಳಾಗಿವೆ. ಕೌಸಲ್ಯೆ, ಸುಮಿತ್ರ, ಕೈಕೇಯಿ, ಸೀತೆ, ಊರ್ಮಿಳೆ, ಶಬರಿ, ಅಹಲ್ಯಾ, ಕುಂತಿ, ಮಾದ್ರಿ, ಗಾಂಧರಿ,

ದ್ರೌಪದಿ, ಶಕುಂತಲೆ, ಅಮೃತಮತಿ, ಮಾಧವಿ, ಮುಂತಾದ ಪೌರಾಣಿಕ ಸ್ತ್ರೀಪಾತ್ರಗಳು ಆಧುನಿಕ ಸಾಹಿತ್ಯ ಕೃತಿಗಳಲ್ಲಿ ಮರುಸೃಷ್ಟಿಗೆ, ಮರುವ್ಯಾಖ್ಯಾನಕ್ಕೆ ಒಳಗಾಗಿವೆ. ಅಂಥ ಮರುವ್ಯಾಖ್ಯಾನಗಳನ್ನೆಲ್ಲ ಆಳವಾಗಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ಆದರೆ ಪ್ರಸ್ತುತ ಎಂ.ಫಿಲ್ ಅಧ್ಯಯನದ ಸೀಮಿತ ಅವಧಿ ಮತ್ತು ಚೌಕಟ್ಟಿನೊಳಗೆ ಅದು ಕಷ್ಟಸಾಧ್ಯ. ಆದರೂ ಆ ಹಾದಿಯಲ್ಲಿ ಕೈಗೊಂಡ ಒಂದು ಪ್ರಯತ್ನವಾಗಿ ಪ್ರಸ್ತುತ ಅಧ್ಯಯನವು ಈ ಕ್ಷೇತ್ರದಲ್ಲಿ ವ್ಯಾಪಕ ಅಧ್ಯಯನ ಕೈಗೊಳ್ಳುವವರಿಗೆ ಪ್ರೇರಕವಾಗಬಹುದೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ.

• • •

ಅನುಬಂಧ

೧. ಎಸ್.ವಿ. ಪ್ರಭಾವತಿಯವರ ಬದುಕಿನ ಪ್ರಮುಖ ಘಟ್ಟಗಳು

೨. ಆಕರ ಗ್ರಂಥಗಳು

೧. ಎಸ್.ವಿ. ಪ್ರಭಾವತಿಯವರ ಬದುಕಿನ ಪ್ರಮುಖ ಘಟ್ಟಗಳು

ಜನನ	:	೨೫.೦೭.೧೯೫೦, ಹೊಸಹೊಳಲು (ಮಂಡ್ಯ ಜಿಲ್ಲೆ)
ವಿದ್ಯಾಭ್ಯಾಸ	:	ಎಂ.ಎ. ಕನ್ನಡ, ಮೈಸೂರು ವಿಶ್ವವಿದ್ಯಾಲಯ, ೧೯೭೧ ಪಿಎಚ್.ಡಿ. ಬೆಂಗಳೂರು ವಿಶ್ವವಿದ್ಯಾಲಯ, ೧೯೮೭
ವೃತ್ತಿ	:	ಕನ್ನಡ ಉಪನ್ಯಾಸಕಿ
ಮೊದಲ ಕಾದಂಬರಿ	:	ದ್ರೌಪದಿ (೧೯೯೬)
ಸಂಶೋಧನ ಕೃತಿ	:	ದ್ರೌಪದಿ ಒಂದು ಅಧ್ಯಯನ (೧೯೯೬)
ಲಭಿಸಿದ ಪ್ರಶಸ್ತಿಗಳು	:	ಅತ್ತಿಮಬ್ಬೆ ಪ್ರಶಸ್ತಿ (ದ್ರೌಪದಿ ಕಾದಂಬರಿಗೆ) (೧೯೯೭) ಗೊರೂರು ಪ್ರಶಸ್ತಿ (ಉಳಿದಿದ್ದು ಆಕಾಶ, ಕವನ ಸಂಕಲನ) (೨೦೦೦) ಕಾವ್ಯಾನಂದ ಪುರಸ್ಕಾರ ಪ್ರಶಸ್ತಿ (ಸ್ತ್ರೀವಾದದ ಪ್ರಸ್ತುತತೆ ಪ್ರಬಂಧ ಸಂಕಲನ), (೨೦೦೧) ಮುದ್ದಣ ಕಾವ್ಯ ಪ್ರಶಸ್ತಿ (ಭೂವಿ ಕೃತಿಗೆ) (೨೦೦೨) ಗೀತಾ ದೇಸಾಯಿ ದತ್ತಿನಿಧಿ ಪ್ರಶಸ್ತಿ (ಯಶೋಧರ ಕಾದಂಬರಿ) (೨೦೦೪) ಸಾವಿತ್ರಮ್ಮ ಪ್ರಶಸ್ತಿ (ಕನ್ನಡ ರಾಮಾಯಣಗಳು) (೨೦೦೬) ಗೋಕಾಕ್ ವಿಮರ್ಶಾ ಪ್ರಶಸ್ತಿ (ಸಮನ್ವಯ ಕೃತಿಗೆ) (೨೦೦೬)

• • •

೨. ಆಕರ ಗ್ರಂಥಗಳು

ಅ. ಪ್ರಧಾನ ಆಕರಗಳು (ಎಸ್.ವಿ. ಪ್ರಭಾವತಿಯವರ ಪೌರಾಣಿಕ ಕಾದಂಬರಿಗಳು)

೧. ದ್ರೌಪದಿ; ೧೯೯೬; ನವಕರ್ನಾಟಕ ಪಬ್ಲಿಕೇಷನ್ಸ್; ಬೆಂಗಳೂರು.

೨. ಕುಂತಿ; ೧೯೯೭; ಪ್ರಭಾವತಿ ಪ್ರಕಾಶನ; ಬೆಂಗಳೂರು.

೩. ಅಹಲ್ಯಾ; ೧೯೯೯; ಪ್ರಭಾವತಿ ಪ್ರಕಾಶನ, ಬೆಂಗಳೂರು.

೪. ಸೀತಾ; ೨೦೦೦; ವಸಂತ ಪ್ರಕಾಶನ, ಬೆಂಗಳೂರು.

೫. ಶಾಕುಂತಲಾ; ೨೦೦೧; ಮುರುಳಿ ಪ್ರಕಾಶನ; ಬೆಂಗಳೂರು.

ಆ. ಎಸ್.ವಿ. ಪ್ರಭಾವತಿಯವರ ಇತರ ಕೃತಿಗಳು

೧. ಪ್ರಭಾವತಿ ಎಸ್.ವಿ.; ೧೯೯೨; ಕನ್ನಡ ಸಾಹಿತ್ಯದಲ್ಲಿ ದ್ರೌಪದಿ; ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೨. ಪ್ರಭಾವತಿ ಎಸ್.ವಿ.; ೧೯೯೩; ಮಳೆ ನಿಂತ ಮೇಲಿನ ಮರ; ಅನ್ವೇಷಣ ಪ್ರಕಾಶನ; ಬೆಂಗಳೂರು.

೩. ಪ್ರಭಾವತಿ ಎಸ್.ವಿ.; ೧೯೯೬; ದ್ರೌಪದಿ ಒಂದು ಅಧ್ಯಯನ; ಅಪರ್ಣಾ ಪ್ರಕಾಶನ; ಬೆಂಗಳೂರು.

೪. ಪ್ರಭಾವತಿ ಎಸ್.ವಿ.; ೧೯೯೯; ಉಳಿದಿದ್ದು ಆಕಾಶ; ಪ್ರಭಾವತಿ ಪ್ರಕಾಶನ; ಬೆಂಗಳೂರು.

೫. ಪ್ರಭಾವತಿ ಎಸ್.ವಿ.; ೨೦೦೦, ಯಶೋಧರಾ; ಪ್ರಭಾವತಿ ಪ್ರಕಾಶನ, ಬೆಂಗಳೂರು.

೬. ಪ್ರಭಾವತಿ ಎಸ್.ವಿ.; ೨೦೦೦; ಸ್ತ್ರೀವಾದದ ಪ್ರಸ್ತುತತೆ; ಪ್ರಭಾವತಿ ಪ್ರಕಾಶನ; ಬೆಂಗಳೂರು.

೭. ಪ್ರಭಾವತಿ ಎಸ್.ವಿ.; ೨೦೦೨; ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು; ಪ್ರಭಾವತಿ ಪ್ರಕಾಶನ; ಬೆಂಗಳೂರು.

೮. ಪ್ರಭಾವತಿ ಎಸ್.ವಿ.; ೨೦೦೪; ಹೊರಳು ನೋಟ, ವಸಂತ ಪ್ರಕಾಶನ; ಬೆಂಗಳೂರು.

೯. ಪ್ರಭಾವತಿ ಎಸ್.ವಿ.; ೨೦೦೫; ಚಿತ್ತ-ಭಿತ್ತಿ; ವಸಂತ ಪ್ರಕಾಶನ; ಬೆಂಗಳೂರು.

೧೦. ಪ್ರಭಾವತಿ ಎಸ್.ವಿ.; ೨೦೦೫; ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ; ಸಮುಖಿ ಪ್ರಕಾಶನ; ಬೆಂಗಳೂರು.

೧೧. ಪ್ರಭಾವತಿ ಎಸ್.ವಿ.; ಮತ್ತು ಹೆಚ್.ಎಲ್. ಪುಷ್ಪ (ಸಂ.); ೨೦೦೫; ಅವಲೋಕನ; ಸಮುಖ ಬುಕ್ ಹೌಸ್; ಬೆಂಗಳೂರು.

೧೨. ಪ್ರಭಾವತಿ ಎಸ್.ವಿ.; ೨೦೦೬; ಸಮನ್ವಯ; ಸಮುಖ ಪ್ರಕಾಶನ; ಬೆಂಗಳೂರು.

೧೩. ಪ್ರಭಾವತಿ ಎಸ್.ವಿ.; ೨೦೦೬; ಜಾಗತೀಕರಣ ಮತ್ತು ಮಹಿಳೆ; ಕನ್ನಡ ಸಾಹಿತ್ಯ ಪರಿಷತ್; ಬೆಂಗಳೂರು.

೧೪. ಪ್ರಭಾವತಿ ಎಸ್.ವಿ.; ೨೦೦೭; ಗಾರ್ಗಿ; ಅಕ್ಕ ಪ್ರಕಾಶನ; ಕುಣಿಗಲ್.

೧೫. ಪ್ರಭಾವತಿ ಎಸ್.ವಿ.; ೨೦೦೭; ಸಮಾದರ್ಶಿ; ರವಿ ಪ್ರಕಾಶನ; ಚಿತ್ರದುರ್ಗ.

೧೬. ಪ್ರಭಾವತಿ ಎಸ್.ವಿ.; ೨೦೦೮; ಹರಿಯುತಿರಲಿ ಬಿಡು; ಅಕ್ಕ ಪ್ರಕಾಶನ; ಬೆಂಗಳೂರು.

೩. ಅನುಷಂಗಿಕ ಆಕರಗಳು

೧೭. ಆರ್ಯಾಂಬ ಪಟ್ಟಾಭಿ (ಸಂ.); ೨೦೦೪; ಮಹಿಳಾ ಸಾಹಿತ್ಯ ಸಮೀಕ್ಷೆ; ಸಂವಹನ; ಮೈಸೂರು.

೧೮. ಗುರುಪಾದ ಮರಿಗುದ್ದಿ (ಸಂ); ೨೦೦೧, ಗುಬ್ಬಿ ಮಲ್ಲಣಾರ್ಯ ಕವಿಯ ವೀರಶೈವಾಮೃತ ಪುರಾಣ ವಿವೇಚನೆ; ನಿಜಲಿಂಗೇಶ್ವರ ಗ್ರಂಥಮಾಲೆ; ಬೆಳಗಾವಿ.

೧೯. ಗೋಪಾಲ ಕೃಷ್ಣಯ್ಯ ಕೆ.ಎಲ್.; ೧೯೮೭; ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ; ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೨೦. ಗೋಪಾಲಕೃಷ್ಣಯ್ಯ ಕೆ.ಎಲ್.; ೧೯೯೦; ಪುರಾಣ; ಕನ್ನಡ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೨೧. ದೇಜಗೌ; ೨೦೦೩; ಮಹಾಕಾವ್ಯ ಪರಂಪರೆ ಮತ್ತು ಇತರ ಲೇಖನಗಳು; ಅಂಕಿತ ಪ್ರಕಾಶನ; ಬೆಂಗಳೂರು.

೨೨. ನಾಗಭೂಷಣಸ್ವಾಮಿ ಓ.ಎಲ್.; ೧೯೯೩; ಪುರಾಣ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ನಾರಾಯಣಾಚಾರ್ಯ ಕೆ.ಎಸ್.; ೧೯೯೨; ಶ್ರೀ ಮಹಾಭಾರತ ಪಾತ್ರ ಪ್ರಪಂಚ; ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೨೪. ನಾರಾಯಣಾಚಾರ್ಯ ಕೆ.ಎಸ್.; ೧೯೯೯; ಶ್ರೀರಾಮಾಯಣ ಪಾತ್ರ ಪ್ರಪಂಚ; ರಾಜಲಕ್ಷ್ಮಿ ಪ್ರಕಾಶನ; ಬೆಂಗಳೂರು.

೨೫. ನಿರುಪಮಾ; ೨೦೦೫; ಶ್ರೀ ಮಹಾಭಾರತ; ವಸಂತ ಪ್ರಕಾಶನ; ಬೆಂಗಳೂರು.

೨೬. ಬೆನಗಲ್ ರಾಮರಾವ್ ಮತ್ತು ಪಾನ್ಯಂಸುಂದರಶಾಸ್ತ್ರೀ ವಿದ್ವಾನ್; ೧೯೬೬; ಪುರಾಣನಾಮ ಚೂಡಾಮಣಿ; ಮೈಸೂರು ವಿಶ್ವದ್ಯಾನಿಲಯ; ಮೈಸೂರು.

೨೭. ಮಂಜುನಾಥ ಬೇವಿನಕಟ್ಟಿ (ಸಂ); ೨೦೦೮; ರಾಮಾಯಣ ಮರುದರ್ಶನ; ಕನ್ನಡ ವಿಶ್ವವಿದ್ಯಾಲಯ; ಹಂಪಿ.

೨೮. ಮಣಿಮಾಲಿನಿ, ವಿ.ಕೆ.; ೧೯೯೬; ದ್ರೌಪದೀ ಸಮೀಕ್ಷೆ; ಕನ್ನಡ ವಿಭಾಗ; ಮುಂಬಯಿ ವಿಶ್ವವಿದ್ಯಾಲಯ; ಮುಂಬಯಿ.

೨೯. ಮಲ್ಲೇಪುರಂ ಜಿ. ವೆಂಕಟೇಶ; ೧೯೯೩; ಸಾಹಿತ್ಯ ಮತ್ತು ಪುರಾಣ; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೩೦. ಯಜ್ಞನಾರಾಯಣ ಉಡುಪಿ; ೨೦೦೮; ಪುರಾಣ ಭಾರತ ಕೋಶ; ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೩೧. ರಮೇಶ್ ಜಿ.ಕೆ.; ೨೦೦೩; ಕನ್ನಡ ಪೌರಾಣಿಕ ಕಾದಂಬರಿಕಾರರು; ಕನ್ನಡ ವಿಶ್ವವಿದ್ಯಾಲಯ; ಹಂಪಿ.

೩೨. ರಹಮತ್ ತರೀಕೆರೆ; ೧೯೯೩; ಪ್ರತಿ ಸಂಸ್ಕೃತಿ; ಅಭಿನವ ಪ್ರಕಾಶನ; ಬೆಂಗಳೂರು.

೩೩. ರಾಮಚಂದ್ರೇಗೌಡ ಹಿ.ಶಿ.; ೧೯೯೮; ಜಾನಪದ ಸಾಂಸ್ಕೃತಿಕ ಆಯಾಮಗಳು; ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೩೪. ಲಕ್ಷ್ಮೀನಾರಾಯಣ ಭಟ್ಟ (ಸಂ); ೧೯೯೭; ಅನನ್ಯ ಗೋಪಾಲಕೃಷ್ಣ ಅಡಿಗರ ಸಮಗ್ರ ಕಾವ್ಯದ ಪರಿಶೀಲನೆ; ಕ್ಷಮಾ ಪ್ರಕಾಶನ; ಬೆಂಗಳೂರು.

೩೫. ವಿದ್ಯಾಶಂಕರ ಎಸ್.; ೨೦೦೬; ವೀರಶೈವ ಪುರಾಣಗಳು ಒಂದು ಅಧ್ಯಯನ; ಪ್ರಿಯದರ್ಶಿನಿ ಪ್ರಕಾಶನ; ಬೆಂಗಳೂರು.

೩೬. ವೀರಣ್ಣದಂಡೆ ಮತ್ತು ಶ್ರೀಪಾದಶೆಟ್ಟಿ (ಸಂ); ೨೦೦೬; ಸುವರ್ಣ ಜಾನಪದ ಲೇಖನಗಳು; ಕನ್ನಡ ಸಂಸ್ಕೃತಿ ಇಲಾಖೆ; ಬೆಂಗಳೂರು.

೩೭. ಶೇಷಗಿರಿರಾವ್ ಎಲ್.ಎಸ್.; (ಸಂ), ೧೯೯೩; ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ; ಉದಯಬಾನು ಕಲಾಸಂಘ ಪ್ರಕಾಶನ; ಬೆಂಗಳೂರು.

೩೮. ಶ್ರೀಧರ ಹೆಗಡೆ ಭದ್ರನ್; ೨೦೦೭; ಆಧುನಿಕ ಕನ್ನಡ ಮಹಾಕಾವ್ಯಗಳು; ಅಭಿನವ ಪ್ರಕಾಶನ; ಬೆಂಗಳೂರು.

೩೯. ಶ್ರೀಮತಿ ಹೆಚ್.ಎಸ್. (ಸಂ); ೨೦೦೬; ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ; ಕನ್ನಡ ವಿಶ್ವವಿದ್ಯಾಲಯ; ಹಂಪಿ.

೪೦. ಹಾಲತಿ ಸೋಮಶೇಖರ್; ೨೦೦೭; ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ; ವಿಸ್ಮಯ ಪ್ರಕಾಶನ; ಮೈಸೂರು.

• • •